ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಸೆಪ್ಟಂಬರ್ 29, 2024

ಸಂಪುಟ : 51 ಸಂಚಿಕೆ : 137 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







## ಆರೋಗ್ಯಕರ ಜೀವನಕ್ಕೆ ಕ್ರೀಡೆ ಸಹಕಾರಿ




ದಾವಣಗೆರೆ, ಸೆ. 28- ದೈಹಿಕ, ಮಾನಸಿಕ ಸದೃಢತೆ ಹಾಗೂ ಆರೋಗ್ಯಕರ ಜೀವನಕ್ಕಾಗಿ ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯರಾಗಿರಬೇಕೆಂದು ಮಹಾನಗರ ಪಾಲಿಕೆ ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್ ಹೇಳಿದರು.

ನಗರದ ಕೆ.ಇ.ಬಿ. ಸಮುದಾಯ ಭವನದ ಆವರಣದಲ್ಲಿನ ಇಂಜಿನಿಯರ್ ಭವನದಲ್ಲಿ ಹಮ್ಮಿಕೊಂಡಿದ್ದ ಮೂರನೇ ರಾಷ್ಟ್ರಮಟ್ಟದ ಮಾಸ್ಟರ್ಸ್ ವೇಯ್ಟ್ ಲಿಫ್ಟಿಂಗ್ ಹಾಗೂ ಪವರ್ ಲಿಫ್ಟಿಂಗ್ ಪ್ಯಾನ್ ಇಂಡಿಯಾ ಸ್ಪರ್ಧಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದಿನ ನಿತ್ಯ ದೈಹಿಕ ಆಟೋಟಗಳಿಗೆ ಹೆಚ್ಚು ಸಮಯ ನೀಡಿದಲ್ಲಿ ಮನುಷ್ಯನ ಆಯುಷ್ಯ ವೃದ್ಧಿಯಾಗುತ್ತದೆ ಎಂದರು.

ಸ್ಪರ್ಧೆಯಲ್ಲಿ 80 ವರ್ಷದವರು ಕ್ರೀಡಾಪಟುಗಳ ಕ್ರಿಯಾಶೀಲತೆ ಮತ್ತು ಜೀವನೋತ್ಸಾಹ ನೋಡಿದರೆ ಅತ್ಯಂತ ಸಂತೋಷ ಉಂಟಾಗುತ್ತದೆ. ವೇಯ್ಟ್ ಲಿಫ್ಟಿಂಗ್ ಹಾಗೂ (2ನೇ ಪುಟಕ್ಕೆ)

## ಮುಡಾ: ವೇಣುಗೋಪಾಲ್-ಖರ್ಗೆ ಚರ್ಚೆ

ಬೆಂಗಳೂರು, ಸೆ. 28 - ಬಿಡಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಕ್ಕಟ್ಟಿಗೆ ಸಿಲುಕಿರುವ ಬೆನ್ನಲ್ಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪಕ್ಷದ ಮುಂದಿನ ನಡೆಯ ಬಗ್ಗೆ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ನಗರಕ್ಕೆ ಕರೆಸಿಕೊಂಡು ಚರ್ಚೆ ಮಾಡಿದ್ದಾರೆ.

ಇದೇ ಸಮಯದಲ್ಲಿ ಉಭಯ ನಾಯಕರು, ರಾಜ್ಯದ ಪ್ರಮುಖ ಮುಖಂಡರು ಮತ್ತು ಸಚಿವರ ಜೊತೆಯೂ ಮುಖಾಮುಖಿ ಮಾತನಾಡಿದ್ದಾರೆ.

ಸಿದ್ದರಾಮಯ್ಯ ಅವರಿಗೆ ಕಾನೂನು ಸಂಕಷ್ಟ ಎದುರಾದರೆ, ಮುಂದೇನು ಮಾಡಬೇಕೆಂಬ ಬಗ್ಗೆ ಖರ್ಗೆ



ಮುಂದಾಲೋಚನೆಯಲ್ಲಿ ತೊಡಗಿದ್ದಾರೆ. ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಹೈಕೋರ್ಟ್ ಹಾಗೂ ಜನಪ್ರತಿನಿಧಿಗಳ ನ್ಯಾಯಾಲಯಗಳ ತೀರ್ಪು ಹೊರಬರುತ್ತಿದ್ದಂತೆ ಕೇರಳ ಪ್ರವಾಸದಲ್ಲಿದ್ದ ವೇಣುಗೋಪಾಲ್ ಅವರನ್ನು ನಗರಕ್ಕೆ ಕರೆಸಿಕೊಂಡು ಎಲ್ಲಾ ಬೆಳವಣಿಗೆ ಕುರಿತು ಸುದೀರ್ಘ ಚರ್ಚೆ ಮಾಡಿದ್ದಾರೆ.

ತದನಂತರ ರಾಜ್ಯದ ಆಯ್ದ ಕೆಲವು ಹಿರಿಯ ಮುಖಂಡರೊಂದಿಗೆ, ಇಂತಹ ಪರಿಸ್ಥಿತಿಯಲ್ಲಿ ಮುಂದಿನ ನಡೆಯ ಬಗ್ಗೆ ಮಾಹಿತಿ ಪಡೆದಿದ್ದಾರೆ.

ಸಚಿವರಷ್ಟೇ ಅಲ್ಲದೆ, ವಿಧಾನಸಭೆಯ ಕೆಲವು ಆಯ್ದ ಶಾಸಕರ ಜೊತೆಯೂ ಖರ್ಗೆ ಮತ್ತು ವೇಣುಗೋಪಾಲ್ ಮಾತನಾಡಿದ್ದಾರೆ. ಇಂತಹ ಸನ್ನಿವೇಶದಲ್ಲಿ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಯಾವುದೇ ಮಾತುಕತೆ ನಡೆಸಿಲ್ಲ. ರಾಜಧಾನಿಯಲ್ಲಿ ನಡೆಯುತ್ತಿರುವ ಈ (4ನೇ ಪುಟಕ್ಕೆ)

## ಸೀತಾರಾಮನ್ ವಿರುದ್ಧ ಎಫ್.ಐ.ಆರ್

ಬೆಂಗಳೂರು, ಸೆ. 28 – ಚುನಾವಣಾ ಬಾಂಡ್ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧ ಇಲ್ಲಿನ ನ್ಯಾಯಾಲಯದ ನಿರ್ದೇಶನದಂತೆ ಎಫ್.ಐ.ಆರ್. ದಾಖಲಿಸಲಾಗಿದೆ.



ಎಫ್.ಐ.ಆರ್. ದಾಖಲಿಸುವಂತೆ ನಿನ್ನೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿತ್ತು. ಅಧಿಕಾರ ದುರುಪಯೋಗಪಡಿಸಿಕೊಂಡು ಚುನಾವಣಾ ಬಾಂಡ್ ಪಡೆದ ಆರೋಪದ ಮೇಲೆ ಎಫ್ಐಆರ್ ದಾಖಲಾಗಿದೆ.

ಐಪಿಸಿ ಸೆಕ್ಷನ್ 384, 120ಬಿ ಹಾಗೂ 34 ಅನ್ವಯ ಪ್ರಕರಣ ದಾಖಲಿಸಲಾಗಿದೆ. ನಿರ್ಮಲಾ ಸೀತಾರಾಮನ್, ಜಾರಿ ನಿರ್ದೇಶನಾಲಯದ ಅಧಿಕಾರಿಗಳು, ರಾಜ್ಯ ಬಿಜೆಪಿ ಪದಾಧಿಕಾರಿಗಳು ಹಾಗೂ ರಾಷ್ಟ್ರ ಬಿಜೆಪಿ ಪದಾಧಿಕಾರಿಗಳ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಬಿಜೆಪಿ ನಾಯಕ ನಳಿನ್ ಕುಮಾರ್ ಕಟೀಲ್ ಅವರನ್ನೂ ಎಫ್.ಐ.ಆರ್.ನಲ್ಲಿ (2ನೇ ಪುಟಕ್ಕೆ)

## ಬಾಸ್ಮತಿಯೇತರ ಅಕ್ಕಿ ರಫ್ತು ನಿರ್ಬಂಧ ಸಡಿಲಿಕೆ

ನವದೆಹಲಿ, ಸೆ. 28 – ಬಾಸ್ಮತಿಯೇತರ ಅಕ್ಕಿ ರಫ್ತಿನ ಮೇಲೆ ಹೇರಲಾಗಿದ್ದ ನಿರ್ಬಂಧವನ್ನು ಕೇಂದ್ರ ಸರ್ಕಾರ ಸಡಿಲಿಸಿದೆ. ಟನ್‌ಗೆ 490 ಡಾಲರ್‌ಗಿಂತ ಹೆಚ್ಚಿನ ಮೊತ್ತದ ಅಕ್ಕಿ ರಫ್ತು ಮಾಡಲು ಅನುಮತಿ ನೀಡಿದೆ.

ಜುಲೈ 20, 2023ರ ನಂತರ ಅಕ್ಕಿ ರಫ್ತಿನ ಮೇಲೆ ನಿಷೇಧ ಹೇರಲಾಗಿತ್ತು. ದೇಶೀಯ ಮಾರುಕಟ್ಟೆಯಲ್ಲಿ ಅಕ್ಕಿ ಲಭ್ಯತೆ ಹೆಚ್ಚಿಸಲು ಈ ಕ್ರಮ ತೆಗೆದುಕೊಳ್ಳಲಾಗಿತ್ತು.

## ಬಾಂಗ್ಲಾ: ಹಿಂದೂಗಳ ರಕ್ಷಣೆಗೆ ಪ್ರತ್ಯೇಕ ಪಕ್ಷ

**ಬಾಂಗ್ಲಾದೇಶದ ಹಿಂದೂ ಸಮುದಾಯದ ನಾಯಕರು ಅಭಿಪ್ರಾಯ**

ಢಾಕಾ, ಸೆ. 28 – ಹಿಂದೂಗಳ ಹಕ್ಕು ಹಾಗೂ ಸುರಕ್ಷತೆ ಮತ್ತು ರಾಜಕೀಯ ಪ್ರಾತಿನಿಧ್ಯದ ಸಲುವಾಗಿ ಹಿಂದೂಗಳು ಪ್ರತ್ಯೇಕ ಪಕ್ಷ ಸ್ಥಾಪಿಸಬೇಕು ಎಂದು ಬಾಂಗ್ಲಾದೇಶದ ಹಿಂದೂ ಸಮುದಾಯದ ನಾಯಕರು ಅಭಿಪ್ರಾಯ ಪಟ್ಟಿದ್ದಾರೆ.

ಬಾಂಗ್ಲಾದೇಶ್ ಹಿಂದೂ ಬುದ್ಧಿಸ್ಟ್ ಕ್ರಿಶ್ಚಿಯನ್ ಯುನಿಟಿ ಕೌನ್ಸಿಲ್ (ಬಿ.ಹೆಚ್.ಬಿ.ಸಿ.ಒ.ಪಿ.) ಹಾಗೂ ಇತರೆ ಸಂಘಟನೆಗಳ ಮುಖಂಡರು ಪ್ರತ್ಯೇಕ ರಾಜಕೀಯ ಪಕ್ಷ ಸ್ಥಾಪಿಸುವ, ಇಲ್ಲವೇ ಸಂಸತ್ತಿನಲ್ಲಿ ಮೀಸಲಾತಿ ಪಡೆಯುವ ಕುರಿತು ಚರ್ಚೆ ಆರಂಭಿಸಿದ್ದಾರೆ.

ಈಗಿರುವ ಪರಿಸ್ಥಿತಿಯಲ್ಲಿ ಮೂರು ಆಯ್ಕೆಗಳಿವೆ. 1954ರ ಪ್ರತ್ಯೇಕ ಚುನಾವಣಾ ವ್ಯವಸ್ಥೆಗೆ ಮರಳುವುದು, ಹಿಂದೂಗಳಿಗೆ ಪ್ರತ್ಯೇಕ ಪಕ್ಷ ಸ್ಥಾಪಿಸುವುದು ಇಲ್ಲವೇ ಸಂಸತ್ತಿನಲ್ಲಿ ಅಲ್ಪಸಂಖ್ಯಾತರಿಗೆ ಮೀಸಲಾತಿ ಕಲ್ಪಿಸುವುದು ಎಂದು ಬಿ.ಹೆಚ್.ಬಿ.ಸಿ.ಒ.ಪಿ. ಅಧ್ಯಕ್ಷ ಕಾಜಲ್ ದೇಬನಾಥ್ ಹೇಳಿದ್ದಾರೆ.

ಅವಾಮಿ ಲೀಗ್ ನಾಯಕಿ ಶೇಖ್ ಹಸೀನಾ ಅವರು ಆಗಸ್ಟ್ 5ರಂದು ಪ್ರಧಾನ ಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ ನಂತರ ಹಿಂದೂ ಸಮುದಾಯದ ಮೇಲಿನ ಹಿಂಸಾಚಾರಗಳು ಹೆಚ್ಚಾಗಿವೆ.

ಹಿಂದೂಗಳ ಮೇಲೆ ದಾಳಿ ನಡೆದ 2,010 ಘಟನೆಗಳನ್ನು ಗುರುತಿಸಲಾಗಿದೆ. ಇದರಲ್ಲಿ ಹತ್ಯೆ ಹಾಗೂ ದೈಹಿಕ ಹಲ್ಲೆಯಿಂದ ಹಿಡಿದು ಲೈಂಗಿಕ ದಾಳಿ, ದೇವಾಲಯಗಳ ಮೇಲೆ ದಾಳಿ ಹಾಗೂ ಆಸ್ತಿಗಳ ನಾಶ ಸೇರಿವೆ ಎಂದು ದೇಬನಾಥ್ ತಿಳಿಸಿದ್ದಾರೆ. ಆದರೆ, ಬಾಂಗ್ಲಾದೇಶ ಸರ್ಕಾರ ದಾಳಿಗಳ ಕುರಿತು ಯಾವುದೇ ಅಧಿಕೃತ ಅಂಕಿ-ಅಂಶಗಳನ್ನು ಹೊಂದಿಲ್ಲ.

ರಾಜಕೀಯ ಪಕ್ಷ ಸ್ಥಾಪಿಸುವ ಕುರಿತು ಚರ್ಚೆಗಳು ನಡೆಯುತ್ತಿವೆ. ಇನ್ನೂ ಯಾವುದೇ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ. ಮುಂದಿನ ಹೆಜ್ಜೆ ಕಾದು ನೋಡಬೇಕಿದೆ ಎಂದು ಹಿಂದೂ ಸಮುದಾಯದ ನಾಯಕ ರಂಜನ್ ಕರ್ಮಕರ್ ಹೇಳಿದ್ದಾರೆ.

1971ರಲ್ಲಿ ವಿಮೋಚನಾ ಸಮರ ನಡೆಯುವಾಗ ಬಾಂಗ್ಲಾದೇಶದಲ್ಲಿ ಹಿಂದೂಗಳ ಸಂಖ್ಯೆ ಶೇ.22ರಷ್ಟಿತ್ತು. ಈಗ ಅವರ ಪ್ರಮಾಣ ಶೇ.8ಕ್ಕೆ ಕುಸಿದಿದೆ. ಸಾಮಾಜಿಕ – ಆರ್ಥಿಕ ದಮನ ಹಾಗೂ ವ್ಯಾಪಕ ಹಿಂಸಾಚಾರಗಳು ಇದಕ್ಕೆ ಕಾರಣ. ಈ ಹಿನ್ನೆಲೆಯಲ್ಲಿ ರಾಜಕೀಯ ಶಕ್ತಿ ಬಲಪಡಿಸಿಕೊಳ್ಳುವ ಅಗತ್ಯವಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. (2ನೇ ಪುಟಕ್ಕೆ)






ವಿದೇಶ ಪ್ರವಾಸ ಶುಭ ಹಾರೈಕೆಗಳು



ಸಿದ್ದೇಶ್ವರ ಟ್ರೇಡರ್ಸ್ ಮತ್ತು ಸಿದ್ದೇಶ್ವರ ಅಂಡ್ ಕೋ
ಮಾಲೀಕರಾದ
ಶ್ರೀಮತಿ ರೂಪ ಮತ್ತು ಎನ್. ಗಣೇಶಣ್ಣ
ಇವರು ದಿನಾಂಕ : 30.09.2024ರ ಸೋಮವಾರ ಬೆಳಿಗ್ಗೆ ಥೈಲ್ಯಾಂಡ್ ಪ್ರವಾಸ ಕೈಗೊಳ್ಳುತ್ತಿರುವ ಇವರಿಗೆ ಶುಭ ಹಾರೈಕೆಗಳು.
ಶುಭ ಕೋರುವವರು :
ಹರಪನಹಳ್ಳಿ ಶೆಟ್ರು ವಂಶಸ್ಥರು, ದಾವಣಗೆರೆ.
ಮುಂಡಾಸದ ವಂಶಸ್ಥರು, ಮೆಡ್ಲೇರಿ
ಸಿದ್ದೇಶ್ವರ ಟ್ರೇಡರ್ಸ್ ಸಿಬ್ಬಂದಿ ವರ್ಗ, ದಾವಣಗೆರೆ.
ಸಿದ್ದೇಶ್ವರ ಅಂಡ್ ಕೋ. ಸಿಬ್ಬಂದಿ ವರ್ಗ, ದಾವಣಗೆರೆ.
ಸೋಮನಹಳ್ಳಿ ಟ್ರೇಡರ್ಸ್, ದಾವಣಗೆರೆ.
ಹೆಚ್.ಜಿ.ಎಸ್. ಕ್ಯಾಟರಿಂಗ್ ಗ್ರೂಪ್ಸ್, ದಾವಣಗೆರೆ.
ಮತ್ತು ಗೆಳೆಯರ ಬಳಗ



# ಅವಧಿ ಮುಗಿದ ಆಹಾರ ಪದಾರ್ಥಗಳ ಮಾರಾಟ: ದೂರು ದಾಖಲು



ಹರಪನಹಳ್ಳಿ

ಹರಪನಹಳ್ಳಿ, ಸೆ. 28 - ಸಾರ್ವಜನಿಕರ ದೂರಿನ ಅನ್ವಯ ಫುಡ್ ಸೇಫ್ಟಿ ಅಧಿಕಾರಿ ಕಿರಣ್ ಕುಮಾರ್ ಮತ್ತು ಅವರ ತಂಡ ದಿಢೀರ್ ದಾಳಿ ನಡೆಸಿ ಅವಧಿ ಮೀರಿದ ಆಹಾರ ಉತ್ಪನ್ನಗಳನ್ನು ತಮ್ಮ ವಶಕ್ಕೆ ಪಡೆದ ಘಟನೆ ಹರಪನಹಳ್ಳಿ ಪಟ್ಟಣದಲ್ಲಿ ಜರುಗಿದೆ .

ಸಾರ್ವಜನಿಕ ಆಸ್ಪತ್ರೆಗೆ ಬಂದಿದ್ದ ರೋಗಿಯ ಸಂಬಂಧಿಕರಾದ ರಾಯದುರ್ಗದ ಪ್ರಕಾಶ, ಹನುಮಂತ, ಮತ್ತು ಶಿವರಾಜ್ ಅವಶ್ಯಕ ಬಿಸ್ಕೆಟ್, ರಸ್ಕ್, ಬನ್, ಟೊಮೆಟೋ ಸಾಸ್, ತಂಪುಪಾನಿಯ ಹಾಗೂ ಇತರೆ ಆಹಾರ ಪೊಟ್ಟಣಗಳನ್ನು ಖರೀದಿಸಲು ಬಂದಿದ್ದು, ಬಹುತೇಕ ವಸ್ತುಗಳು ಅವಧಿ ಮೀರಿದ್ದನ್ನು ಗಮನಿಸಿ ಅಧಿಕಾರಿಗಳಿಗೆ ದೂರು ನೀಡಿದ್ದರ ಹಿನ್ನೆಲೆಯಲ್ಲಿ ಸ್ಥಳಕ್ಕೆ ಆಗಮಿಸಿದ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿ ಮಳಿಗೆಯಲ್ಲಿದ್ದ ಹಲವಾರು ವಸ್ತುಗಳನ್ನು ತಮ್ಮ ವಶಕ್ಕೆ ಪಡೆದರು.

ರಾಯದುರ್ಗದ ಪ್ರಕಾಶ್ ಮಾತನಾಡಿ, ರಾಜ್ಯ ಹೆದ್ದಾರಿ ಪಕ್ಕದಲ್ಲೇ ಇರುವ ಸಾರ್ವಜನಿಕ ಆಸ್ಪತ್ರೆಗೆ ಅಣತಿ ದೂರದಲ್ಲಿರುವ ತೀಥಾಸ್ ಸೂಪರ್ ಮಾರ್ಕೆಟ್‌ನಲ್ಲಿ ರೋಗಿಗಳಿಗೆ ಮತ್ತು ಜೊತೆಯಲ್ಲಿದ್ದವರಿಗೂ ಅಗತ್ಯ ಆಹಾರ ಪದಾರ್ಥಗಳನ್ನು ಖರೀದಿಗೆ ಬರುವುದು ಸಾಮಾನ್ಯವಾಗಿದೆ. ಆದರೆ ಮೊದಲೇ ಅನಾರೋಗ್ಯದಿಂದ ಬಂದ ರೋಗಿಗಳಿಗೆ ಅವಧಿ ಮೀರಿದ ಆಹಾರ ಪದಾರ್ಥಗಳನ್ನು ತಿಂದು ಇನ್ನೂ ಆರೋಗ್ಯ ಹದಗೆಡುತ್ತದೆ. ಈ ಬಗ್ಗೆ ಮಳಿಗೆ ಮಾಲೀಕರು ಎಚ್ಚರಿಕೆ ವಹಿಸದೇ ನಿರ್ಲಕ್ಷ ಧೋರಣೆ ಹೊಂದಿದ್ದು ವಿಷಾದನೀಯ. ಕೂಡಲೇ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಟಿ.ವೆಂಕಟೇಶ್ ಮಾತನಾಡಿ, ಜವಾಬ್ದಾರಿ ಇಲ್ಲದ ತೀಥಾಸ್ ಸೂಪರ್ ಮಾರ್ಕೆಟ್ ಮಾಲೀಕರಿಗೆ ಎಚ್ಚರಿಕೆ ನೀಡದೇ ಶಾಪ್‌ನ್ನು ಬಂದ್ ಮಾಡಬೇಕು. ಜನರ ಜೀವದ ಜೊತೆ ಚಲ್ಲಾಟವಾಡುತ್ತಿರುವವರಿಗೆ ತಕ್ಕ ಪಾಠ ಕಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಫುಡ್ ಸೇಫ್ಟಿ ಅಧಿಕಾರಿ ಕಿರಣ್ ಕುಮಾರ್ ಮಾತನಾಡಿ ಸಾರ್ವಜನಿಕರ ದೂರಿನನ್ವಯ ಸ್ಥಳಕ್ಕೆ ಬೇಟಿ ನೀಡಿ ಪರಿಶೀಲಿಸಿ ಅವಧಿ ಮೀರಿದ ಆಹಾರ ಪೊಟ್ಟಣಗಳನ್ನ ವಶಕ್ಕೆ ಪಡೆದಿದ್ದೇವೆ.

ಲ್ಯಾಬ್‌ಗೆ ಕಳಿಸಿ ಪರೀಕ್ಷೆಗೆ ಒಳಪಡಿಸಲಾಗುವುದು. ಮುಂದೆ ಕಾನೂನು ಕ್ರಮ ಜರುಗಿಸಲಾಗುವುದು. ಗ್ರಾಹಕರೂ ಎಚ್ಚರಿಕೆಯಿಂದ ತಯಾರಾದ ದಿನಾಂಕ ಮತ್ತು ಅವಧಿ ಮೀರಿದ ದಿನಾಂಕ ಪರೀಕ್ಷಿಸಿ ಖರೀದಿಸಲು ಜಾಗ್ರತರಾಗಬೇಕು ಎಂದರು.

## ಪದವಾಣಿ-112

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.

| | | | | | | | | |
|---|---|---|---|---|---|---|---|---|
| ■ | ■ | 1 | | 2 | | 3 | ■ | ■ |
| ■ | ■ | | ■ | | ■ | | ■ | ■ |
| 4 | | | | ■ | 5 | | | 6 |
| | ■ | | ■ | ■ | ■ | | ■ | |
| 7 | | ■ | ■ | ■ | ■ | ■ | 8 | |
| | ■ | 9 | ■ | ■ | ■ | 10 | ■ | |
| 11 | | | | ■ | 12 | | | |
| ■ | ■ | | ■ | 13 | ■ | | ■ | ■ |
| ■ | ■ | 14 | | | | | ■ | ■ |

**ಎಡದಿಂದ ಬಲಕ್ಕೆ :**

1) ಮುಂಬಾಗಿಲು-ಇನ್ನೊಂದು ಪದ 5
4) ಮಂಗಳಗ್ರಹ 4
5) ಸಸ್ಯವನ್ನು ಭೂಮಿಯಲ್ಲಿ ಹಿಡಿದ ಭಾಗ 4
7) ಎರಡಕ್ಷರದ ಪತ್ರಿವ್ರತೆ 2
8) ಸಂಸ್ಕೃತದಲ್ಲಿ ಹೊಕ್ಕಳು 2
11) ಕೈಯಲ್ಲಿ ಹಿಡಿದ ಖಡ್ಗ 4
12) ಪ್ರಚಾರ ಮಾಡುವವ 4
14) ಬಡವರ ಬಾದಾಮಿಯದು 5

**ಮೇಲಿನಿಂದ ಕೆಳಕ್ಕೆ :**

1) ಆಸಕ್ತಿ ಶ್ರದ್ಧೆ 4
2) ಹೊರ ಭಾಗವಿದು 2
3) ಲೂಟಿ ಮಾಡು 4
4) ವ್ಯಾಯಾಮ ಮಾಡುವವನು 5
6) ಶಿವನಿಗೆ ಮಾಡುವ ಮಂಗಳ ಸ್ನಾನ 5
9) ಒಳ್ಳೆಯ ಪರಿಮಳ 4
10) ಚಾರ ಮಾಡಿದ ಎಣಿಕೆ ಉಲ್ಟಾ ಆಗಿದೆ 4
13) ಒಂಟಿ ಕುದುರೆಯ ಗಾಡಿ 2

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ – 111 ರ ಉತ್ತರಗಳು :**

**ಎಡದಿಂದ ಬಲಕ್ಕೆ : 1) ವಂದರಿ 3) ಪರಮ 5) ಯಾತ್ರೆ 6) ಕರ 7) ತಿರುಮಲೇಶ 11) ಕುಸುಮಾಕರ 14) ನಾಕ 15) ಕೂಪ 16) ನಗಾರಿ 17) ತಿಮಿರ.**

**ಮೇಲಿನಿಂದ ಕೆಳಕ್ಕೆ : 1) ವಂಶಾವಳಿ 2) ರಿಯಾಯಿತಿ 3) ಪರದೇಶ 4) ಮರೀಚಿಕೆ 8) ರುಮಾಸು (ಸುಮಾರು) 9) ಲೇಖಕ 10) ಗುಣಗಾನ 11) ಕುಲನಾರಿ 12) ರತಿಪತಿ 13) ನೀಲಾಂಬರಿ**

# ಮಲ್ಲನಾಯ್ಕನಹಳ್ಳಿಯ ನೈಸರ್ಗಿಕ ಕೃಷಿ ತೋಟಕ್ಕೆ ರಾಜನಹಳ್ಳಿ ಶ್ರೀಗಳ ಭೇಟಿ : ಮೆಚ್ಚುಗೆ



ಮಲೇಬೆನ್ನೂರು, ಸೆ. 28- ಮಲ್ಲನಾಯ್ಕನಹಳ್ಳಿ ಸಮೀಪದ ಶ್ರೀನಿವಾಸ ನಗರ ಕ್ಯಾಂಪಿನಲ್ಲಿ ಎಂಬಿಎ ಪದವೀಧರ ರಾಘವ ಅವರು ನೈಸರ್ಗಿಕ ಕೃಷಿ ಪದ್ಧತಿಯಲ್ಲಿ ಬೆಳೆಸಿರುವ ತೆಂಗಿನ ತೋಟ ಮತ್ತು ಭತ್ತದ ಗದ್ದೆಯನ್ನು ಶುಕ್ರವಾರ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ವೀಕ್ಷಿಸಿದರು.

ಕಳೆದ 18 ವರ್ಷಗಳಿಂದ ತಮ್ಮ ತೆಂಗಿನ ತೋಟ ಹಾಗೂ ಭತ್ತದ ಗದ್ದೆಯಲ್ಲಿ ನೈಸರ್ಗಿಕವಾಗಿ ಬೆಳೆಗಳನ್ನು ಬೆಳೆಯುತ್ತಿರುವ ನನಗೆ ನೈಸರ್ಗಿಕ ಕೃಷಿ ಜನಕ ಫೋಕಾವುಕ್ ಅವರ ಒಂದು ಹುಲ್ಲಿನ ಕ್ರಾಂತಿ ಪುಸ್ತಕ ಪ್ರೇರಣೆಯಾಗಿದೆ ಎಂದು ರಾಘವ ಅವರು ಸ್ವಾಮೀಜಿಯವರಿಗೆ ತಮ್ಮ ತೋಟವನ್ನು ಪರಿಚಯಿಸುವಾಗ ಹೇಳಿದರು.

ನೈಸರ್ಗಿಕ ಕೃಷಿಯಲ್ಲಿ ನಾವು ನೆಮ್ಮದಿ ಹಾಗೂ ಆರೋಗ್ಯ ಕಂಡುಕೊಂಡಿದ್ದೇವೆ. ವಿಷಮುಕ್ತ ಬೆಳೆಗಳನ್ನು ಬೆಳೆಯುವ ಮೂಲಕ ನಮ್ಮ ತೋಟದ ಮಣ್ಣನ್ನು ವಿಷಮುಕ್ತಗೊಳಿಸಿದ್ದೇವೆ. ನಾವು ಇದುವರೆಗೂ ತೋಟದಲ್ಲಿ ಕೊಳವೆ ಬಾವಿ ಕೊರೆಸಿಲ್ಲ. ಬಾವಿ ನೀರನ್ನೇ ತೋಟಕ್ಕೆ ಹಾಗೂ ನಮಗೆ ಬಳಸುತ್ತಿದ್ದೇವೆ.

ನೈಸರ್ಗಿಕ ಕೃಷಿ ಭೂಮಿಗೆ ತೇವಾಂಶ ಕೊಡುತ್ತದೆ. ಬೆಳೆಗಳಿಗೆ ನೀರಿಗಿಂತ ತೇವಾಂಶ ಬಹಳ ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಮಣ್ಣಿಗೆ ಬಿಸಿಲು, ಗಾಳಿ, ಮಳೆ ನೇರವಾಗಿ ತಲುಪದಂತೆ ವಾತಾವರಣವನ್ನು ಇಲ್ಲಿ ಸೃಷ್ಠಿ ಮಾಡಿದ್ದೇವೆ

ಜೋರಾಗಿ ಸುರಿಯುವ ಮಳೆ ನೆಲವನ್ನು ಗಟ್ಟಿಗೊಳಿಸುತ್ತದೆ. ಇದನ್ನು ತಪ್ಪಿಸಲು ಭೂಮಿಯಲ್ಲಿ ಹಸಿರು ಹೊದಿಕೆ ನಿರ್ಮಿಸಿದ್ದೇವೆ. ಇದರಿಂದಾಗಿ ಮಳೆ ತುಂತುರಾಗಿ ನೆಲಕ್ಕೆ ಬಿದ್ದು ಇಂಗುತ್ತದೆ. ತೋಟದ ಸುತ್ತಲು ಗಿಡ-ಮರಗಳನ್ನು ಬೆಳೆಸಿ, ಬೀಸುವ ಗಾಳಿ ವೇಗವನ್ನು ತಡೆದಿದ್ದೇವೆ ಎಂದು ರಾಘವ ಅವರು ಸ್ವಾಮೀಜಿ ಅವರಿಗೆ ತೋಟವನ್ನು ತೋರಿಸಿ ವಿವರಿಸಿದರು.

ಭದ್ರಾ ನಾಲೆಯಲ್ಲಿ ನೀರು ಇಲ್ಲದಾಗ ಮತ್ತು ಬರಗಾಲದ ವೇಳೆಯಲ್ಲೂ ನಮ್ಮ ತೋಟಕ್ಕೆ ಯಾವುದೇ ತೊಂದರೆ ಆಗಿಲ್ಲ. ಆಗ ಬಾವಿಯ ನೀರನ್ನೇ ಎಳೆದು ಗಿಡಗಳಿಗೆ ಬಿಂದಿಗೆ ಮೂಲಕ ಹಾಕಿದ್ದೇವು ಎಂದಾಗ ಸ್ವಾಮೀಜಿ ಅಚ್ಚರಿಪಟ್ಟರು.

ಕೃಷಿಯಷ್ಟೇ ನೈಸರ್ಗಿಕವಾಗಿದ್ದರೆ ಸಾಲದು, ನಮ್ಮ ಬದುಕೂ ನೈಸರ್ಗಿಕವಾಗಿರಬೇಕೆನ್ನುವ ರಾಘವ ಅವರು, ತಾವು ವಾಸಿಸುವ ಮನೆಯನ್ನೂ ನೈಸರ್ಗಿಕವಾಗಿ ಮತ್ತು ಊಟ-ಉಪಹಾರವನ್ನೂ ನೈಸರ್ಗಿಕವಾಗಿಟ್ಟು ಕೊಳ್ಳುವುದರ ಜೊತೆಗೆ ಮಕ್ಕಳಿಗೆ ವಿಶಿಷ್ಟ ಮತ್ತು ವರ್ಚಸ್ಸು ಎಂಬ ಹೆಸರುಗಳನ್ನು ಇಟ್ಟಿರುವುದು ಕೂಡಾ ನೈಸರ್ಗಿಕವಾಗಿದೆ ಎಂದು ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಅಮೃತ ಭೂಮಿಯಂತಿರುವ ರಾಘವ ಅವರ ತೋಟದಲ್ಲಿ ಸಸ್ಯ ಸಂಕುಲವಷ್ಟೇ ಅಲ್ಲ, ಪ್ರಾಣಿ, ಪಕ್ಷಿ, ಕೀಟಗಳೂ ಇದ್ದು, ಎಲ್ಲರ ಗಮನ ಸೆಳೆಯುತ್ತಿವೆ. ಪ್ರತಿ ತೆಂಗಿನ ಮರದಲ್ಲೂ ತೆಂಗಿನಕಾಯಿಯ ಹತ್ತಾರು ಗೊನೆಗಳನ್ನು ನೋಡಿ ತುಂಬಾ ಖುಷಿ ಆಯಿತೆಂದು ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಆನಂದಪ್ಪ ಹೇಳಿದರು.

ಇಲ್ಲಿರುವಷ್ಟು ಔಷಧಿ ಗುಣ ಹೊಂದಿರುವ ಗಿಡಗಳನ್ನು ನಾವು ಬೇರೆ ಎಲ್ಲೂ ನೋಡಿಲ್ಲ. ಅಷ್ಟೇ ಅಲ್ಲ, ಮನೆಗೆ ಬೇಕಾದ ಬಹುತೇಕ ಉತ್ಪನ್ನಗಳನ್ನು ಇಲ್ಲಿ ಬೆಳೆಯುತ್ತಿರುವುದು ಎಲ್ಲಾ ರೈತರಿಗೆ ಮಾದರಿಯಾಗಿದೆ ಎಂದು ರಾಘವ ದಂಪತಿಯನ್ನು ರಾಜನಹಳ್ಳಿ ಶ್ರೀಗಳು ಸನ್ಮಾನಿಸಿ, ಗೌರವಿಸಿದರು.

## ಹಿಂದೂಗಳ ರಕ್ಷಣೆಗೆ ಪ್ರತ್ಯೇಕ ಪಕ್ಷ

(1ನೇ ಪುಟದಿಂದ) ಆದರೆ, ಈ ರೀತಿ ಪ್ರತ್ಯೇಕ ಪಕ್ಷ ರಚಿಸುವುದರಿಂದ ಹಿಂದೂಗಳಿಗೆ ನೆರವಾಗದೇ ಇರಬಹುದು. ಇದರಿಂದ ಸೆಕ್ಯುಲರ್ ಮತಗಳು ಒಡೆದು, ಗೆಲುವು ದೊರಕದೇ ಇರಬಹುದು ಎಂದು ದೇಬನಾಥ್ ಹೇಳಿದ್ದಾರೆ.

ಹಿಂದೂಗಳು ಬಾಂಗ್ಲಾದಲ್ಲಿ ಹರಡಿದ್ದಾರೆ. ಕೆಲ ಪ್ರದೇಶಗಳಲ್ಲಿ ಹಿಂದೂ ಮತದಾರರು ಶೇ.35ರಷ್ಟಿದ್ದಾರೆ. ಬಹುತೇಕ ಪ್ರದೇಶಗಳಲ್ಲಿ ಮತದಾರರ ಪ್ರಮಾಣ ಶೇ.6-8ರಷ್ಟಿದೆ. ಈ ಹಿಂದೆ ಅವಾಮಿ ಲೀಗ್‌ನಿಂದ ಗೆದ್ದಿದ್ದ ಹಿಂದೂ ನಾಯಕರು ಹಿಂದೂ ಹಾಗೂ ಇತರೆ ಸಮುದಾಯದ ಬೆಂಬಲದಿಂದ ಗೆದ್ದಿದ್ದರು ಎಂದು ದೇಬನಾಥ್ ಹೇಳಿದ್ದಾರೆ.

ಆದರೆ, ಹಿಂದೂಗಳು ಪ್ರತ್ಯೇಕ ಪಕ್ಷ ಕಟ್ಟಿಕೊಂಡರೆ ಇತರೆ ಸಮುದಾಯದ ಮತಗಳು ದೊರೆಯದೇ ಇರಬಹುದು. ಇದರಿಂದ ಸಂಸತ್ತಿನಲ್ಲಿ ಪ್ರಾತಿನಿಧ್ಯ ಪಡೆಯುವ ಉದ್ದೇಶ ಈಡೇರುವುದಿಲ್ಲ ಎಂದು ದೇಬನಾಥ್ ಹೇಳಿದ್ದಾರೆ.

ಪ್ರತ್ಯೇಕ ಪಕ್ಷ ರಚಿಸಬೇಕೇ ಅಥವಾ ಈಗಿರುವ ಸೆಕ್ಯುಲರ್ ಪಕ್ಷಗಳ ಜೊತೆ ಕೈ ಜೋಡಿಸಬೇಕೇ ಎಂಬ ಬಗ್ಗೆಯೂ ಒಡಕಿನ ಅಭಿಪ್ರಾಯಗಳಿವೆ.

ಸಂಸತ್ತಿನಲ್ಲಿ ಮೀಸಲಾತಿ ಕಲ್ಪಿಸಬೇಕು ಎಂಬ ಬೇಡಿಕೆಯೂ ಹೊಸದೇ ನಲ್ಲ. ಈ ಹಿಂದೆ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲಾಗಿತ್ತು. ಇದೇ ರೀತಿಯ ಮೀಸಲಾತಿಯಿಂದ ಹಿಂದೂಗಳಿಗೆ ನೆರವಾಗಲಿದೆ ಎಂಬ ಅಭಿಪ್ರಾಯವಿದೆ.

ಈ ಹಿಂದಿನಿದಂಲೂ ಅವಾಮಿ ಲೀಗ್ ಸೆಕ್ಯುಲರ್ ನಿಲುವಿಗೆ ಹೆಸರಾಗಿತ್ತು. ಪಕ್ಷಕ್ಕೆ ಹಿಂದೂಗಳ ಬೆಂಬಲ ಸಾಕಷ್ಟಿತ್ತು. ಆದರೆ, ಹಸೀನಾ ನಿರ್ಗಮನದ ನಂತರ ಸೆಕ್ಯುಲರ್ ಶಕ್ತಿಗಳಿಗೆ ಹಿನ್ನಡೆಯಾಗಿದೆ. ಹಿಂದೂ ಸಮುದಾಯದ ಮೇಲೆ ವ್ಯಾಪಕ ದಾಳಿ ನಡೆದಿದೆ. ಆದರೆ, ಹಿಂದೂಗಳ ಮೇಲಿನ ದಾಳಿ ಕೋಮು ಸ್ವರೂಪದ್ದಲ್ಲ. ಹಿಂದೂಗಳು ಅವಾಮಿ ಲೀಗ್ ಬೆಂಬಲಿಸಿದ್ದರಿಂದ ರಾಜಕೀಯ ದಾಳಿ ನಡೆಯುತ್ತಿದೆ ಎಂದು ಹಂಗಾಮಿ ಸರ್ಕಾರದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನಸ್ ಹೇಳಿದ್ದಾರೆ.

## ಜನರಲ್ ಕೆ.ಎಸ್ ತಿಮ್ಮಯ್ಯ ನಗದು ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜು. 28 - ಎಸ್.ಎಸ್.ಎಲ್.ಸಿ ಮತ್ತು 2ನೇ ಪಿ.ಯು.ಸಿ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಗರಿಷ್ಠ ಅಂಕ ಪಡೆದ ಕರ್ನಾಟಕದ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ 'ಜನರಲ್ ಕೆ.ಎಸ್. ತಿಮ್ಮಯ್ಯ' ನಗದು ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಶುಲ್ಕ ರಹಿತ ಅರ್ಜಿಗಳನ್ನು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಶಿವಮೊಗ್ಗ ಕಚೇರಿಯಿಂದ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಅಕ್ಟೋಬರ್ 30 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08182-220925 ಸಂಪರ್ಕಿಸಬಹು ದೆಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

## ಇಸ್ರೇಲ್ ದಾಳಿಯಲ್ಲಿ ಹೆಜ್ಬೊಲ್ಲಾ ಕಮಾಂಡರ್, ಇರಾನ್ ಜನರಲ್ ಸಾವು

ದುಬೈ, ಸೆ. 28 – ಇರಾನ್ ಅರೆಸೇನಾ ಪಡೆಯಾದ ರೆವಲ್ಯೂಷನರಿ ಗಾರ್ಡ್ ಹಿರಿಯ ಜನರಲ್ ಅಬ್ಬಾಸ್ ನಿಲೋಫೊರುಶಾನ್ ಹಾಗೂ ಹೆಜ್ಬೊಲ್ಲಾ ಕಮಾಂಡರ್ ಹಸನ್ ನಸ್ರಲ್ಲ ಇಸ್ರೇಲ್ ನಡೆಸಿದ ದಾಳಿಯಲ್ಲಿ ಹತರಾಗಿದ್ದಾರೆ. ಪಶ್ಚಿಮದ ಜೊತೆ ಕದನ ವಿರಾಮ ಬಯಸುವುದಾಗಿ ಇರಾನ್ ಇತ್ತೀಚಿನ ದಿನಗಳಲ್ಲಿ ಹೇಳುತ್ತಾ ಬಂದಿದೆ. ಈ ದಾಳಿಯು ಅದರ ಪ್ರಯತ್ನಕ್ಕೆ ಹಿನ್ನಡೆಯಾಗಿದೆ. ಲೆಬನಾನ್ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ 58 ವರ್ಷದ ನಿಲೋಫುರುಶಾನ್ ಸಾವನ್ನಪ್ಪಿದ್ದಾರೆ. ಬ್ಯೂರತ್ ದಕ್ಷಿಣದಲ್ಲಿ ಶನಿವಾರ ಇಸ್ರೇಲ್ ನಡೆಸಿದ ದಾಳಿಗೆ ಸಿಲುಕಿ ನಸ್ರಲ್ಲ ಸೇರಿದಂತೆ ಹಲವು ಹೆಜ್ಬೊಲ್ಲಾ ಕಮಾಂಡರ್‌ಗಳು ಹತರಾಗಿದ್ದಾರೆ.



## ಅಂಜನಾಪುರ ಡ್ಯಾಮ್‌ಗೆ ಬಾಗಿನ

ದಾವಣಗೆರೆ, ಸೆ. 28 - ನಗರದ ವಜ್ರೇಶ್ವರಿ ಮಹಿಳಾ ಸಂಸ್ಥೆಯಿಂದ ಶಿಕಾರಿಪುರ ಹತ್ತಿರ ಇರುವ ಅಂಜನಾಪುರ ಡ್ಯಾಮ್‌ಗೆ ಸಂಸ್ಥೆಯಿಂದ ಬಾಗಿನ ಅರ್ಪಿಸಲಾಯಿತು. ಸಂಸ್ಥೆಯ ಸದಸ್ಯರುಗಳಾದ ಮಮತಾ, ಚಂದ್ರಮತಿ, ಗೀತಾ, ಮಂಜುಳಾ, ಸುಮಾ, ರತ್ನ, ಪ್ರೇಮ, ಚಂದ್ರಮ್ಮ, ವೀಣಾ, ಬಿ. ಗೀತಾ ಅಧ್ಯಕ್ಷರಾದ ವಿಜಯ ಅಕ್ಕಿ, ಕಾರ್ಯದರ್ಶಿ ಚಂದ್ರಿಕ ವೇಣುಗೋಪಾಲ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ನಾಳೆ ಭದ್ರಾ ಅಭಿಯಾನ ಪಾದಯಾತ್ರೆ

ದಾವಣಗೆರೆ, ಸೆ. 28- ಭದ್ರಾ ನದಿ ಹಾಗೂ ಅದರ ಪಾವಿತ್ರ್ಯತೆ ಕಾಪಾಡಲು ನಾಡಿದ್ದು ದಿನಾಂಕ 30ರ ಸೋಮವಾರ ಬೆಳಗ್ಗೆ 7.30ಕ್ಕೆ ಭದ್ರಾ ಜಲಾಶಯದಿಂದ ಭದ್ರಾವತಿ ನಗರದವರೆಗೂ ನಿರ್ಮಲ ಭದ್ರಾ ಅಭಿಯಾನದಡಿ 'ಬೃಹತ್ ಜಲ-ಜಾಗೃತಿ, ಜನ-ಜಾಗೃತಿ ಪಾದಯಾತ್ರೆ' ಏರ್ಪಡಿಸಲಾಗಿದೆ.

ಭದ್ರಾ ಅಭಿಯಾನ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವ ಮೂಲಕ ನದಿಗಳ ಸ್ವಚ್ಛತೆ ಕಾಪಾಡಲು ನಾಗರಿಕರೆಲ್ಲರೂ ಯಾತ್ರೆಯಲ್ಲಿ ಭಾಗವಹಿಸುವಂತೆ ಹರಿಹರದ ಅವಧೂತ ಸದ್ಗುರು ಕವಿ ಗುರುರಾಜ ಗುರೂಜಿ ಮನವಿ ಮಾಡಿದ್ದಾರೆ.

## ಬಸಾಪುರ : ಬಾಲಕಿಯರ ಥ್ರೋ-ಬಾಲ್ ತಂಡಕ್ಕೆ ದ್ವಿತೀಯ ಸ್ಥಾನ




ದಾವಣಗೆರೆ, ಸೆ. 28 - ಬಾಪೂಜಿ ಸ್ಟೇಡಿಯಂನಲ್ಲಿ ನಡೆದ ತಾಲ್ಲೂಕು ಮಟ್ಟದ ಹಿರಿಯ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟದಲ್ಲಿ ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಬಸಾಪುರ ಶಾಲೆಯ ಬಾಲಕಿಯರ ಥ್ರೋ-ಬಾಲ್ ತಂಡವು ದ್ವಿತೀಯ ಸ್ಥಾನ ಪಡೆದಿದ್ದು, ಶಾಲೆಯ ಸ್ಥಳೀಯ ಸಲಹಾ ಸಮಿತಿ ಅಧ್ಯಕ್ಷ ಸುರೇಂದ್ರಪ್ಪ ಎಸ್. ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದು ಗಂಗಾಮತ ಸಮಾಜದ ಸಭೆ

ರಾಣೇಬೆನ್ನೂರು ತಾಲ್ಲೂಕು ಗಂಗಾಮತ ಸಮಾಜದ ಸಂಘಟನೆ ಹಾಗೂ ಅಭಿವೃದ್ಧಿಗೆ ಪೂರಕವಾಗಿ ಇಂದು ಸಂಜೆ 4 ಗಂಟೆಗೆ ಸಮಾನ ಮನಸ್ಕರ ಸಭೆಯನ್ನು ಗುಡ್ ಶೆಡ್ ರಸ್ತೆಯ ಕೃಷ್ಣಮೂರ್ತಿ ಸುಣಗಾರ ಇವರ ತೋಟದಲ್ಲಿ ಕರೆಯಲಾಗಿದೆ.

## ಚಿಕ್ಕಮೇಗಳಗೆರೆ ನಿವೃತ್ತ ಶಿಕ್ಷಕ ಕೆ. ಶಿವಾನಂದಪ್ಪ ನಿಧನ



ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು ಚಿಕ್ಕಮೇಗಳಗೆರೆ ಗ್ರಾಮದ ವಾಸಿಯಾದ ನಿವೃತ್ತ ಶಿಕ್ಷಕ

**ಶ್ರೀ ಕೆ. ಶಿವಾನಂದಪ್ಪ**

ಇವರು ದಿನಾಂಕ 28.9.2024ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಹೃದಯಾಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 82 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಸಹೋದರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.9.2024ರ ಭಾನುವಾರ ಬೆಳಿಗ್ಗೆ 10ಕ್ಕೆ ಹರಪನಹಳ್ಳಿ ತಾಲ್ಲೂಕಿನ ಚಿಕ್ಕಮೇಗಳಗೆರೆ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು : ಡಾ॥ ಜಯಣ್ಣ ಕಂಚಿಕೆರೆ, ಸಹೋದರರು, ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು ಹಾಗೂ ಕುಟುಂಬ ವರ್ಗದವರು ಹಾಗು ಗ್ರಾಮಸ್ಥರು. ಮೊ : 8050533389**

॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಸರಸ್ವತಿ ಬಡಾವಣೆ ವಾಸಿ

**ಶ್ರೀ ಶಂಕರಯ್ಯ ವಾಡಿ** ನಿವೃತ್ತ ಪಿ.ಎಸ್.ಐ.

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 26.09.2024ನೇ ಗುರುವಾರ ಮಧ್ಯಾಹ್ನ 2.45 ಗಂಟೆಗೆ ನನ್ನ ಧರ್ಮಪತ್ನಿ

**ಶ್ರೀಮತಿ ಅನಸೂಯ ವಾಡಿ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

**ದಿನಾಂಕ : 30.09.2024ನೇ ಸೋಮವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ಬನಶಂಕರಿ ಸಭಾಭವನ, ಸರಸ್ವತಿ ಬಡಾವಣೆ, ದಾವಣಗೆರೆ**

ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕೆಂದು ವಿನಂತಿ.

**ಇಂತಿ ದುಃಖತಪ್ತರು : ಶ್ರೀ ಶಂಕರಯ್ಯ ವಾಡಿ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಮತ್ತು ವಾಡಿ ಕುಟುಂಬದವರು ಹಾಗೂ ಬಂಧು-ಮಿತ್ರರು. 9110686299,9742912172**

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಸೀತಾರಾಮನ್ ವಿರುದ್ಧ ಎಫ್.ಐ.ಆರ್

(1ನೇ ಪುಟದಿಂದ) ಹೆಸರಿಸಲಾಗಿದೆ.

ಚುನಾವಣಾ ಬಾಂಡ್ ಹೆಸರಿನಲ್ಲಿ ಹಣ ವಸೂಲಿ ಮಾಡಲಾಗಿತ್ತು. 8 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ಹಣ ವಸೂಲಿ ಮಾಡಲಾಗಿದೆ ಎಂದು ಜನಾಧಿಕಾರ ಸಂಘರ್ಷ ಪರಿಷತ್ ಸಹ ಅಧ್ಯಕ್ಷ ಆದರ್ಶ್ ಆರ್. ಅಯ್ಯರ್ ದೂರು ನೀಡಿದ್ದರು.

ಸೀತಾರಾಮನ್ ಹಾಗೂ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಸಹಕಾರದಿಂದ ಸಾವಿರಾರು ಕೋಟಿ ರೂ.ಗಳ ಹಣ ಲೂಟಿ ಮಾಡಿದ್ದಾರೆ. ಚುನಾವಣಾ ಬಾಂಡ್ ಹೆಸರಿನಲ್ಲಿ ಅಧಿಕಾರಿಗಳು ಬಿಜೆಪಿಯೊಂದಿಗೆ ಶಾಮೀಲಾಗಿದ್ದಾರೆ ಎಂದು ದೂರಲಾಗಿತ್ತು.

ಸುಪ್ರೀಂ ಕೋರ್ಟ್ ಕಳೆದ ಫೆಬ್ರವರಿ ತಿಂಗಳಲ್ಲಿ ಚುನಾವಣಾ ಬಾಂಡ್ ಯೋಜನೆಯನ್ನು ರದ್ದುಗೊಳಿಸಿತ್ತು. ಈ ಯೋಜನೆಯು ಮಾಹಿತಿ ಹಕ್ಕು ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆ ಎಂದು ತಿಳಿಸಿತ್ತು.

### ಸೀತಾರಾಮನ್ ರಾಜೀನಾಮೆಗೆ ಸಿದ್ದರಾಮಯ್ಯ ಆಗ್ರಹ

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧ ಎಫ್.ಐ.ಆರ್. ದಾಖಲಾಗಿರುವುದರಿಂದ ಅವರು ರಾಜೀನಾಮೆ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಮುಡಾ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ಎಫ್.ಐ.ಆರ್. ದಾಖಲಾಗಿರುವುದರಿಂದ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ನಾಯಕರು ಒತ್ತಾಯಿಸುತ್ತಿದ್ದಾರೆ. ಅವರ ವಾದದಂತೆ ಸೀತಾರಾಮನ್ ಸಹ ರಾಜೀನಾಮೆ ನೀಡಲಿ ಎಂದಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಜೆಡಿಎಸ್ ನಾಯಕ ಹಾಗೂ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಚುನಾವಣಾ ಬಾಂಡ್ ನಿಧಿ ಸೀತಾರಾಮನ್ ಅವರ ವೈಯಕ್ತಿಕ ಖಾತೆಗೆ ಹೋಗಿಲ್ಲ. ಅವರೇನು ಸಿದ್ದರಾಮಯ್ಯರಂತೆ ಅಧಿಕಾರ ದುರ್ಬಳಕೆ ಮಾಡಿಕೊಂಡು ಲಾಭ ಪಡೆದಿಲ್ಲ ಎಂದಿದ್ದಾರೆ.

ಚುನಾವಣಾ ಬಾಂಡ್ ಮುಗಿದ ವಿಷಯ ಎಂದಿರುವ ವಿಪಕ್ಷ ನಾಯಕ ಆರ್. ಅಶೋಕ್, ಎಫ್.ಐ.ಆರ್. ಕುರಿತು ನಮ್ಮ ನಾಯಕರು ಸೂಕ್ತ ಕ್ರಮ ತೆಗೆದುಕೊಳ್ಳಲಿದ್ದಾರೆ ಎಂದು ಹೇಳಿದ್ದಾರೆ.

## ಜಮ್ಮು - ಕಾಶ್ಮೀರ ಕೇಂದ್ರಾಡಳಿತ ತಾತ್ಕಾಲಿಕ

ಜಮ್ಮು, ಸೆ. 28 – ಜಮ್ಮು ಮತ್ತು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಪರಿವರ್ತಿಸಿರುವುದು ಕೇವಲ ತಾತ್ಕಾಲಿಕ ಕ್ರಮ. ಮತ್ತೆ ರಾಜ್ಯದ ಸ್ಥಾನಮಾನ ನೆಲೆಗೊಳಿಸಲಾಗುವುದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಜಮ್ಮುವಿನಲ್ಲಿ ಆಯೋಜಿಸಲಾಗಿದ್ದ ಬೃಹತ್ ಸಮಾವೇಶದಲ್ಲಿ ಮಾತನಾಡಿದ ಮೋದಿ, ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ನೀಡಲು ಬಿಜೆಪಿಯಿಂದ ಮಾತ್ರ ಸಾಧ್ಯ ಎಂದು ಹೇಳಿದರು.

## ಸಾಸ್ವೆಹಳ್ಳಿ ಬಳಿ ರಸ್ತೆ ಅಪಘಾತ : ಸಾವು



ಸಾಸ್ವೆಹಳ್ಳಿ, ಸೆ. 28 - ಸಮೀಪದ ಎಡಿವಿಎಸ್ ಕಾಲೇಜು ಬಳಿ ಡಿಸಿಸಿ ಬ್ಯಾಂಕ್ ಪಿಗ್ಮಿ ಸಂಗ್ರಾಹಕ ಕೆ.ಜಿ. ರಾಜೇಶ್ (45) ಪಿಗ್ಮಿ ಸಂಗ್ರಹಕ್ಕೆ ಶನಿವಾರ ಬೆಳಿಗ್ಗೆ ತೆರಳುತ್ತಿದ್ದಾಗ ವೇಗವಾಗಿ ಬಂದ ಗುರು ರೇಣುಕ ಬಸ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ರಾಜೇಶ್ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ರಾಜೇಶ್ ಪತ್ನಿ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

# ಆರೋಗ್ಯಕರ ಜೀವನಕ್ಕೆ ಕ್ರೀಡೆ ಸಹಕಾರಿ




(1ನೇ ಪುಟದಿಂದ) ಪವರ್ ಲಿಫ್ಟಿಂಗ್ ಕ್ರೀಡೆಗಳ ಸದ್ಬಳಕೆ ಮಾಡಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ವಿವಿಧ ರಾಜ್ಯಗಳಿಂದ ಆಗಮಿಸಿರುವ ಕ್ರೀಡಾಪಟುಗಳು ಸೋಲು-ಗೆಲುವಿನ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೇ, ಕ್ರೀಡಾ ಮನೋಭಾವದಿಂದ ಪಾಲ್ಗೊಳ್ಳುವುದು ಮುಖ್ಯ. ಭವಿಷ್ಯದ ಸ್ಪರ್ಧೆಗಳನ್ನು ಗಮನದಲ್ಲಿಟ್ಟುಕೊಂಡು ಮುನ್ನಡೆಯುವಂತೆ ಸಲಹೆ ನೀಡಿದರು.

ಮಹಾನಗರ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಮಾತನಾಡಿ, ಹಿರಿಯ ಕ್ರೀಡಾಪಟುಗಳನ್ನು ಮರಳಿ ಸ್ಪರ್ಧೆಗೆ ಭಾಗವಹಿಸುವಂತೆ ಮಾಡುವುದು ಮಾಸ್ಟರ್ ಗೇಮ್ಸ್. ಮಾರ್ಚ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಏಷಿಯನ್ ಗೇಮ್ ಆಯೋಜಿಸಲಾಗಿದೆ. ದೇಶ ಮತ್ತು ರಾಜ್ಯದ ಕ್ರೀಡಾಪಟುಗಳು ಉತ್ತಮ ಪ್ರದರ್ಶನ ನೀಡುವಂತೆ ಸಲಹೆ ನೀಡಿದರು.

ಕರ್ನಾಟಕ ವೇಯ್ಟ್‌ಲಿಫ್ಟಿಂಗ್ ಅಸೋಸಿಯೇಷನ್ ಉಪಾಧ್ಯಕ್ಷ ಪ್ರೇಮನಾಥ್ ಉಳ್ಳಾಲ, ಮಧ್ಯ ಕರ್ನಾಟಕ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಕಾರ್ಯದರ್ಶಿ ಸಾಯಿನಾಥ್, ಹಿರಿಯ ಕ್ರೀಡಾಪಟು ವಿಶಾಲಾಕ್ಷಿ, ಕರವೇ ಅಧ್ಯಕ್ಷ ರಾಜು, ಪ್ಯಾನ್ ಇಂಡಿಯಾ ಮಾಸ್ಟರ್ಸ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ನಟರಾಜ್, ಬಸವರಾಜ್, ಷಣ್ಮುಖಾಚಾರ್, ಲಕ್ಷ್ಮಿಕಾಂತ್, ವಿರೂಪಾಕ್ಷಪ್ಪ, ಫಕ್ರುದ್ದೀನ್, ಪ್ರೇಮನಾಥ್, ಹನುಮಂತಪ್ಪ, ಕರಿಬಸವರಾಜು ಸೇರಿದಂತೆ, ಇತರರು ಉಪಸ್ಥಿತರಿದ್ದರು.

ತಮಿಳುನಾಡು, ಕೇರಳ, ಕರ್ನಾಟಕ, ದೆಹಲಿ, ಚೆನ್ನೈ ಸೇರಿದಂತೆ ವಿವಿಧ ರಾಜ್ಯಗಳ 15 ಮಹಿಳಾ ಹಾಗೂ 55 ಪುರುಷ ಕ್ರೀಡಾಪಟುಗಳು ಪಾಲ್ಗೊಂಡಿದ್ದರು.

ನಾಳೆ ಭಾನುವಾರವೂ ಕೂಡ ಪವರ್ ಲಿಫ್ಟಿಂಗ್ ಸ್ಪರ್ಧೆ ಮುಂದುವರೆಯಲಿದ್ದು, 120 ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆ ಇದೆ.

## ಮೈಸೂರು ದಸರಾ : ಕನ್ನಡ ಪುಸ್ತಕ ಮಾರಾಟ ಮೇಳ

ದಾವಣಗೆರೆ, ಸೆ. 28 - ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ದಸರಾ ಉತ್ಸವ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 3 ರಿಂದ 11 ರವರೆಗೆ ಮೈಸೂರಿನ ಹಳೇ ಡಿ.ಸಿ. ಕಚೇರಿ ಎದುರು ಇರುವ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಪುಸ್ತಕ ಮಾರಾಟ ಮೇಳ ಏರ್ಪಡಿಸಲಾಗಿದೆ.

ಈ ಪುಸ್ತಕ ಮೇಳದಲ್ಲಿ ಭಾಗವಹಿಸಲು ಇಚ್ಚಿಸುವ ಪ್ರಕಾಶಕರು, ಮಾರಾಟಗಾರರು ನಿಗದಿತ ಅರ್ಜಿ ನಮೂನೆಯನ್ನು ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರಿನ ಕಚೇರಿ ಅಥವಾ ಆಯಾ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಅಥವಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ https://kpp.karnataka.gov.in ನಲ್ಲಿ ಪಡೆದು ಸಾವಿರ ರೂಗಳ ಭದ್ರತಾ ಠೇವಣಿಯ ಡಿ.ಡಿ.ಯನ್ನು ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ ಜೆ.ಸಿ.ರಸ್ತೆ, ಬೆಂಗಳೂರು ಇವರ ಹೆಸರಿಗೆ ಪಡೆದು ಸೆಪ್ಟಂಬರ್ 30 ರೊಳಗೆ ಅಂಚೆ ಮೂಲಕ ಹಾಗೂ ಇ-ಮೇಲ್ kannadapprad-hikara@gmail.com ಮೂಲಕ ಸಲ್ಲಿಸಬಹುದು. ವಿವರಕ್ಕೆ ಸಂಪರ್ಕಿಸಿ : ದೂ.ಸಂ 080-22484516, 22107704.

# ವಾರ ಭವಿಷ್ಯ

**ದಿನಾಂಕ : 29.09.2024 ರಿಂದ 05.10.2024ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚು.ಚೇ.ಚೋ.ಲ.ಲಿ.ಉ.ಲೇ.ಲೊ.ಅ)**

ಆದಾಯವು ನಿಮ್ಮ ನಿರೀಕ್ಷೆಯ ಮಟ್ಟಕ್ಕಿಂತ ಹೆಚ್ಚಾಗಲಿದ್ದು, ಉಳಿತಾಯದ ಬಗ್ಗೆ ತುಸು ಯೋಚಿಸಬಹುದು. ವ್ಯವಹಾರದಲ್ಲಿ ಚುರುಕಿನ ನಡೆ ತೋರುವಿರಿ, ಕೌಟುಂಬಿಕ ನೆಮ್ಮದಿ ಕಂಡುಬರಲಿದ್ದು, ಮಾನಸಿಕ ಸಂತೋಷ ಅನುಭವಿಸುವಿರಿ. ಸ್ನೇಹಿತರು ಹಾಗೂ ಬಂಧುಗಳು ಕೊಡಲಿರುವ ನೆರವನ್ನು ಸದುಪಯೋಗ ಪಡಿಸಿಕೊಳ್ಳಿ. ಸಂಗಾತಿಯ ಆದಾಯವೂ ಹೆಚ್ಚುವುದರಿಂದ ಹಲವು ಯೋಜನೆಗಳನ್ನು ಜಾರಿಗೆ ತರಲು ಯತ್ನಿಸುವಿರಿ. ಆರೋಗ್ಯದ ಬಗ್ಗೆ ಗಮನವಿರಲಿ. ಸೋಮ-ಮಂಗಳ-ಬುಧ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ವಿದ್ಯಾರ್ಥಿಗಳು ಹಿಂದಿನ ಫಲಿತಾಂಶದಿಂದ ತುಸು ನಿರಾಶರಾಗಿದ್ದು, ಈಗ ಅಧ್ಯಯನದಲ್ಲಿ ಹೆಚ್ಚಿನ ಆಸಕ್ತಿ ತೋರುವರು, ಆದಾಯದ ಮಟ್ಟಿಗೆ ಹೇಳುವುದಾದರೆ ಹೆಚ್ಚಳ ಕಾಣದಿದ್ದರೂ ದೈನಂದಿನ ಜೀವನಕ್ಕೇನೂ ಕೊರತೆಯಿಲ್ಲ, ಹಳೆಯ ಮಿತ್ರರೊಂದಿಗೆ ನಡೆಯಲಿರುವ ಮಾತುಕತೆಯಿಂದ ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ, ಕೃಷಿಕರು ಸಾಮಾನ್ಯ ಮಟ್ಟದ ಆದಾಯ ಗಳಿಸುವರು, ಹೈನುಗಾರಿಕೆ ಲಾಭದಾಯಕ ವಾಗಲಿದೆ. ಆರೋಗ್ಯದ ಕಡೆ ಅಲಕ್ಷೆಬೇಡ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಸಂಘ-ಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಸರ್ಕಾರದಿಂದ ಅನುದಾನ ಸಿಗಲಿದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ತುಸು ಹಿನ್ನಡೆ ಕಂಡರೂ ಚಿಂತೆಬೇಡ, ಇದು ತಾತ್ಕಾಲಿಕ ಎಂಬುದು ನೆನಪಿರಲಿ, ಹಿರಿಯರ ಆರೋಗ್ಯದಲ್ಲಿ ಹೆಚ್ಚಿನ ವ್ಯತ್ಯಾಸವಾಗಲಿದ್ದು, ವಿಶೇಷ ಚಿಕಿತ್ಸೆ ಕೊಡಿಸಬೇಕಾದೀತು. ಮಲ್ಲಯುದ್ಧ ತರಬೇತುದಾರರಿಗೆ ಆಡಳಿತ ಮಂಡಳಿಯಿಂದ ಹೆಚ್ಚಿನ ನೆರವು ದೊರೆಯಲಿದೆ, ಆಡಳಿತಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಇದು ಸಕಾಲ, ಪಶು-ಪ್ರಾಣಿಗಳ ವಿಚಾರದಲ್ಲಿ ಎಚ್ಚರವಿರಲಿ. ಭಾನು-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಮಂದಗತಿಯಲ್ಲಿ ಸಾಗುತ್ತಿರುವ ಕೆಲಸಗಳನ್ನು ಬುದ್ಧಿವಂತಿಕೆಯಿಂದ ಚುರುಕು ಗೊಳಿಸುವಿರಿ, ಮಕ್ಕಳಿಗೆ ಮೂಳೆಗೆ ಸಂಬಂಧಿಸಿದ ಸಮಸ್ಯೆ ಕಾಡಲಿದೆ, ವಾರದ ಆರಂಭವು ಆನಂದದಾಯಕವಾಗಲಿದೆ, ಹೊರಸಂಚಾರ ಜಾಸ್ತಿಯಾಗಲಿದ್ದು, ಅದಕ್ಕೆ ತುಸು ಕಡಿವಾಣ ಹಾಕಿರಿ. ಆಗಬೇಕಾಗಿರುವ ತುರ್ತು ಕಾರ್ಯ ಗಳಿಗೆ ಮಹಿಳಾಧಿಕಾರಿಗಳಿಂದ ಅಡಚಣೆಯಾಗಲಿದೆ, ಪ್ರಭಾವಿ ವ್ಯಕ್ತಿಗಳಿಂದ ಮಾತ್ರ ಇದು ಬಗೆಹರಿಯಲು ಸಾಧ್ಯ, ಆದಾಯಕ್ಕೆ ತಕ್ಕಂತೆ ಮನೆ ವಾರ್ತೆ ನಡೆಸುವುದು ಉತ್ತಮ. ಗೋ ಸೇವೆ ಮಾಡಿ. ಸೋಮ-ಬುಧ-ಶುಕ್ರ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಕೆಲಸ ಕಾರ್ಯಗಳ ನೆಪದಲ್ಲಿ ಕೌಟುಂಬಿಕ ವಿಚಾರಗಳನ್ನು ಅಲಕ್ಷಿಸುವುದು ಭವಿಷ್ಯ ದೃಷ್ಟಿಯಿಂದ ಒಳ್ಳೆಯದಲ್ಲ. ಅವಿವಾಹಿತರು ಪ್ರೇಮಿಗಳನ್ನು ಹುಡುಕುವುದರಲ್ಲಿ ಯಶಸ್ವಿಯಾಗುವರು, ಆಯುರ್ವೇದ ವೈದ್ಯರಿಗೆ ವಿದೇಶದಲ್ಲಿ ಹೆಚ್ಚಿನ ಬೇಡಿಕೆ ಬರಲಿದೆ, ಸ್ವಾಭಿಮಾನ ಬದುಕಿನಲ್ಲಿ ಒಳ್ಳೆಯದೇ ಆದರೂ ಅದು ದುರಭಿಮಾನಕ್ಕೆ ತಿರುಗಬಾರದಷ್ಟೆ. ಮಗಳ ಮದುವೆ ವಿಚಾರದಲ್ಲಿ ಹೆಚ್ಚಿನ ಮಟ್ಟದಲ್ಲಿ ಮಾತು ಕತೆಯಾಗಲಿದೆ, ಮಹಿಳೆಯರಿಗೆ ಹಾಗೂ ಯುವಕರಿಗೆ ಉತ್ತಮ ದಿನಗಳು. ಭಾನು-ಮಂಗಳ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಮಗನ ಉದ್ಯೋಗದಲ್ಲಿ ಅನಿಶ್ಚಿತತೆ ಕಾಡಲಿದ್ದು, ಇದನ್ನು ಗಂಭೀರವಾಗಿ ಪರಿಗಣಿಸುವುದು ಮೇಲು, ಮಹಿಳೆಯರು ನಡೆಸುವ ವ್ಯವಹಾರದಲ್ಲಿ ಸಾಧಾರಣ ಲಾಭವಾಗಲಿದೆ. ವಿದೇಶಕ್ಕೆ ಹೋಗಬೇಕೆಂಬ ವಿದ್ಯಾರ್ಥಿಗಳ ಅಭಿಲಾಷೆಗೆ ದಾಖಲಾತಿ ಹಾಗೂ ತಾಂತ್ರಿಕ ತೊಂದರೆಗಳು ಎದುರಾಗಲಿವೆ. ಪಾರಂಪರಿಕ ವ್ಯವಹಾರದಲ್ಲಿ ಮುಂದುವರೆಯುವುದು ಮೇಲು. ತೀರ್ಥಯಾತ್ರೆ ಮಾಡುವ ಸದಾವಕಾಶವನ್ನು ಕಳೆದುಕೊಳ್ಳಬೇಡಿ. ಬುಧ-ಗುರು-ಶನಿ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಹಿರಿಯರಿಂದ ಬರಬೇಕಾಗಿರುವ ಆಸ್ತಿ ವಿಚಾರದಲ್ಲಿ ಹೆಚ್ಚಿನ ತಕರಾರು ಬರಲಿದೆ, ಹೊಸದಾಗಿ ನೌಕರಿ ಸೇರಿರುವ ಯುವಕರಲ್ಲಿ ಆಕಸ್ಮಿಕವಾಗಿ ಮನೋಸ್ಥೈರ್ಯ ಕುಗ್ಗಲಿದೆ, ತಾಳ್ಮೆಯಿಂದಿದ್ದಲ್ಲಿ ಎಲ್ಲವೂ ಸರಿಹೋಗಲಿದೆ, ಮಡದಿಗಿದ್ದ ಹಳೇ ಕಾಯಿಲೆಗಳು ಮತ್ತೆ ಮರುಕಳಿಸುವ ಸಂಭವವಿದೆ, ಮಕ್ಕಳ ಏಳಿಗೆಯ ಬಗ್ಗೆ ಹೆಚ್ಚಿನ ಚಿಂತೆಯಾಗಲಿದೆ, ಸೋದರನ ವಿಲಾಸೀ ಜೀವನ ಬೇಸರ ಮೂಡಿಸಲಿದೆ, ಆದಾಯಕ್ಕೆ ತಕ್ಕಂತೆ ಪ್ರಾಸಂಗಿಕ ಖರ್ಚುಗಳೂ ಅನಿವಾರ್ಯವಾಗಲಿದೆ. ಗುರು-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಹೊರಗಡೆಯಿಂದ ಎಷ್ಟೇ ಬೇಗುದಿಯಿದ್ದರೂ ಮಾನಸಿಕ ಸ್ಥಿರತೆಯನ್ನು ಕಾಪಾಡಿಕೊಳ್ಳುವಿರಿ, ನಿಮ್ಮ ಕೆಲಸ, ಕಾರ್ಯಗಳಿಗೆ ಮನೆಯ ಹಿರಿಯರಿಂದ ಹಾಗೂ ಬಂಧುಗಳಿಂದ ಹೆಚ್ಚಿನ ಸಹಕಾರ ಸಿಗಲಿದೆ, ಇದನ್ನು ಸದುಪಯೋಗ ಪಡಿಸಿಕೊಳ್ಳಿ. ಸಾವಯವ ಕೃಷಿ ಮಾಡುವವರು ಅದರಲ್ಲಿ ಯಶಸ್ವಿಯಾಗುವರು. ವಿದೇಶದಲ್ಲಿರುವ ಮಗನಿಂದ ಹೆಚ್ಚಿನ ನೆರವು ಸಿಗಲಿದೆ, ಮಡದಿಯ ತವರುಮನೆಯಿಂದ ಹಣಕಾಸಿನ ಸಹಾಯ ಬರಲಿದೆ, ಸಾಧು ಸಂತರ ದರ್ಶನಭಾಗ್ಯ ಅನಿರೀಕ್ಷಿತವಾಗಿ ಒದಗಿಬರಲಿದೆ. ಸೋಮ-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ನಿಮ್ಮ ಆದಾಯವು ಮಧ್ಯದ ಗತಿಯಲ್ಲಿರುವುದರಿಂದ ಹೆಚ್ಚಿನ ಹೊರೆ ಹೊರಲು ಹೋಗಬೇಡಿ, ಆಸ್ತಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಕೋರ್ಟ್ ಕಛೇರಿಯೆಂದು ಅಲೆಯದೇ ರಾಜೀ-ಪಂಚಾಯ್ತಿ ಮೂಲಕ ಪರಿಹರಿಸಿಕೊಳ್ಳುವುದು ಮೇಲು. ನಿಮ್ಮ ವಿರುದ್ಧ ಬಂಧುಗಳು ಅಪಸ್ವರವೆತ್ತಲಿದ್ದಾರೆ. ಆದ್ದರಿಂದ ಅದನ್ನೆದುರಿಸಲು ಮಾನಸಿಕವಾಗಿ ಈಗಲೇ ಸಿದ್ಧರಾಗಿರುವುದು ಮೇಲು. ವಿದ್ಯಾರ್ಥಿಗಳ ಫಲಿತಾಂಶವು ಉತ್ತಮ ಮಟ್ಟದಲ್ಲಿರುವುದು. ದೇಹದಲ್ಲಿ ಕೊಬ್ಬಿನಾಂಶ ಸೇರಿ ಅನೇಕ ಸಮಸ್ಯೆಗಳು ಎದುರಾಗಲಿವೆ. ಬುಧ-ಗುರು-ಶುಕ್ರ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಆದಾಯ ಕಡಿಮೆಯಾಗಿದ್ದರೂ, ನೆಮ್ಮದಿಯ ಜೀವನಕ್ಕೇನೂ ತೊಂದರೆಯಿಲ್ಲ. ವಿದೇಶದಲ್ಲಿ ಹೂಡಿಕೆ ಮಾಡುವ ಮೊದಲು ಮತ್ತೊಮ್ಮೆ ವಿಚಾರ ಮಾಡುವುದು ಮೇಲು.ಮಗನಿಗೆ ಅನಿರೀಕ್ಷಿತ ಪ್ರಸಂಗದಿಂದಾಗಿ ದಿಢೀರನೇ ವಿವಾಹ ನಿಶ್ಚಯವಾಗಲಿದೆ, ಸಂಶೋಧನಾ ರಂಗದಲ್ಲಿರುವವರಿಗೆ ಸರ್ಕಾರದಿಂದ ಬರಲಿರುವ ನೆರವಿನಲ್ಲಿ ವಿಳಂಬವಾಗಲಿದೆ. ವಾತ ಸಂಬಂಧಿ ಆರೋಗ್ಯ ಸಮಸ್ಯೆ ಮಡದಿಯನ್ನು ಕಾಡಲಿದೆ. ಅತಿಥಿಗಳ ಆಗಮನದಿಂದ ಮನೆಯಲ್ಲಿ ಹಬ್ಬದ ವಾತಾವರಣ ಮೂಡಲಿದೆ. ಮಂಗಳ-ಗುರು-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವವರು ಮೇಲಾಧಿಕಾರಿಗಳಿಗೆ ಹೆದರಿ ಒತ್ತಡದ ವಾತಾವರಣದಲ್ಲಿ ಕೆಲಸ ಮಾಡಬೇಕಾಗಬಹುದು. ಬಂಧುಗಳೊಂದಿಗೆ ಮಾತನಾಡುವಾಗ ಆಡುವ ಮಾತಿನಲ್ಲಿ ಹಿಡಿತವಿರಲಿ. ಸ್ನೇಹಿತರು ಉತ್ತಮ ಸಲಹೆಗಳನ್ನೇ ಕೊಡಲಿದ್ದು, ಅದರಂತೆ ನಡೆದುಕೊಳ್ಳುವುದು ಉತ್ತಮ, ಆಸ್ತಿ ವಿಭಾಗದ ವಿಚಾರವನ್ನು ಈಗ ಹಿರಿಯರ ಮುಂದೆ ಚರ್ಚಿಸಲು ಇದು ಸಕಾಲವಾಗಿದೆ, ಚಿನಿವಾರ ಪೇಟೆಯಲ್ಲಿ ತುಸು ಏರುಪೇರಾಗಲಿದೆ. ಹಾಗೆಂದ ಮಾತ್ರಕ್ಕೆ ಚಿಂತೆಬೇಡ. ಸೋಮ-ಬುಧ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಎಲ್ಲದಕ್ಕೂ ಅಪಸ್ವರವೆತ್ತದೆ ಹಿರಿಯರೊಂದಿಗೆ ಹೊಂದಿಕೊಂಡು ಹೋಗುವುದರಲ್ಲೇ ಹಿತವಡಗಿದೆ, ಕೃಷಿಯಿಂದ ಲಾಭವಿದ್ದರೂ ಖರ್ಚೂ ಕೂಡ ಅಷ್ಟೇ. ಆದಾಯ ಸಾಧಾರಣವಾಗಿರುವುದರಿಂದ ಖರ್ಚು-ವೆಚ್ಚಗಳಿಗೊಂದು ಮಿತಿ ಇರಲಿ. ವ್ಯಾಪಾರ-ವ್ಯವಹಾರಗಳಲ್ಲಿ ಮೇಲುಗೈ ಸಾಧಿಸುವಿರಿ. ಹೊಸ ಯೋಜನೆ ಗಳಿಗೆ ಹಣಕಾಸು ಸಂಸ್ಥೆಗಳಿಂದ ಹೆಚ್ಚಿನ ನೆರವು ದೊರೆಯಲಿದೆ. ಸೋದರ- ಸೋದರಿಯರಿಗೆ ಉತ್ತಮ ದಿನಗಳು. ಭಾನು-ಗುರು-ಶುಕ್ರ-ಶುಭ ದಿನಗಳು.

### ವಿಶೇಷ ದಿನಗಳು :

ದಿನಾಂಕ: 29.9.2024 ನೇ ಭಾನುವಾರ ಯತಿದ್ವಾದಶೀ.
ದಿನಾಂಕ: 1.10.2024 ನೇ ಮಂಗಳವಾರ ಘಾತ ಚತುರ್ದಶೀ
ದಿನಾಂಕ: 2.10.2024 ನೇ ಬುಧವಾರ ಸರ್ವಪಿತೃ ಅಮಾವಾಸ್ಯಾ.

## ಕಳಪೆ ಔಷಧಿಯಿಂದ ಈರುಳ್ಳಿ ನಾಶ: ಪರಿಹಾರಕ್ಕೆ ಆಗ್ರಹ

ದಾವಣಗೆರೆ, ಸೆ. 28 - ಕಳಪೆ ಔಷಧಿ ಸಿಂಪರಣೆಯಿಂದಾಗಿ ಜಗಳೂರು ತಾಲ್ಲೂಕು ಅಸಗೋಡು ಗ್ರಾಮದಲ್ಲಿ ಕೆ.ಲಿಂಗಪ್ಪ ಇವರು 1.5 ಎಕರೆ ಪ್ರದೇಶದಲ್ಲಿ ಬೆಳೆದ ಈರುಳ್ಳಿ ಬೆಳೆ ನಾಶವಾಗಿದೆ ಎಂದು ಕರ್ನಾಟಕ ರಾಜ್ಯ ಈರುಳ್ಳಿ ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಎನ್.ಎಂ. ಸಿದ್ದೇಶ್ ಆರೋಪಿಸಿದ್ದಾರೆ. ಬೆಳೆ ನಾಶದ ಬಗ್ಗೆ ತೋಟಗಾರಿಕೆ ಹಾಗೂ ಕೃಷಿ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರೂ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಈ ಕುರಿತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು. ಕೂಡಲೇ ಕಳಪೆ ಔಷಧಿ ನೀಡಿದ ಅಂಗಡಿ ಪರವಾನಗಿ ರದ್ದು ಪಡಿಸಬೇಕು. ಬೆಳೆ ನಷ್ಟಕ್ಕೆ 8 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕೋಗಳಿ ವೀರೇಶ್, ಎಂ. ಬಸವರಾಜ್ ಉತ್ತಂಗಿ, ಅಸಗೋಡು ಲಿಂಗಪ್ಪ, ಹಾಲಪ್ಪ, ಗುಡದಪ್ಪ, ಶಂಭುಲಿಂಗಪ್ಪ, ಮಲ್ಲಪ್ಪ, ಹನುಮಂತಪ್ಪ ಇತರರು ಇದ್ದರು.

# ಹರಿಹರದಲ್ಲಿ ಇಂದು ಹಿಂದೂ ಮಹಾಗಣಪತಿ ವಿಸರ್ಜನೆ

## ಶೋಭಾ ಯಾತ್ರೆಗೆ ಕೇಸರಿ ಧ್ವಜ, ಬಟ್ಟೆಗಳಿಂದ ಸಿಂಗಾರಗೊಂಡಿದೆ ಪಟ್ಟಣ, ಹೆಚ್ಚಿನ ಜನ ನಿರೀಕ್ಷೆ

ಹರಿಹರ, ಸೆ. 28 - ನಾಳೆ ಭಾನುವಾರ ಹಿಂದೂ ಮಹಾಗಣಪತಿ ವಿಸರ್ಜನೆಗೆ ನಗರ ಶೃಂಗಾರಗೊಂಡು ಭಕ್ತರನ್ನು ಆಕರ್ಷಿಸುತ್ತಿದೆ.

ಪೇಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ಹಿಂದೂ ಜಾಗರಣ ವೇದಿಕೆ ಮತ್ತು ಹಿಂದೂ ಮಹಾಗಣಪತಿ ಸೇವಾ ಟ್ರಸ್ಟ್ ವತಿಯಿಂದ ಐದನೇ ವರ್ಷದ ಗಣೇಶ ಪ್ರತಿಷ್ಠಾಪಿಸಿದ್ದು, ಬೃಹತ್ ಶೋಭಾಯಾತ್ರೆ ಮೂಲಕ ತುಂಗಭದ್ರಾ ನದಿಯಲ್ಲಿ ವಿಸರ್ಜನೆ ಮಾಡಲಾಗುತ್ತದೆ.

ಪೇಟೆ ಆಂಜನೇಯ ಸ್ವಾಮಿ ವೃತ್ತ, ಹಳೆ ಪಿ.ಬಿ.ರಸ್ತೆ ಅಮರಾವತಿ ಫ್ಲೈಓವರ್ ನಿಂದ ತುಂಗಭದ್ರಾ ನದಿಯವರಿಗೆ ಹಾಗೂ ಗಾಂಧಿ ವೃತ್ತದಿಂದ ಎಪಿಎಂಸಿ ಯವರೆಗೆ ವಿದ್ಯುತ್ ಕಂಬಗಳಿಗೆ ಕೇಸರಿ ಬಣ್ಣದ ಬಟ್ಟೆಗಳನ್ನು ಮತ್ತು ಧ್ವಜವನ್ನು ಕಟ್ಟಿ ಶೃಂಗಾರ ಮಾಡಲಾಗಿದೆ.

ಎಲ್ಲಾ ಕಡೆಗಳಲ್ಲಿ ವಿದ್ಯುತ್ ದ್ವೀಪಗಳನ್ನೂ ಸಹ ಹಾಕಲಾಗಿದೆ. ಗಾಂಧಿ ವೃತ್ತ, ರಾಣಿ ಚೆನ್ನಮ್ಮ ವೃತ್ತ, ಹರ ಸೊಸೈಟಿ ಮುಂಭಾಗದ ರಸ್ತೆ, ಪಕ್ಕೀರಸ್ವಾಮಿ ಮಠ ಮುಂಭಾಗದ ರಸ್ತೆಯ ಮಧ್ಯದಲ್ಲಿ ದೇವರ ಮತ್ತು ರಾಷ್ಟ್ರದ ಏಳಿಗೆಗಾಗಿ ಪ್ರಾಣತ್ಯಾಗ ಮಾಡಿದ ಮಹಾನೀಯರ ಬೃಹತ್ ಆಕಾರದ ಭಾವಚಿತ್ರ ಹಾಕಲಾಗಿದೆ. ವಿವಿಧ ಬಡಾವಣೆಗಳ ಪ್ರಮುಖ ರಸ್ತೆಗಳಲ್ಲಿ ಬೃಹತ್ ಧ್ವಜದ ಕಂಬ ಹಾಕಿ, ಕಂಬಕ್ಕೆ ಕೇಸರಿ ಬಣ್ಣದ ಬಾವುಟ ಹಾಕಲಾಗಿದೆ.



ಮೆರವಣಿಗೆ ಸಾಗುವ ಮಾರ್ಗದಲ್ಲಿ ನಗರಸಭೆ ವತಿಯಿಂದ ಸ್ವಚ್ಛತೆ ಮಾಡಿಸಲಾಗಿದೆ. ಕೆಲವು ಕಡೆಗಳಲ್ಲಿ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ.

ಸಂಘಟನೆಯ ಪ್ರಮುಖರಾದ ಬಸವನಗೌಡ, ಚಂದ್ರಕಾಂತ್ ಗೌಡ, ಚಂದನ್ ಮೂರ್ಕಲ್, ದಿನೇಶ್, ಹೆಚ್.ಎಸ್. ರಾಘವೇಂದ್ರ, ಧರಣೇಂದ್ರ, ಹೆಚ್.ಸಿ. ಕೀರ್ತಿಕುಮಾರ್, ಸ್ವಾತಿ ಹನುಮಂತ್, ರಟ್ಟಿಹಳ್ಳಿ ಮಂಜುನಾಥ್, ಸಂತೋಷ ಗುಡಿಮನಿ, ಶಿವಕುಮಾರ್, ಮಹೇಶ್, ಕುಮಾರ್, ಪವನ್ ಆಚಾರ್, ಗಿರೀಶ್, ಅದ್ವೈತ ಶಾಸ್ತ್ರಿ ಸೇರಿದಂತೆ ಇನ್ನೂ ಹಲವಾರು ಯುವಕರು ಹಗಲು ರಾತ್ರಿ ಎನ್ನದೇ ಶ್ರಮವಹಿಸಿ ಶೋಭಾಯಾತ್ರೆಯ ಕೆಲಸ ಕಾರ್ಯಗಳಲ್ಲಿ ನಿತ್ಯ ತೊಡಗಿಸಿಕೊಂಡಿದ್ದಾರೆ.

ಮಹಿಳಾ ಸಂಘಟಕರಾದ ರೂಪಾ, ಸಾಕ್ಷಿ, ಸುಮನ್ ಖಮಿತ್ಕರ್, ರೀಗಲ್ ಅಶ್ವಿನಿ, ಅಂಬುಜಾ ರಾಜೊಳ್ಳಿ, ಸಾಕಮ್ಮ ಸೇರಿದಂತೆ ಹಲವು ಮಹಿಳೆಯರು ಸಹ ಶೋಭಾಯಾತ್ರೆ ಯಶಸ್ವಿಯಾಗಿಸಲು ಮುಂದಾಗಿದ್ದಾರೆ.

ಈ ಬಾರಿ 40 ಸಾವಿರಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಭಕ್ತರು ಆಗಮಿಸುತ್ತಾರೆ ಎಂಬ ನಿರೀಕ್ಷೆ ಹಿನ್ನೆಲೆಯಲ್ಲಿ, ಸಂಘಟಕರು ಸಮಿತಿಯ ವತಿಯಿಂದ ಅನ್ನಸಂತರ್ಪಣೆ, ಮತ್ತೆ ಕೆಲವು ಭಕ್ತರು ದೋಸೆ, ತಂಪಾದ ಪಾನಕ, ಮಜ್ಜಿಗೆ, ಕುಡಿಯುವ ನೀರಿನ ಬಾಟಲ್ ವ್ಯವಸ್ಥೆ ಕಲ್ಪಿಸುವುದಕ್ಕೆ ಮುಂದಾಗಿದ್ದಾರೆ.

ಈ ಬಾರಿ ಕೂಡ ಶೋಭಾಯಾತ್ರೆಯಲ್ಲಿ ಯುವಕರಿಗೆ ಎರಡು ಡಿಜೆ ಸೌಂಡ್ ಸಿಸ್ಟಮ್ ಮತ್ತು ಮಹಿಳೆಯರಿಗೆ ಪ್ರತ್ಯೇಕ ಡಿಜೆ ಸೌಂಡ್ ಸಿಸ್ಟಮ್ ವ್ಯವಸ್ಥೆ ಮಾಡಿದ್ದು, ಜೊತೆಗೆ ಸಮಾಳ, ನಂದಿಕೋಲು, ಡೊಳ್ಳು, ಹಲಗೆ, ಡ್ರಮ್ ಸೆಟ್ ಸೇರಿದಂತೆ ಇತರೆ ಕಲಾಮೇಳಗಳು ಭಾಗವಹಿಸಿ ಮೆರವಣಿಗೆಗೆ ಮೆರಗನ್ನು ನೀಡಲಿದ್ದು, ಭಾನುವಾರ ಮಧ್ಯಾಹ್ನ 12 ಕ್ಕೆ ಶೋಭಾಯಾತ್ರೆ ಮೆರವಣಿಗೆ ಆರಂಭವಾಗುತ್ತದೆ ಎನ್ನಲಾಗುತ್ತದೆ.

ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆ ಹೆಚ್ಚಿನ ಸಿಬ್ಬಂದಿ ನಿಯೋಜಿಸಿಕೊಂಡು, ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ.

ಮೆರವಣಿಗೆ ವೀಕ್ಷಿಸಲು ಸಾರ್ವಜನಿಕರಿಗೆ ತೊಂದರೆಗಳು ಆಗದಂತೆ ಕೆಲವು ರಸ್ತೆಗಳಲ್ಲಿ ವಾಹನ ಪಾರ್ಕಿಂಗ್ ಸ್ಥಳಗಳು ಗುರುತಿಸಿ ಆ ಸ್ಥಳದಲ್ಲಿ ವಾಹನಗಳು ನಿಲ್ಲಿಸುವುದಕ್ಕೆ ಪೊಲೀಸ್ ಇಲಾಖೆ ವ್ಯವಸ್ಥೆ ಕೈಗೊಂಡಿದೆ.

## ಷಟಲ್ ಬ್ಯಾಡ್ಮಿಂಟನ್ : ಹೆಬ್ಬಾಳು ರುದ್ರೇಶ್ವರ ಶಾಲೆ ಜಿಲ್ಲಾ ಮಟ್ಟಕ್ಕೆ ಆಯ್ಕೆ



ದಾವಣಗೆರೆ, ಸೆ. 28 - ತಾಲ್ಲೂಕು ಮಟ್ಟದ ಷಟಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಹೆಬ್ಬಾಳು ಗ್ರಾಮದ ಶ್ರೀ ರುದ್ರೇಶ್ವರ ಆಂಗ್ಲ ಮಾಧ್ಯಮ ನರ್ಸರಿ, ಪ್ರಾಥಮಿಕ ಹಾಗೂ ಪೌಢಶಾಲೆ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಶ್ರೀ ರುದ್ರೇಶ್ವರ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಮತ್ತು ಕಾರ್ಯದರ್ಶಿ, ಸದಸ್ಯರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ಶ್ರೀಗಳ ಜಯಂತಿ

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ನಗರ ಘಟಕದ ವತಿಯಿಂದ ವೀರ ರಾಣಿ ಕಿತ್ತೂರು ಚನ್ನಮ್ಮ ವೃತ್ತದಲ್ಲಿ ಇಂದು ಭಾನುವಾರ ಬೆಳಗ್ಗೆ 8 ಗಂಟೆಗೆ ಲಿಂಗೈಕ್ಯ ಡಾ|| ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳವರ 87ನೇ ಜಯಂತ್ಯುತ್ಸವ ಆಚರಿಸಲಾಗು ವುದು ಎಂದು ನಗರ ಘಟಕದ ಅಧ್ಯಕ್ಷ ಕೈದಾಳ್ ಶಿವಶಂಕರ್ ತಿಳಿಸಿದ್ದಾರೆ.

## ವೃತ್ತಿಪರ ತರಬೇತಿ

ದಾವಣಗೆರೆ, ಸೆ. 28- ಕೇಂದ್ರೀಯ ಪೆಟ್ರೋಕೆಮಿಕಲ್ಸ್ ತಂತ್ರಜ್ಞಾನ ಸಂಸ್ಥೆ (ಸಿಪೆಟ್) ವತಿಯಿಂದ ಮೈಸೂರಿನಲ್ಲಿ ಪಾಲೀಮರ್ ವಸ್ತುಗಳ ತಯಾರಿಕೆಯ ತಂತ್ರಜ್ಞಾನ, ವಾಹನ ಹಾಗೂ ವಿದ್ಯುತ್ ಉಪಕರಣದ ಬಿಡಿ ಭಾಗಗಳು ಸೇರಿದಂತೆ ಇತ್ಯಾದಿ ವಸ್ತುಗಳ ತಯಾರಿಕೆಯ ಬಗ್ಗೆ ಊಟ, ವಸತಿಯೊಂದಿಗೆ ಉಚಿತ ತರಬೇತಿ ನೀಡಲಾಗುವುದು.

ಎಸ್ಎಸ್ಎಲ್‌ಸಿ, ಪಿಯುಸಿ, ಡಿಪ್ಲೋಮಾ ಹಾಗೂ ಯಾವುದೇ ಪದವಿ ಪಾಸ್ ಅಥವಾ ಫೇಲ್ ಆದ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶದ ನೆರವು ನೀಡಲು, ವಿವಿಧ ವೃತಿಪರ ಯೋಜನೆಯಡಿ 6 ತಿಂಗಳ ಕಾಲ ಉಚಿತ ವೃತ್ತಿಪರ ತರಬೇತಿ ನೀಡುತ್ತಿದ್ದು, ಪ.ಜಾ ಮತ್ತು ಪ.ಪಂ ಅಭ್ಯರ್ಥಿಗಳಿಗೆ ತಿಂಗಳಿಗೆ 500 ರೂಪಾಯಿ ಶಿಷ್ಯ ವೇತನ ನೀಡಲಾಗುವುದು. ವಿವರಕ್ಕೆ ಸಂಪರ್ಕಿಸಿ. 9380756024, 7899669920, 0821-2510619

## ಹರಿಹರ : ಪೌರ ಕಾರ್ಮಿಕರ ಬೃಹತ್ ಮೆರವಣಿಗೆ




ಹರಿಹರ, ಸೆ. 28- ಪೌರ ಕಾರ್ಮಿಕರ ದಿನಾಚರಣೆ ಪ್ರಯುಕ್ತ, ಇಲ್ಲಿನ ನಗರಸಭೆ ಪೌರ ಕಾರ್ಮಿಕರ ಸಂಘದ ವತಿಯಿಂದ ಬೃಹತ್ ಮೆರವಣಿಗೆ ಮಾಡಲಾಯಿತು. ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಆರಂಭವಾದ ಮೆರವಣಿಗೆಗೆ ಶಾಸಕ ಬಿ.ಪಿ. ಹರೀಶ್ ಚಾಲನೆ ನೀಡಿದರು.

ವಿವಿಧ ಕಲಾ ತಂಡಗಳು ಭಾಗವಹಿಸಿ ಮೆರವಣಿಗೆಗೆ ಮೆರುಗನ್ನು ನೀಡಿದವು, ಮೆರವಣಿಗೆಯಲ್ಲಿ ಪೌರ ಕಾರ್ಮಿಕರು ಕುಣಿದು ಕುಪ್ಪಳಿಸಿ, ಪಟಾಕಿ ಸಿಡಿಸಿ ಸಂತಸ ಪಟ್ಟರು. ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್, ಉಪಾಧ್ಯಕ್ಷ ಜಂಬಣ್ಣ ಗುತ್ತೂರು, ಸದಸ್ಯ ಹನುಮಂತಪ್ಪ, ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ, ದಲಿತ ಸಂಘಟನೆ ಮುಖಂಡ ಪಿ.ಜೆ. ಮಹಾಂತೇಶ್, ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ, ಜಿ.ಕೆ. ಪಂಚಾಕರಿ, ಕೃಷ್ಣ ಪಿ.ರಾಜೊಳ್ಳಿ, ಪೌರ ಕಾರ್ಮಿಕರ ಸಂಘದ ಗೌರವ ಅಧ್ಯಕ್ಷ ಸದಾಶಿವ, ಅಧ್ಯಕ್ಷ ಹುಚ್ಚೆಂಗಪ್ಪ, ಪ್ರಧಾನ ಕಾರ್ಯದರ್ಶಿ ಹೆಚ್. ಪರಸಪ್ಪ, ಉಪಾಧ್ಯಕ್ಷ ಡಿ. ಹನುಮಂತಪ್ಪ, ಖಜಾಂಚಿ ರವಿಕುಮಾರ್, ಜಂಟಿ ಕಾರ್ಯದರ್ಶಿ ದಯಾನಂದ ಮತ್ತು ಇತರರು ಭಾಗವಹಿಸಿದ್ದರು.

## ಕಾಶ್ಮೀರ ಕಾರ್ಯಾಚರಣೆಯಲ್ಲಿ ಇಬ್ಬರು ಉಗ್ರರು ಹತ

ಶ್ರೀನಗರ, ಸೆ. 28 – ಜಮ್ಮು ಮತ್ತು ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆ ವೇಳೆ ಇಬ್ಬರು ಗುರುತಿಸಲಾಗದ ಉಗ್ರರು ಹತರಾಗಿದ್ದಾರೆ ಹಾಗೂ ಐವರು ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ. ದೇವಸಾರ್ ಪ್ರದೇಶದ ಅಡಿಗಾಮ್ ಜಿಲ್ಲೆಯಲ್ಲಿ ಗುಂಡಿನ ಚಕಮಕಿ ನಡೆದಿತ್ತು. ಇಡೀ ಪ್ರದೇಶವನ್ನು ಭದ್ರತಾ ಸಿಬ್ಬಂದಿ ಸುತ್ತುವರೆದಿವೆ.

ಗುಂಡಿನ ಚಕಮಕಿ ವೇಳೆ ನಾಲ್ವರು ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ. ಇನ್ನೊಬ್ಬರು ಆಕಸ್ಮಿಕವಾಗಿ ಗುಂಡು ತಗುಲಿ ಗಾಯಗೊಂಡಿದ್ದಾರೆ.

## ಸಾಧನೆಯ ಹಾದಿಯತ್ತ ಚೌಡೇಶ್ವರಿ ಸಹಕಾರಿ



ದಾವಣಗೆರೆ, ಸೆ. 28- 12 ವರ್ಷಗಳ ಹಿಂದೆ ಪ್ರಾರಂಭವಾದ ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು 2013ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಇತರೆ ಸಹಕಾರಿ ಸಂಸ್ಥೆಗಳಿಗಿಂತ ಮಿಗಿಲಾಗಿ ಸಾರ್ವಜನಿಕ ಸೇವೆಯಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡಿದೆ ಎಂದು ಸಂಸ್ಥೆಯ ಅಧ್ಯಕ್ಷ ಡಿ.ಡಿ. ಬಸವರಾಜಪ್ಪ ತಿಳಿಸಿದ್ದಾರೆ.

ಸಂಸ್ಥೆಯ ಸದಸ್ಯರ ಶ್ರಮದಿಂದ ಸೊಸೈಟಿಯು ವರ್ಷದಿಂದ ವರ್ಷಕ್ಕೆ ಷೇರು ಬಂಡವಾಳ ಹಾಗೂ ಠೇವಣಿ ಸಂಗ್ರಹಿಸುವುದರಲ್ಲಿ ಸಾಧನೆ ಮಾಡುತ್ತಲೇ ಹೊರಟಿದೆ ಎಂದಿದ್ದಾರೆ.

ನಮ್ಮ ಸಂಸ್ಥೆ ಸರ್ಕಾರದಿಂದಾಗಲೀ, ಬ್ಯಾಂಕುಗಳಿಂದಾಗಲೀ, ಸಾಲ ಪಡೆದಿರುವುದಿಲ್ಲ. ನಮ್ಮ ಷೇರುದಾರರ ಹಣ, ಠೇವಣಾತಿಗಳ ಮೂಲಕ ಸಂಗ್ರಹಿಸಿದ ಹಣದಲ್ಲಿ ಸದಸ್ಯರಿಗೆ ಸಾಲ ನೀಡಿದ್ದೇವೆ ಎಂದು ಹೇಳಿದ್ದಾರೆ.

## ಏರ್ ಇಂಡಿಯಾ ವಿಮಾನದ ಆಹಾರದಲ್ಲಿ ಜಿರಲೆ

ನವದೆಹಲಿ, ಸೆ. 28 - ನ್ಯೂಯಾರ್ಕ್‌ಗೆ ತೆರಳುತ್ತಿದ್ದ ಏರ್ ಇಂಡಿಯಾ ವಿಮಾನದಲ್ಲಿ ಪೂರೈಸಲಾದ ಆಮ್ಲೆಟ್‌ನಲ್ಲಿ ಜಿರಲೆ ಕಂಡು ಬಂದಿದೆ ಎಂದು ಗ್ರಾಹಕರೊಬ್ಬರು ದೂರಿದ್ದಾರೆ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಏರ್ ಇಂಡಿಯಾ ತಿಳಿಸಿದೆ. ಪ್ರಯಾಣಿಕರೊಬ್ಬರು ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ಪರಿಶೀಲಿಸಾಲಗುತ್ತಿದೆ ಎಂದು ಏರ್ ಇಂಡಿಯಾ ವಕ್ತಾರರು ಹೇಳಿದ್ದಾರೆ.


### ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದಂತಹ ಶ್ರೀಮತಿ ಎನ್. ಭವಾನಿಲಕ್ಷ್ಮೀ ಕೋಂ ಲೇಟ್ ಎನ್ ಶ್ರೀಕಾಂತ್ ವಾಸ್ ಪಾಮೇನಹಳ್ಳಿ ದಾವಣಗೆರೆ ಜಿಲ್ಲೆ, ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ನನ್ನ ಕಕ್ಷಿದಾರರು ಈ ಷೆಡ್ಯೂಲ್ ಜಮೀನುಗಳು ಸೀನಿಯರ್ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣಗಳು ಚಾಲತಿಯಲ್ಲಿದ್ದು, Os No. 114/2016 ಮತ್ತು Miscellaneous Petition No. 5/2021 ಈ ಪ್ರಕರಣಗಳು ರಾಮನಗರ ನ್ಯಾಯಾಲಯದಲ್ಲಿ ಇರುತ್ತದೆ. ಪಾಮೇನಹಳ್ಳಿ, ಗ್ರಾಮದ ಈ ಸರ್ವೆ ನಂಬರ್‌ಗಳು 37/1ಡಿ, 38/2ಬಿ, 40/2, 37/1ಎ, 30/4, 40/2, 37/13, 38/2ಎ, 63/2ಬಿ2, 42/1, 41/3, 37/17, 37/1-4, 37/1-3 ಈ ಎಲ್ಲಾ ಷೆಡ್ಯೂಲ್ ಸ್ವತ್ತುಗಳನ್ನು ಬೇರೆಯವರು ಮಾರಾಟ ಮಾಡಲು ಮತ್ತು ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡುತ್ತಿರುವುದಾಗಿ ನಮ್ಮ ಕಕ್ಷಿದಾರರಿಗೆ ತಿಳಿದು ಬಂದಿರುತ್ತದೆ. ಆದ್ದರಿಂದ ಈ ಷೆಡ್ಯೂಲ್ ಸ್ವತ್ತುಗಳು ನ್ಯಾಯಾಲಯದಲ್ಲಿ ಪ್ರಕರಣಗಳು ಇತ್ಯರ್ಥವಾಗಿರುವುದಿಲ್ಲ. ಆದುದರಿಂದ ಈ ಸ್ವತ್ತುಗಳು ಯಾವುದೇ ರೀತಿ ಮಾರಾಟಕ್ಕೆ ಇರುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ : ದಾವಣಗೆರೆ ಜಿಲ್ಲೆ, ದಾವಣಗೆರೆ ತಾ||, ಉಪನೋಂದಣಾಧಿಕಾರಿಗಳವರ ಕಛೇರಿ ವ್ಯಾಪ್ತಿಗೊಳಪಟ್ಟ ದಾವಣಗೆರೆ, ತಾ|| ಆನಗೋಡು ಹೋಬಳಿ, ಪಾಮೇನಹಳ್ಳಿ ಗ್ರಾಮದ 37/1ಡಿ, 38/2ಬಿ, 40/2, 37/1ಎ, 30/4, 40/2, 37/13, 38/2ಎ, 63/2ಬಿ2, 42/1, 41/3, 37/17, 37/1-4, 37/1-3 ಕೃಷಿ ಭೂಮಿ.

**ಸಹಿ/-ಎಸ್. ವಿಶ್ವನಾಥ್ (ವಕೀಲರು)**
**# 75, 1ನೇ ಮಹಡಿ, ಜಯನಗರ, 6ನೇ ಬ್ಲಾಕ್, ಗಣೇಶ ದೇವಸ್ಥಾನದ ಎದುರು, ಯಡಿಯೂರು, ಬೆಂಗಳೂರು-560 070, ಫೋ. : 9972738987**


## ವಿಶೇಷಚೇತನರು ಭಗವಂತನ ಮಕ್ಕಳು

### ರಾಣೇಬೆನ್ನೂರು 'ವಿಶ್ವ ಕಿವುಡ ಮಕ್ಕಳ ದಿನಾಚರಣೆ' ಕಾರ್ಯಕ್ರಮದಲ್ಲಿ ಕೋಡಿಮಠದ ಶಿವಾನಂದ ಶ್ರೀಗಳು



ರಾಣೇಬೆನ್ನೂರು, ಸೆ. 28 - ವಿಕಲತೆ ಎಂಬುದು ಯಾರದೋ ಶಾಪವಲ್ಲ. ವಿಕಲಚೇತನರು ಭಗವಂತನ ಮಕ್ಕಳೇ ಆಗಿದ್ದಾರೆ ಎಂದು ಕೋಡಿಮಠದ ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಹೇಳಿದರು.

ಮಾರುತಿ ನಗರದ ಶ್ರೀ ಮರುಳ ಸಿದ್ದೇಶ್ವರ ದೇವಸ್ಥಾನದ ಬಳಿ ಜರುಗಿದ 'ವಿಶ್ವ ಕಿವುಡ ಮಕ್ಕಳ ದಿನಾಚರಣೆ' ಸಮಾರಂಭದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ವಿಕಲತೆಯಿಂದ ಸಮಾಜದಲ್ಲಿ ನಿರ್ಲಕ್ಷ್ಯಕ್ಕೊಳ ಗಾದ ಮಕ್ಕಳನ್ನು ಪೋಷಣೆ ಮಾಡುವುದು ಮಹತ್ಕಾರ್ಯ, ಅಲ್ಲದೇ ಇದು ಭಗವಂತನ ಸೇವೆ ಮಾಡಿದಂತೆ ಹಾಗಾಗಿ ಭಗವಂತನ ಕೃಪೆಗೂ ಪಾತ್ರರಾಗುವಿರಿ ಎಂದು ಸ್ವಾಮೀಜಿ ಹೇಳಿದರು.

ಇಲ್ಲಿನ ಸೇವಾ ಅಂಧರ ಸಂಸ್ಥೆ, ಶ್ರೀ ರೇಣುಕಾ ಯಲ್ಲಮ್ಮ ಕಿವುಡ ಹಾಗೂ ಮೂಕ ಮಕ್ಕಳ ವಸತಿ ಶಾಲೆ, ವಾಕ್ ತರಬೇತಿ ಕೇಂದ್ರ ಹಾಗೂ 'ಉಜ್ವಲ' ಮಹಿಳೆ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟುವ ಯೋಜನೆ ಇವುಗಳ ಸಂಯುಕ್ತ ಆಶ್ರಯದಲ್ಲಿ 'ವಿಶ್ವ ಕಿವುಡ ಮಕ್ಕಳ ದಿನಾಚರಣೆ'ಯನ್ನು ಆಚರಿಸಲಾಯಿತು

ಗಣೇಶ ದೇವಸ್ಥಾನದಿಂದ ಆರಂಭವಾದ ಮೆರವಣಿಗೆಗೆ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರಾದ ಬಿ. ಸಿದ್ದರಾಜು ಅವರು ಚಾಲನೆ ನೀಡಿದರು. ಮೆರವಣೆಗೆಯಲ್ಲಿ ಪ್ರಸಿದ್ಧ ಸೋಮನ ಕುಣಿತ, ಭಾಜಾ ಭಜಂತ್ರಿಯನ್ನು ಭಾರಿಸುತ್ತಾ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ವಿಕಲಚೇತನರ ಬಗ್ಗೆ ಜನ ಸಾಮಾನ್ಯರಲ್ಲಿ ಅರಿವು ಮೂಡಿಸಲಾಯಿತು.

ಸೇವಾ ಅಂಧರ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ರೇಣುಕಾ ಶಿವಕುಮಾರ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆ ಅಧ್ಯಕ್ಷ ಹೆಚ್.ಆರ್ ಶಿವಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಸ್ಥೆಯ 33 ವರ್ಷಗಳ ಸಾಧನೆ ಮತ್ತು ಹೋರಾಟಗಳ ಬಗ್ಗೆ ವಿವರಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಮಂಗಳೂರು ಸಾನಿಧ್ಯ ಬುದ್ದಿಮಾಂಧ್ಯ ಮಕ್ಕಳ ಶಾಲೆ ಅಧ್ಯಕ್ಷ ವಸಂತ ಕುಮಾರ ಶೆಟ್ಟಿ ಇವರು ಸಂಸ್ಥೆಯ ಏಳಿಗೆಯ ಬಗ್ಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಸಾಮಾನ್ಯ ಶಿಕ್ಷಕರಂತೆ ವೇತನ ದೊರಕಿಸಿಕೊಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಇವರಿಗೆ ಶಿಫಾರಸ್ಸು ಪತ್ರ ಕೊಡುವಂತೆ ಕೋಡಿಮಠದ ಶ್ರೀಗಳಲ್ಲಿ ಮನವಿ ಸಲ್ಲಿಸಿದರು.

ವಿಜೇತ ಬುದ್ದಿಮಾಂದ್ಯ ಮಕ್ಕಳ ಶಾಲೆ ಅಧ್ಯಕ್ಷೆ ಡಾ. ಕಾಂತಿ ಹರೀಶ, ನಿವೃತ್ತ ಪಾಚಾರ್ಯ ರಮೇಶ ಮಡಿವಾಳರ, ಕ.ರ.ವೇ ರಾಜ್ಯಾಧ್ಯಕ್ಷ ನಿತ್ಯಾನಂದ ಕುಂದಾಪುರ, ನಗರಸಭೆ ಸದಸ್ಯರಾದ ಶೇಖಣ್ಣ ಹೊಸಗೌಡ್ರ, ಮಲ್ಲಣ್ಣ ಅಂಗಡಿ, ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಚೋಳಪ್ಪ ಎನ್. ಕಸವಾಳ, ಜಿಲ್ಲಾ ಅಂಗವಿಕಲರ ಸಂಘದ ಉಪಾಧ್ಯಕ್ಷ ಮೌನೇಶ ಬಡಿಗೇರ ಹಾವೇರಿ, ಕಾಂಗ್ರೆಸ್ ಓ.ಬಿ.ಸಿ ಅಧ್ಯಕ್ಷ ಆನಂದ ಹುಲ್ಮನಿ ಉಪಸ್ಥಿತರಿದ್ದರು.


### ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕೆಳಕಂಡ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತನ್ನು ದಾವಣಗೆರೆ ಸಿಟಿ, ಶಿವಕುಮಾರಸ್ವಾಮಿ ಬಡಾವಣೆ, 1ನೇ ಮುಖ್ಯ ರಸ್ತೆ, 1ನೇ ಕ್ರಾಸ್, ಡೋರ್ ನಂಬರ್ 903/2 ರಲ್ಲಿ ವಾಸವಾಗಿರುವ ಶ್ರೀ ಶಂಕ್ರಪ್ಪ. ಟಿ.ಎಮ್. ಬಿನ್ ಮಹದೇವಪ್ಪ ಷೆಡ್ಯೂಲ್ ಸೊತ್ತು ಇವರ ಸಂಪೂರ್ಣ ಮಾಲೀಕತ್ವಕ್ಕೆ ಸೇರಿದ ಸ್ವತ್ತಾಗಿದ್ದು, ಸದರಿ ಸ್ವತ್ತನ್ನು ನಮ್ಮ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಚಿಸಿರುತ್ತಾರೆ.

ಸದರಿ ಸ್ವತ್ತಿನ ಖರೀದಿ ವ್ಯವಹಾರಕ್ಕೆ ಯಾರಾದರೂ ಯಾವುದೇ ರೀತಿ ತಂಟೆ ತಕರಾರು, ಹಕ್ಕು, ಹಿತಾಸಕ್ತಿ ಮತ್ತು ಯಾವುದೇ ಜೀವನಾಂಶದ ಹಕ್ಕಿಗೆ ಅಥವಾ ಯಾವುದೇ ರೀತಿ ಬ್ಯಾಂಕ್ ಹಾಗೂ ಇತರೆ ಖಾಸಗಿ ವ್ಯಕ್ತಿಗಳಲ್ಲಿ ಅಡಮಾನ ಅಥವಾ ಭೋಜ ವಗೈರೆ ಇದ್ದಲ್ಲಿ ಅಥವಾ ಕ್ರಯದ ಕರಾರಿಗೆ ಒಳಪಟ್ಟಿದ್ದಲ್ಲಿ ಹಾಗೂ ಸದರಿ ಸ್ವತ್ತಿನ ಬಗ್ಗೆ ಯಾವುದೇ ರೀತಿಯ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯ ಬಾಕಿ ಇದ್ದಲ್ಲಿ ಈ ನೋಟಿಸ್ ಪ್ರಕಟಗೊಂಡ ದಿನದಿಂದ 07 ದಿನಗಳ ಒಳಗಾಗಿ ಈ ಕೆಳಕಾಣಿಸಿದ ವಕೀಲರ ವಿಳಾಸಕ್ಕೆ ಲಿಖಿತ ರೂಪದಲ್ಲಿ ದಾಖಲೆ ಸಮೇತ ತಕರಾರುಗಳನ್ನು ಸಲ್ಲಿಸತಕ್ಕದ್ದು, ತದನಂತರ ಬಂದ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ನಮ್ಮ ಕಕ್ಷಿದಾರರ ವ್ಯವಹಾರದ ಮೇಲೆ ಯಾವುದೇ ರೀತಿ ಬಂಧನಕಾರಿ ಯಾಗುವುದಿಲ್ಲ. ಮತ್ತು ಸದರಿ ಸ್ವತ್ತುಗಳ ಬಗ್ಗೆ ಯಾವುದೇ ತಂಟೆ, ತಕರಾರು ಇರುವುದಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಸದರಿ ಮಾಲೀಕರುಗಳಿಂದ ಖರೀದಿ ಪತ್ರವನ್ನು ನೋಂದಾಯಿಸಿಕೊಳ್ಳುತ್ತಾ ರೆಂದು ಈ ಮೂಲಕ ಸಾರ್ವಜನಕರಿಗೆ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ : ದಾವಣಗೆರೆ ಉಪ ನೋಂದಣಾಧಿಕಾರಿಗಳವರ ಕಛೇರಿ ವ್ಯಾಪ್ತಿಯಲ್ಲಿರುವ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ನಿಟುವಳ್ಳಿ ಗ್ರಾಮದ ರೀ ಸರ್ವೆ ನಂಬರ್ 43/ಎ1ಎ ವುಳ್ಳ ಪ್ರದೇಶವು ವಾಸೋಪಯೋಗಕ್ಕಾಗಿ ಅಲಿನೇಷನ್ ಮಾಡಿಸಿ, ಅಪ್ರೂವಲ್ ಪ್ಲಾನ್ ಮಾಡಿಸಿ, ಡೋರ್ ನಂಬರ್, ಖಾತೆ ಸಹ ದಾಖಲು ಮಾಡಿಸಿರುವ ಸೈಟುಗಳು ಹಾಲಿ ದಾವಣಗೆರೆ ಮಹಾನಗರ ಪಾಲಿಕೆಗೆ ಸೇರ್ಪಡೆಯಾಗಿ, ದಾವಣಗೆರೆ ಸಿಟಿ, ಶಿವಕುಮಾರಸ್ವಾಮಿ ಬಡಾವಣೆ ಯಲ್ಲಿ ಬರತಕ್ಕ ಸೈಟ್ ನಂಬರ್ 02, ಡೋರ್ ನಂಬರ್ 903/2, ಅಳತೆ: ಪೂರ್ವ-ಪಶ್ಚಿಮ : 30 ಅಡಿ, ಉತ್ತರ-ದಕ್ಷಿಣ : 40 ಅಡಿ ವುಳ್ಳ ನಿವೇಶನ ಒಂದು ಮತ್ತು ಸೈಟ್ ನಂಬರ್ 3, ಡೋರ್ ನಂಬರ್ 904/3, ಅಳತೆ:- ಪೂರ್ವ-ಪಶ್ಚಿಮ : 30 ಅಡಿ, ಉತ್ತರ-ದಕ್ಷಿಣ : 40 ಅಡಿವುಳ್ಳ ನಿವೇಶನದ ಪೈಕಿ ಪಶ್ಚಿಮ ಭಾಗದ ಕಡೆಯ ಅಳತೆ: ಪೂರ್ವ-ಪಶ್ಚಿಮ : 5 ಅಡಿ, ಉತ್ತರ-ದಕ್ಷಿಣ : 40 ಅಡಿವುಳ್ಳ ನಿವೇಶನ ಒಂದು. ಈ ಎರಡೂ ಸೊತ್ತುಗಳ ಒಟ್ಟು ಅಳತೆ:- ಪೂರ್ವ-ಪಶ್ಚಿಮ : 35 ಅಡಿ, ಉತ್ತರ-ದಕ್ಷಿಣ : 40 ಅಡಿ ವುಳ್ಳ ಜಾಗದಲ್ಲಿ ಗ್ರೌಂಡ್ ಫ್ಲೋರ್ 700 ಚದುರಡಿ ಮತ್ತು ಫಸ್ಟ್ ಫ್ಲೋರ್‌ನಲ್ಲಿ 300 ಚದುರಡಿಯಲ್ಲಿ ಕಟ್ಟಿರುವ ಎರಡು ವಾಸದ ಮನೆ, ಮತ್ತು ಮನೆಗಳ ಪೂರ್ವ ದಿಕ್ಕಿನ ಉತ್ತರ ದಕ್ಷಿಣವಾಗಿ ಕಟ್ಟಿರುವ ಗೋಡೆಯಲ್ಲಿ ಕಾಮನ್ ಹಕ್ಕು ಸಹ ಒಳಗೊಂಡ 35x40 ಅಡಿವುಳ್ಳ ಸೊತ್ತಿಗೆ ಚಕ್ಕುಬಂದಿ:- ಪೂರ್ವಕ್ಕೆ ಸೈಟ್ ನಂ.3ರಲ್ಲಿ ಟಿ.ಎಂ. ಮಹೇಶ್ವರಪ್ಪನವರ ಮನೆ. ಪಶ್ಚಿಮಕ್ಕೆ : 30 ಅಡಿ ರಸ್ತೆ. ಉತ್ತರಕ್ಕೆ : 30 ಅಡಿ ರಸ್ತೆ. ದಕ್ಷಿಣಕ್ಕೆ : ಬೇರೆಯವರ ಸೊತ್ತು.

**ಸಹಿ/- ಶ್ರೀಮತಿ ಕೆ.ಬಿ. ಶೈಲಶ್ರೀ, ವಕೀಲರು**
**#1963, ಇಂದೋರ್ ಸ್ಟೇಡಿಯಂ ಹತ್ತಿರ, ಎಸ್.ಎಸ್.ಲೇಔಟ್, 'ಎ' ಬ್ಲಾಕ್, ದಾವಣಗೆರೆ. ಮೊ. : 94486 58502**

# ಹೆರಿಗೆಯ ನಂತರ ಹೋರಾಡುವ ಹೃದಯ

## ಪೆರಿಪಾರ್ಟಮ್ ಕಾರ್ಡಿಯೋಮ್ಯೆಯೋಪತಿಯ ಒಳನೋಟ

ವಿಶ್ವ ಹೃದಯ ದಿನವನ್ನು ಪ್ರತಿ ವರ್ಷ ಸೆಪ್ಟೆಂಬರ್ 29ರಂದು ಆಚರಿಸಲಾಗುತ್ತದೆ. ಈ ದಿನವು ಹೃದಯರೋಗ ಮತ್ತು ಹೃದಯದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ನಮ್ಮ ಹೃದಯವನ್ನು ಆರೋಗ್ಯಕರವಾಗಿ ಕಾಪಾಡಲು ಅಗತ್ಯವಿರುವ ಮಾಹಿತಿಯನ್ನು ಹಂಚಿಕೊಳ್ಳುವ ಉದ್ದೇಶ. ಆರೋಗ್ಯವು ದೈವತ್ವಕ್ಕೆ ಸಮಾನವಾಗಿರುವುದರಿಂದ, ಒಳ್ಳೆಯ ಆರೋಗ್ಯ ಹೊಂದುವುದು ಬಹು ಮುಖ್ಯವಾಗಿದೆ. ಈ ಸಂದರ್ಭದಲ್ಲಿ ಗರ್ಭಿಣಿ ಸ್ತ್ರೀಯರು ಹಾಗು ಹೆರಿಗೆ ನಂತರ ಎದುರಿಸುವ ಸವಾಲುಗಳಲ್ಲಿ ಒಂದು ಪೆರಿಪಾರ್ಟಮ್ ಕಾರ್ಡಿಯೋಮ್ಯೆಯೋಪತಿ. ಇದರ ಬಗ್ಗೆ ಮಾಹಿತಿಯನ್ನು ಇಲ್ಲಿ ಹಂಚಿಕೊಳ್ಳಲಾಗಿದೆ

ಪೆರಿಪಾರ್ಟಮ್ ಕಾರ್ಡಿಯೋಮ್ಯೆ ಯೋಪತಿ (PPCM) ಒಂದು ವಿಶಿಷ್ಟ ತರವಾದ ಹೃದಯದ ಕಾಯಿಲೆ ಆಗಿದ್ದು, ಗರ್ಭಾವಸ್ಥೆಯ ಕೊನೆಯ ತಿಂಗಳುಗಳಲ್ಲಿ ಅಥವಾ ಮಗುವನ್ನು ಹೆತ್ತ ನಂತರದ ಸಮಯದಲ್ಲಿ ಪ್ರಾರಂಭವಾಗುತ್ತದೆ. ಇದು ಪ್ರಮುಖವಾಗಿ ಮಹಿಳೆಯರ ಹೃದಯದ ಪಂಪ್ ಮಾಡುವ ಶಕ್ತಿಯನ್ನು ಕಡಿಮೆ ಮಾಡುವ ಒಂದು ಅಪಾಯಕಾರಿ ಪರಿಸ್ಥಿತಿ.

ಸಾಮಾನ್ಯವಾಗಿ, ಈ ಪರಿಸ್ಥಿತಿ ಪೂರ್ವಾವಧಿಯಲ್ಲಿ ಕಂಡುಬರುವುದು ಕಡಿಮೆ. ಆದರೆ, ತಕ್ಕ ಸಮಯದಲ್ಲಿ ಗುರುತಿಸಿದರೆ ಚಿಕಿತ್ಸೆ ಮೂಲಕ ಅದನ್ನು ನಿಯಂತ್ರಿಸಬಹುದು.

**ಪಿಪಿಸಿಎಂ ಅನ್ನು ಹೇಗೆ ಗುರುತಿಸಬಹುದು?**

ಪಿಪಿಸಿಎಂ ಒಂದು ಅಪರೂಪದ ಪರಿಸ್ಥಿತಿಯಾಗಿದೆ, ಆದರೆ ಇದು ಗರ್ಭಿಣಿಯರಲ್ಲಿ ಗಂಭೀರವಾದ ಸಮಸ್ಯೆಯಾಗಿ ಕಾಣಿಸಿಕೊಳ್ಳಬಹುದು. ಗರ್ಭವಾಸ್ಥೆಯ ಕೊನೆಯ ಹಂತದಲ್ಲಿ ಅಥವಾ ಹೆರಿಗೆಯ ನಂತರದ 6 ತಿಂಗಳಲ್ಲಿ ಮಹಿಳೆಯರು ಇದಕ್ಕೆ ಬಲಿಯಾಗುತ್ತಾರೆ

**ಪಿಪಿಸಿಎಂ ಲಕ್ಷಣಗಳು:**

● ಉಸಿರಾಟದ ತೊಂದರೆ ● ಸುಸ್ತು

● ಎದೆನೋವು ● ಮೈ ಕೈ ಬಾವು

● ಹೃದಯದ ತೀವ್ರ ಬಡಿತ - ಹೃದಯದ ತೀವ್ರ ಬಡಿತ ಅಥವಾ ಅಸಮರ್ಪಕ ಬಡಿತ PPCMನ ಒಂದು ಪ್ರಮುಖ ಸೂಚನೆ.

**ಪಿಪಿಸಿಎಂ ಕಾರಣಗಳು :**

PPCMನ ಕಾರಣಗಳ ಬಗ್ಗೆ ನಿಖರವಾದ ಮಾಹಿತಿ ಇಲ್ಲದಿದ್ದರೂ, ತಜ್ಞರು ವಿವಿಧ ಕಾರಣಗಳನ್ನು ಕೊಡುತ್ತಾರೆ:

● ಹಾರ್ಮೋನ್ ಗಳಲ್ಲಿ ಬದಲಾವಣೆಗಳು

● ಅನುವಂಶಿಕ ● ಸೋಂಕುಗಳು

● ರಕ್ತದ ಒತ್ತಡದ ತೊಂದರೆಗಳು

**ಪಿಪಿಸಿಎಂ ಚಿಕಿತ್ಸೆಯ ಅಗತ್ಯತೆ:**

PPCM ಅನ್ನು ಶೀಘ್ರ ಪತ್ತೆ ಹಚ್ಚುವುದು ಮತ್ತು ಸೂಕ್ತ ಚಿಕಿತ್ಸೆ ನೀಡುವುದು ಅನಿವಾರ್ಯ. ಇದು ಮಹಿಳೆಯ ಹೃದಯದ ಪಂಪಿಂಗ್ ಸಾಮರ್ಥ್ಯವನ್ನು ಪುನಃಸ್ಥಾಪಿಸಲು ಮತ್ತು ರೋಗದ ಗಂಭೀರತೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಚಿಕಿತ್ಸೆ ಸಾಮಾನ್ಯವಾಗಿ ಹೃದಯದ ಕಾರ್ಯವನ್ನು ಸುಧಾರಿಸಲು ಹಾಗೂ ಹೃದಯದ ಮೇಲಿನ ಭಾರದ ಒತ್ತಡವನ್ನು ಕಡಿಮೆಗೊಳಿಸಲು ಸಹಾಯ ಮಾಡುತ್ತದೆ.

**ಔಷಧಗಳು:**

● ಡೈಯುರೆಟಿಕ್ಸ್ (Diuretics), ಬೀಟಾ-ಬ್ಲಾಕರ್ಸ್ (Beta-blockers), ಎಸಿಇ ಇನ್‌ಹಿಬಿಟರ್ಸ್ (ACE Inhibitors), ಆಂಟಿಕೋಆಗುಲ್ಯಾಂಟ್ಸ್ (Anticoagulants)

**ಜೀವನ ಶೈಲಿ ಬದಲಾವಣೆಗಳು:**

**ಆಹಾರ ನಿಯಂತ್ರಣ:** ಕಡಿಮೆ ಉಪ್ಪು, ಕಡಿಮೆ ಕೊಬ್ಬಿನ ಆಹಾರ ತೆಗೆದುಕೊಳ್ಳುವುದು, ದ್ರವ ಪದಾರ್ಥ ಗಳ ಪ್ರಮಾಣವನ್ನು ನಿಯಂತ್ರಿಸುವುದು.

**ತೂಕದ ನಿಯಂತ್ರಣ:** ಶರೀರದ ತೂಕವನ್ನು ಸರಿಯಾದ ಮಟ್ಟದಲ್ಲಿ ಇರಿಸಲು ಪ್ರಯತ್ನಿಸಬೇಕು.

ಯೋಗ ಮತ್ತು ಪ್ರಾಣಾಯಾಮ ಅಭ್ಯಾಸ ಮಾಡುವುದು.

**ಶಸ್ತ್ರಚಿಕಿತ್ಸೆ:** ಕೆಲವು ತೀವ್ರ, ಗಂಭೀರ ಪ್ರಕರಣಗಳಲ್ಲಿ, ಔಷಧ ಚಿಕಿತ್ಸೆ ಫಲಿಸದಿದ್ದರೆ, ಹೃದಯದ ಪೇಸ್ ಮೇಕರ್ ಅಥವಾ ಡಿಫಿಬ್ರಿಲೇಟರ್ (Implantable Cardioverter Defibrillator - ICD) ಎಂಬ ಸಾಧನಗಳನ್ನು ಹೃದಯದ ಬಡಿತದ ಅತಿ ವೇಗವನ್ನು ನಿಯಂತ್ರಿಸಲು ಬಳಸಬಹುದು.

ಅತ್ಯಂತ ತೀವ್ರವಾದ ಪ್ರಕರಣಗಳಲ್ಲಿ ಹೃದಯದ ಶಸ್ತ್ರಚಿಕಿತ್ಸೆ ಅಥವಾ ಹೃದಯ ಕಸಿ (heart transplant) ಕೊನೆಯ ಪರಿಹಾರವಾಗಿರಬಹುದು.

**ಪಿಪಿಸಿಎಂ ಜೊತೆ ಬದುಕುವುದು:**

ಪಿಪಿಸಿಎಂ ಪತ್ತೆಯಾದ ಬಳಿಕ, ನೇರವಾಗಿ ವೈದ್ಯರ ಸಲಹೆಗಳನ್ನು ಅನುಸರಿಸುವುದು ಅಗತ್ಯ. ನಿಯಮಿತ ಹೃದಯ ತಪಾಸಣೆ, ಔಷಧಿಗಳನ್ನು ಸರಿಯಾದ ಪ್ರಮಾಣದಲ್ಲಿ ತೆಗೆದುಕೊಳ್ಳುವುದು, ಹೃದಯಕ್ಕೆ ತೊಂದರೆ ತರುವ ಚಟುವಟಿಕೆಗಳನ್ನು ತಪ್ಪಿಸುವುದು ಮುಖ್ಯ. ಹೆಚ್ಚಿನ ಮಹಿಳೆಯರು ಸರಿಯಾದ ಚಿಕಿತ್ಸೆ ಮತ್ತು ಜೀವನ ಶೈಲಿಯ ಬದಲಾವಣೆಯೊಂದಿಗೆ ಪಿಪಿಸಿಎಂ ನಿಂದ ಎಲ್ಲರಂತೆ ಜೀವನ ಸಾಗಿಸಬಹುದು.



ಇಂದು ವಿಶ್ವ ಹೃದಯ ದಿನ

**ಮಕ್ಕಳು ಮತ್ತು ಮುಂದಿನ ಗರ್ಭಧಾರಣೆ:**

ಪಿಪಿಸಿಎಂ ಪತ್ತೆಯಾದ ಬಳಿಕ, ಮುಂದಿನ ಗರ್ಭಧಾರಣೆ ದೊಡ್ಡ ಪ್ರಶ್ನೆಯಾಗಿ ಎದುರಾಗುತ್ತದೆ. ಮತ್ತೆ ಗರ್ಭಿಣಿಯಾಗುವ ಮುನ್ನ, ವೈದ್ಯರ ಸಲಹೆಯನ್ನು ಪರಿಗಣಿಸುವುದು ಅತ್ಯಗತ್ಯ. ಹೃದಯದ ಶಕ್ತಿಯ ಸುಧಾರಣೆ ಕಂಡುಬಂದರೂ, ಮತ್ತೆ ಗರ್ಭಧಾರಣೆ ಪಿಪಿಸಿಎಂ ಯ ಮತ್ತೆ ಉಲ್ಬಣಕ್ಕೆ ಕಾರಣವಾಗಬಹುದು. ವೈದ್ಯರು, ಮತ್ತೆ ಗರ್ಭಾವಸ್ಥೆ ನಿರ್ವಹಿಸಲು ವಿಶೇಷ ಕ್ರಮಗಳನ್ನು ಶಿಫಾರಸು ಮಾಡಬಹುದು, ಹಾಗೆಯೇ, ಬೇರೆ ಗರ್ಭ ನಿರೋಧಕ ವಿಧಾನಗಳನ್ನು ಸಲಹೆ ಮಾಡಬಹುದು. ಹೃದಯದ ಮೇಲೆ ಮತ್ತಷ್ಟು ಒತ್ತಡ ಬಾರದಂತೆ ಕಾಪಾಡಿಕೊಳ್ಳಬೇಕು.

**ಪಿಪಿಸಿಎಂ ನಿರ್ವಹಣೆ ಮತ್ತು ತಡೆಗಟ್ಟಲು ಸಲಹೆಗಳು:**

● **ಗರ್ಭಾವಸ್ಥೆಯ ನಿರ್ವಹಣೆ :** ಗರ್ಭಧಾರಣೆ ಸಮಯದಲ್ಲಿ ರಕ್ತದ ಒತ್ತಡವನ್ನು ನಿಯಂತ್ರಿಸಿಕೊಳ್ಳುವುದು ಮತ್ತು ನಿಯಮಿತ ವೈದ್ಯಕೀಯ ತಪಾಸಣೆಗಳನ್ನು ಮಾಡಿಸಿಕೊಳ್ಳುವುದು ಬಹಳ ಮುಖ್ಯ.

● ಮೈ ಕೈ ಬಾವು ಅಥವಾ ಶ್ವಾಸಕೋಶದ ತೊಂದರೆಗಳನ್ನು ಗಮನಿಸಿ, ಶೀಘ್ರವಾಗಿ ವೈದ್ಯರನ್ನು ಸಂಪರ್ಕಿಸುವುದು ಅಗತ್ಯ.

**ಪೋಷಣೀಯ ಆಹಾರ ನಿಯಮಗಳು:** ● ಸಮತೋಲನ ಆಹಾರ (balanced diet) ಸೇವಿಸಬೇಕು. ಹೃದಯದ ಆರೋಗ್ಯವನ್ನು ಕಾಪಾಡಲು ಹೆಚ್ಚು ಹಸಿರು ತರಕಾರಿಗಳು, ಹಣ್ಣುಗಳು ಮತ್ತು ಹೆಚ್ಚು ನಾರಿನಂಶ ಇರುವ ಆಹಾರ ತೆಗೆದುಕೊಳ್ಳಬೇಕು.

● ಕೊಬ್ಬಿನ ಪ್ರಮಾಣವನ್ನು ಕಡಿಮೆಗೊಳಿಸಿ, ಕೊಲೆಸ್ಟ್ರಾಲ್ ಮಟ್ಟವನ್ನು ನಿಯಂತ್ರಿಸಲು ಪ್ರಯತ್ನಿಸಬೇಕು.

**ಮಾನಸಿಕ ಮತ್ತು ಶಾರೀರಿಕ ಚಟುವಟಿಕೆಗಳು :** ಮಾನಸಿಕ ಒತ್ತಡವನ್ನು ಕಡಿಮೆಗೊಳಿಸಲು ಯೋಗ, ಧ್ಯಾನವನ್ನು ಅಳವಡಿಸಿಕೊಳ್ಳಬೇಕು.

**ವೈದ್ಯಕೀಯ ತಪಾಸಣೆ :** ನಿಯಮಿತ ಹೃದಯ ತಪಾಸಣೆ ಗೋಸ್ಕರ ವೈದ್ಯರನ್ನು ಭೇಟಿ ಮಾಡುವುದು, ಹೃದಯದ ಕೆಲಸವನ್ನು ನೋಡಿಕೊಳ್ಳಲು ಅಗತ್ಯವಾದ ಎಕೋಕಾರ್ಡಿಯೋಗ್ರಾಂ ಮತ್ತು ಇತರೆ ಪರೀಕ್ಷೆಗಳನ್ನು ಮಾಡುವುದನ್ನು ಪ್ರತಿ ಆರು ತಿಂಗಳು ಅಥವಾ ಪ್ರತಿ ವರ್ಷ ಮಾಡುವುದು ಉತ್ತಮ.

ಪೆರಿಪಾರ್ಟಮ್ ಕಾರ್ಡಿಯೋಮ್ಯೆಯೋಪತಿ (PPCM) ಒಂದು ಅಪರೂಪದ ಮತ್ತು ಗಂಭೀರವಾದ ಹೃದಯದ ತೊಂದರೆ, ಆದರೆ ಸರಿಯಾದ ಸಮಯದಲ್ಲಿ ಪತ್ತೆಹಚ್ಚಿ, ತಕ್ಷಣವೇ ಚಿಕಿತ್ಸೆ ಕೊಡಿಸಿದರೆ, ಉತ್ತಮ ಪರಿಣಾಮಗಳನ್ನು ಹೊಂದಬಹುದು. ಈ ಸಮಸ್ಯೆಯನ್ನು ಅರಿತುಕೊಳ್ಳಲು ಮತ್ತು ತಡೆಗಟ್ಟಲು ಮಹಿಳೆಯು ಗರ್ಭಾವಸ್ಥೆ ಸಮಯದಲ್ಲಿ ತಮ್ಮ ಆರೋಗ್ಯದ ಮೇಲಿನ ಜಾಗೃತತೆ ಬೆಳೆಸಿಕೊಳ್ಳುವುದು ಅತ್ಯಗತ್ಯ. ನಮ್ಮಲ್ಲಿ ಇರುವ ಎಲ್ಲಾ ಮಾಹಿತಿಯೊಂದಿಗೆ ಮತ್ತು ಹೃದಯ ಆರೋಗ್ಯದ ಬಗ್ಗೆ ಪ್ರಾಮಾಣಿಕ ಜಾಗೃತತೆಯೊಂದಿಗೆ, ನಾವು PPCMನಂತಹ ಪರಿಸ್ಥಿತಿಗಳನ್ನು ಗೆಲ್ಲಬಹುದು ಮತ್ತು ಯಶಸ್ವೀ ಆರೋಗ್ಯಕರ ಬದುಕನ್ನು ಸಾಗಿಸಬಹುದು.

- ಡಾ. ಲೋಹಿತಾಶ್ವ ಎಸ್.ಬಿ.,
ಕನ್ಸಲ್ಟೆಂಟ್ ಇಂಟರ್ವೆನ್ಷನಲ್ ಕಾರ್ಡಿಯೋಲಾಜಿಸ್ಟ್,
ಮೈ ಹಾರ್ಟ್ ಕೇರ್ ಕ್ಲಿನಿಕ್,
ಜ.ಜ.ಮು. ವೈದ್ಯಕೀಯ ಮಹಾವಿದ್ಯಾಲಯ,
ಎಸ್. ಎಸ್. ನಾರಾಯಣ ಹೆಲ್ತ್, ದಾವಣಗೆರೆ.

## ಮಲೇಬೆನ್ನೂರಿನಲ್ಲಿ ಇಂದು ಜುಮ್ಮಾ ಮಸೀದಿ ಆಡಳಿತ ಮಂಡಳಿಗೆ ಚುನಾವಣೆ

ಮಲೇಬೆನ್ನೂರಿನ ಜುಮ್ಮಾ (ಜಾಮೀಯಾ) ಮಸೀದಿಯ ಆಡಳಿತ ಮಂಡಳಿಗೆ ಇಂದು ಚುನಾವಣೆ ನಡೆಯಲಿದೆ. 11 ನಿರ್ದೇಶಕರ ಆಯ್ಕೆಗಾಗಿ ಈ ಚುನಾವಣೆ ನಡೆಯಲಿದ್ದು, 40 ಅಭ್ಯರ್ಥಿಗಳು ಕಣದಲ್ಲಿದ್ದಾರೆ. 2466 ಮತದಾರರಿದ್ದು, ಇಲ್ಲಿನ ದರ್ಗಾ ಬಳಿ ಇರುವ ಜಾಮೀಯಾ ನ್ಯಾಷನಲ್ ಪ್ರೌಢಶಾಲೆಯಲ್ಲಿ ಚುನಾವಣೆ ನಡೆಯಲಿದೆ. ಸಂಜೆ 4 ಗಂಟೆಯಿಂದ ಮತ ಎಣಿಕೆ ಆರಂಭವಾಗಿ ನಂತರ ಫಲಿತಾಂಶ ಪ್ರಕಟಗೊಳ್ಳಲಿದೆ. ಇದೇ ಮೊದಲ ಬಾರಿಗೆ ಚುನಾವಣೆ ನಡೆಯುತ್ತಿದ್ದು, ಮಹತ್ವ ಪಡೆದುಕೊಂಡಿದೆ. ಸಿ.ಬಿ.ಅಬ್ದುಲ್ ಹಾದಿ, ಖಾಲಿದ್, ದಾದಾವಲಿ, ಯುಸೂಫ್, ಡಿ.ಭಾಷಾ, ಎಂ.ಬಿ.ತಾಹೀರ್ ಸೇರಿದಂತೆ ಇನ್ನೂ ಅನೇಕ ಪ್ರಮುಖರು ಚುನಾವಣೆ ಎದುರಿಸಲಿದ್ದಾರೆ.

## ವೇಣುಗೋಪಾಲ್-ಖರ್ಗೆ ಚರ್ಚೆ

(1ನೇ ಪುಟದಿಂದ) ಎಲ್ಲಾ ಬೆಳವಣಿಗೆಗಳ ಬಗ್ಗೆ ಸಿದ್ದರಾಮಯ್ಯ ಅವರಿಗೂ ಮಾಹಿತಿ ಇದೆ.

ವೇಣುಗೋಪಾಲ್ ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದಿರುವ ದಾಖಲೆ ಇದೆ. ಬೆಳಗ್ಗೆ ಖರ್ಗೆ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ, ನಂತರ ಇತರೆ ಮುಖಂಡರೊಂದಿಗೂ ಚರ್ಚಿಸಿದ್ದಾರೆ.

ಬೆಂಗಳೂರಿಗೆ ಬಂದ ಸಂದರ್ಭದಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವ ವೇಣುಗೋಪಾಲ್, ಈ ಬಾರಿ ಎಲ್ಲವನ್ನೂ ಗೌಪ್ಯವಾಗಿ ಇಟ್ಟಿದ್ದು, ಮಾಧ್ಯಮಗಳ ಮುಂದೆಯೂ ಯಾವುದೇ ಹೇಳಿಕೆ ನೀಡಿಲ್ಲ.

ಖರ್ಗೆ ಅವರು ಮಾತ್ರ ನಿನ್ನೆ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕರ್ನಾಟಕದಲ್ಲಿ ಬಿಜೆಪಿಯವರು ಸಣ್ಣ ವಿಷಯವನ್ನು ಇಟ್ಟುಕೊಂಡು ದೊಡ್ಡದನ್ನಾಗಿ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲಾದ ನಂತರವೂ ನಾವು ಅವರ ಜೊತೆ ನಿಂತಿದ್ದೇವೆ. ಅವರಿಗೆ ಬೆಂಬಲ ಕೊಟ್ಟಿದ್ದೇವೆ ಎಂದರು, ಆದರೆ, ಪಕ್ಷಕ್ಕಿಂತ ದೊಡ್ಡವರು ಯಾರೂ ಇಲ್ಲ ಎಂಬ ಸೂಕ್ಷ್ಮ ಸಂದೇಶ ರವಾನೆ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ಇವತ್ತು ಮುಖ್ಯಮಂತ್ರಿ ಇರುತ್ತಾರೆ, ನಾಳೆ ಇರಲ್ಲ. ಆದರೆ, ಪಕ್ಷ ಇರಲಿದೆ, ನಾವು ಮುಡಾ ವಿಚಾರದಲ್ಲಿ ಅವರ ಹಿಂದೆ ನಿಂತಿರುವುದು ಪಕ್ಷದಲ್ಲಿರುವ ಕಾರಣ ಎಂದರು.

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಆಂಜನೇಯ ಬಡಾವಣೆ, 5ನೇ ಕ್ರಾಸ್, ಆಂಜನೇಯ ದೇವಸ್ಥಾನದ ಹತ್ತಿರ, ನೆಲಮಹಡಿ, ಎಲ್ಲಾ ಸೌಕರ್ಯವಿರುವ 2 BHK ಮನೆ ಅಕ್ಟೋಬರ್ 15ಕ್ಕೆ ಸಿಗುತ್ತದೆ.
99729 75085

**ಮನೆ ಬಾಡಿಗೆಗೆ ಇದೆ**
ವಿದ್ಯಾನಗರ, 2ನೇ ಮುಖ್ಯರಸ್ತೆ, 5ನೇ ಅಡ್ಡ ರಸ್ತೆ, ಕಸ್ತೂರ ಬಾ ಸಮಾಜದ ಹತ್ತಿರ, 2BHK 2nd Floor, 3BHK 1st Floor (ಸಸ್ಯಹಾರಿಗಳಿಗೆ ಮಾತ್ರ)
99866 17014, 99457 75766

**ಮನೆ ಬಾಡಿಗೆಗೆ ಇದೆ**
ಅಶೋಕ ನಗರ, ಹೆಚ್.ಪಿ. ಗ್ಯಾಸ್ ಗೋಡೌನ್ ಹತ್ತಿರ ಯರಗುಂಟೆ ಮುಖ್ಯರಸ್ತೆಯಲ್ಲಿ ಎಲ್ಲಾ ಸೌಕರ್ಯವಿರುವ ಹಾಗೂ ಕೇಂದ್ರಿಯ ಶಾಲೆ, GMIT ಕಾಲೇಜಿಗೆ ಸಮೀಪವಿರುವ 1 BHK ಮನೆ ಬಾಡಿಗೆಗೆ ಇದೆ.
97409 94762

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರಿಂದ ಸಂಜೆ 5
ಫೋ. : 08192 254736

**2 BHK ಮನೆ ಬಾಡಿಗೆಗಿದೆ**
1ನೇ ಮಹಡಿ, ಕಾರ್ಪೊರೇಶನ್ ಹಾಗೂ ಬೋರ್‌ವೆಲ್ ನೀರಿನ ವ್ಯವಸ್ಥೆಯಿರುವ 1ನೇ ಮೇನ್, 9ನೇ ಕ್ರಾಸ್, ಕೆಟಿಜೆ ನಗರದಲ್ಲಿ 2 ಬೆಡ್ ರೂಂ ಮನೆ ಖಾಲಿಯಿದೆ.
73489 15945

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
**ಡಾ. ಇ.ಆರ್. ಸಿದ್ದೇಶಿ**
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರುಳು, ಪ್ಯಾಂಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
ಭೇಟಿಯ ಸಮಯ : ಬೆ. 9 ರಿಂದ ಮಧ್ಯಾಹ್ನ 3 ಹಾಗೂ ಸಂಜೆ 7.30 ರಿಂದ 8.30
By Appointment only.
94837 23166

**ಮತ್ಸ್ಯದ ಮನೆ**
ಮನೆಯಲ್ಲಿ ಬಾಳೆ ಎಲೆ ಮೀನಿನ ಊಟ.
95133 14666
ಪಿಸಾಳೆ ಕಾಪೌಂಡ್, ದಾವಣಗೆರೆ

**ರೂಮ್ ಬಾಡಿಗೆಗೆ**
12x16 ಅಟ್ಯಾಚ್ಡ್ ಬಾತ್ ರೂಮ್ 'ತಾಯಿ ಕೃಪ' # 628/12-13/ ABC/7 A ಶಿವಾನಂದಯ್ಯ ಕಾಂಪೌಂಡ್ ಜಯದೇವ ಸರ್ಕಲ್ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ.
94498 23373, 63616 26506

**ಬಾಡಿಗೆಗೆ ಇದೆ**
ಇಂಡಸ್ಟ್ರೀಯಲ್ ಏರಿಯಾದಲ್ಲಿ ಕೈಗಾರಿಕೆ ನಡೆಸಲು ಅಥವಾ ಟೈಲ್ಸ್ ಸ್ಟಾಕ್ ಮಾಡಲು ವಿದ್ಯುತ್ ಸೌಕರ್ಯವಿರುವ 30x50 ಅಳತೆಯ ಷೆಡ್ ಬಾಡಿಗೆಗಿದೆ.
98865 73205
94493 20577

**3BHK/2BHK ಮನೆ ಬಾಡಿಗೆಗಿದೆ**
ವಾಸ್ತು ಪ್ರಕಾರದ, ಪೂರ್ವ-ಮುಖದ, ಸ್ವತಂತ್ರವಾದ ಮನೆ: ಸಸ್ಯಾಹಾರಿಗಳ ವಾಸಕ್ಕೆ..ವಿದ್ಯಾರ್ಥಿಗಳಿಗೆ, ಮೆಸ್, ಪಿಜಿ ಸೆಂಟರ್, ಮಕ್ಕಳ ಶಾಲೆ, ಕಛೇರಿ, ಸಂಗೀತ- ನರ್ತನ ಶಾಲೆ, ವ್ಯಾಯಾಮ ಶಾಲೆ (Gym), ಆಶ್ರಮ ಹಾಗೂ ಇತರೆ ಉದ್ದೇಶಗಳಿಗೆ, ಹೌಸಿಂಗ್ ಬೋರ್ಡ್ ಕಾಲೋನಿ, ಮೆಡಿಕಲ್ ಹಾಸ್ಟೆಲ್ ಪಕ್ಕ, Extended MCC 'B' Block. Students (Ladies)Preferred.
63015 58346

**FOR RENT**
3rd Floor Space 2500 Sqft. Available for Banks, Office, Restaurant. Contact :
95914 42550

**ವಾಣಿಜ್ಯ ಮಳಿಗೆ ಬಾಡಿಗೆಗಿದೆ**
ಲಕ್ಷ್ಮೀ ಪ್ಲಾಜಾ, ಚಾಮರಾಜ ಪೇಟೆ, ಕೋದಂಡ ರಾಮ ದೇವಸ್ಥಾನ ಹತ್ತಿರ, ದಾವಣಗೆರೆ-1. 09x28 ಅಳತೆಯ, 1ನೇ ಮಹಡಿ ಬಾಡಿಗೆಗೆ ಇದೆ.
90085 77729

**2 BHK HOUSE FOR RENT**
1st floor, Kirwadi Layout, 4th main Road, Near Montessori Convent, Davangere-2.
99010 33555, 99457 13192

**ಸೈಟುಗಳು ಮಾರಾಟಕ್ಕಿವೆ**
ಪಶ್ಚಿಮ ಮತ್ತು ದಕ್ಷಿಣಾಭಿಮುಖವಾಗಿರುವ ಅಪ್ರೂವ್ಡ್ 30x50 ಅಳತೆಯ ಸೈಟ್‌ಗಳು ಮಾರಾಟಕ್ಕಿವೆ. ಸುಬ್ರಮಣ್ಯ ನಗರ, ಹೈಟೆಕ್ ಆಸ್ಪತ್ರೆ ಹತ್ತಿರ, ಪುನೀತ್ ಬಡಾವಣೆ, ದಾವಣಗೆರೆ.
98443 04848

**WANTED**
Lady Receptionist with Typing Knowledge (PUC) Required for Scan Centre Working Hours 11 am to 8 pm
94483 39242

**ಖರೀದಿ & ಮಾರಾಟಕ್ಕಿದೆ**
ಡಾಲರ್ಸ್ ಕಾಲೋನಿ, 30x30 ದಕ್ಷಿಣಕ್ಕೆ ಸೈಟ್ ಮಾರಾಟಕ್ಕಿದೆ.
ಸುರೇಶ್
95911 60520

**ಮನೆ ಬಾಡಿಗೆಗೆ ಇದೆ**
ನೂತನ ಹಾಗೂ ತಿಮ್ಮಾರೆಡ್ಡಿ ಕಾಲೇಜ್ ಹಿಂಭಾಗ, 5ನೇ B ಕ್ರಾಸ್ ರೋಡ್, ನ್ಯೂ ಎಕ್ಸ್‌ಟೆನ್ಷನ್‌ನಲ್ಲಿ ನೆಲ ಮತ್ತು 1ನೇ ಅಂತಸ್ತಿನ ಎರಡು ಬೆಡ್ ರೂಂ ಹಾಗೂ ಎರಡನೇ ಅಂತಸ್ತಿನ ಸಿಂಗಲ್ ಬೆಡ್ ರೂಂಗಳು, 24/7 ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯ ಇರುವ ಮನೆ ಬಾಡಿಗೆಗಿದೆ.
98450 23912

**FOR RENT**
@ Near Vidyanagara 1st Bus Stop
1) Specious North Facing 2BHK House in 1st Floor with Vastu
2) A Well Furnished Room with Attached Bath Room, Hot Water, Fan, Lights 24 hours water facility (Veg Only) Contact :
63615 93954

**ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ**
ಡಿಗ್ರಿ ಪಾಸಾದ 18/35 ವರ್ಷದೊಳಗಿನ ಹುಡುಗರು/ಹುಡುಗಿಯರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಕಂಪ್ಯೂಟರ್‌ನಲ್ಲಿ MS Office ಆದವರಿಗೆ ಮೊದಲ ಆದ್ಯತೆ. ಆಕರ್ಷಕ ವೇತನ ನೀಡಲಾಗುವುದು. ಈ ಕೆಳಗಿನ ಫೋನ್‌ಗೆ ಸಂಪರ್ಕಿಸಿ:
89708 16788

**ಮಳಿಗೆ ಬಾಡಿಗೆಗೆ ಇದೆ**
ಮಂಡಿಪೇಟೆ ಮುಖ್ಯರಸ್ತೆ, ದುರ್ಗ ಲಾಡ್ಜ್ ಕೆಳಗೆ 5 ಚದುರದ ಮಳಿಗೆ ಬಾಡಿಗೆಗೆ ಇದೆ. ಸಂಪರ್ಕಿಸಿ :
98440 96775

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ಸಿಟಿ ಮಧ್ಯ ಇರುವ ಔಷಧ ಅಂಗಡಿಯಲ್ಲಿ ಎಸ್ಸೆಸ್ಸೆಲ್ಸಿ ಪಾಸ್‌ದ ಅಥವಾ ಫೇಲಾದ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
94481 14071
99020 69453

**ಮನೆ ಬಾಡಿಗೆಗಿದೆ**
ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಹಿಂಭಾಗದಲ್ಲಿ 3 BHK ವಿನಾಯಕ ಬಡಾವಣೆ, 3ನೇ ಮೇನ್, 2ನೇ ಕ್ರಾಸ್, ದಾವಣಗೆರೆ. (ಸಸ್ಯಹಾರಿಗಳಿಗೆ ಮಾತ್ರ)
96200 93206

**REQUIRED**
Experienced, Accountant having Tally and GST knowledge are required to work in Office.
REDDY ASSOCIATIES
# 82/19,P B Road, Beside Wellness Stores, Opp: Renuka Manidar, Davangere.
99000 22030

**ರಾಜ್ಯಮಟ್ಟದ ಇನ್‌ಸ್ಟಾಗ್ರಾಮ್ ರೀಲ್ಸ್ ಸ್ಪರ್ಧೆ**
ಯುವಕರು, ಯುವತಿಯರು, ಮಹಿಳೆಯರು ಸಂಪರ್ಕಿಸಿ.
89714 63581

**ಉದ್ಯೋಗ ಅವಕಾಶ**
ಟ್ಯಾಲಿ ಪ್ರೈಮ್ ಬಗ್ಗೆ ಮೂಲಭೂತ ಜ್ಞಾನ ಹೊಂದಿರುವ ಪುರುಷ ಅಭ್ಯರ್ಥಿಗೆ ಉದ್ಯೋಗ ಅವಕಾಶ. ದಯವಿಟ್ಟು ಸಂಪರ್ಕಿಸಿ :
96117 66329

**SSLC/PUC ಪರೀಕ್ಷೆಯಲ್ಲಿ ಮತ್ತು ಅವಕಾಶ ವಂಚಿತ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ**
ದೂರ ಶಿಕ್ಷಣದ ಮುಖಾಂತರ ಆನ್‌ಲೈನ್ ಪರೀಕ್ಷೆ ಮುಖಾಂತರ ಉತ್ತಮ ಫಲಿತಾಂಶಕ್ಕಾಗಿ ಮುಂದಿನ ವಿದ್ಯಾಭ್ಯಾಸ ಮುಂದುವರಿಸಲು/ಸರ್ಕಾರಿ/ಖಾಸಗಿ ಉದ್ಯೋಗಾವಕಾಶ ಪಡೆಯಬಹುದಾದ ಕರ್ನಾಟಕ ಸರ್ಕಾರದ ಪ.ಪೂ. ಮಾರ್ಗಸೂಚಿ ಪಟ್ಟಿಯಲ್ಲಿ (ಸಿಬಿಎಸ್‌ಇ) ಅನುಮೋದಿತಕೊಂಡಿದೆ.
BOSSE-SIKKIM (ಪ್ರವೇಶ ಪ್ರಾರಂಭವಾಗಿದೆ)
SHREYAS CORRESPONDENCE COLLEGE, DCM TownShip, Davangere.
97317 40827, 83107 47112, 97432 20274

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು. ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್ ಪ್ರಾವಿಜನ್ ಸ್ಟೋರ್, ಎಗ್‌ರೈಸ್ ಸೆಂಟರ್ ಇತ್ಯಾದಿ. ಶಿವಪ್ಪಯ್ಯ ಸರ್ಕಲ್, ದಾವಣಗೆರೆ. ಸಂಪರ್ಕಿಸಿ.
96860 22969

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಮಳಿಗೆ ಬಾಡಿಗೆಗೆ ಇದೆ**
ಹೊಸ KSRTC ಬಸ್ ಸ್ಟ್ಯಾಂಡ್ ಎದುರಿಗೆ 30x30 ಅಡಿ ಮೊದಲ ಮಹಡಿ
98440 65850

**1 BHK ಮನೆ ಬಾಡಿಗೆಗಿದೆ**
ಸಿದ್ದವೀರಪ್ಪ ಬಡಾವಣೆ, 3ನೇ ಕ್ರಾಸ್, ಹಳ್ಳಿಮಹಾದೇವಪ್ಪ ಹೈಸ್ಕೂಲ್ ಹತ್ತಿರ, #1648/46ರ, 2ನೇ ಮಹಡಿಯಲ್ಲಿ ಮನೆ ಬಾಡಿಗೆಗಿದೆ. (ಸಸ್ಯಹಾರಿಗಳಿಗೆ ಮಾತ್ರ)
94489 48075

**ವಾಣಿಜ್ಯೋಪಯೋಗಿ ಕಟ್ಟಡ ಮಾರಾಟಕ್ಕಿದೆ**
ದಾವಣಗೆರೆಯ ಎಂ.ಜಿ.ರಸ್ತೆಯಲ್ಲಿ 10 x40 ಅಡಿ ಅಳತೆಯ 3 ಅಂತಸ್ತಿನ ಸುಸಜ್ಜಿತ ವಾಣಿಜ್ಯೋಪಯೋಗಿ ಕಟ್ಟಡ ಮಾರಾಟಕ್ಕಿದೆ.
ಸಂಪರ್ಕಿಸಿ : ರತನ್
ಮೊ : 99006 69719

**ಬೇಕಾಗಿದ್ದಾರೆ**
ವೆಯ್ಟರ್ಸ್ ಕ್ಯಾಪ್ಟನ್, ಬಿಲ್ಲಿಂಗ್, ಕೌಂಟರ್ ಸೇಲ್ಸ್ ಬೇಕಾಗಿದ್ದಾರೆ.
ಹೋಟೆಲ್ ಪುಡ್ಡೀಸ್
ಚರ್ಚ್ ರೋಡ್, ತೊಗಟವೀರ ಕಲ್ಯಾಣ ಮಂಟಪದ ಹತ್ತಿರ, ದಾವಣಗೆರೆ.
98861 56688

**ಮನೆ ಮಾರಾಟಕ್ಕಿದೆ**
ಕುಂಬಳೂರು ಹರಿಹರ ತಾಲ್ಲೂಕು ಶಿವಮೊಗ್ಗ-ಹರಿಹರ ರಸ್ತೆ, ನಿಟ್ಟೂರು ಕ್ರಾಸ್‌ನಲ್ಲಿ 36x88 ಅಳತೆಯಲ್ಲಿ ಬೋರ್ ವೆಲ್ ಸೌಲಭ್ಯವಿರುವ ಉತ್ತರ ದಿಕ್ಕಿನ 3 BHK ಹೊಸ ಮನೆ (36x68) ಮತ್ತು ಹಳೆಮನೆ (36x20) ಮಾರಾಟಕ್ಕೆ ಇದೆ.
78925 87685, 97399 03499

**ವಾಣಿಜ್ಯ ಕಟ್ಟಡ ಬೇಕಾಗಿದೆ**
30x40 ಅಡಿ ನಿವೇಶನದಲ್ಲಿ ನಿರ್ಮಿಸಿರುವ 1000 ಚದುರ ಅಡಿ ವಿಸ್ತೀರ್ಣದ ವಾಣಿಜ್ಯ ಕಟ್ಟಡ ಕ್ರಯಕ್ಕೆ ಬೇಕಾಗಿದೆ. ಸಂಪರ್ಕಿಸಿರಿ :
8884872070, 9986216320

**FIRST FLOOR SHOP FOR RENT**
For Office, Mini Bank, Ready Made Garment Shop, Beauty Parlour Etc., (with Wash Room Facility) N.R. Road, Davangere.
94483 69523

**ಹೊಸ ಮನೆಗಳು ಭೋಗ್ಯಕ್ಕಿವೆ**
ದಾವಣಗೆರೆ ವಿದ್ಯಾನಗರ, 12ನೇ ಕ್ರಾಸ್, ಪಾರ್ಕ್ ಎದುರು, ಉತ್ತರ ದಿಕ್ಕಿಗಿರುವ 30x60 ಅಳತೆಯಲ್ಲಿ ಕಟ್ಟಿರುವ 1ನೇ ಮಹಡಿಯಲ್ಲಿ 2 BHK 2 ಮನೆಗಳು, 2ನೇ ಮಹಡಿಯಲ್ಲಿ 2 BHK 1 ಮನೆ ಒಟ್ಟು 3 ಮನೆಗಳು ಎಲ್ಲಾ ಸೌಕರ್ಯವಿರುವ ಸುಸಜ್ಜಿತವಾದ ಹೊಸ ಮನೆಗಳು ಭೋಗ್ಯಕ್ಕಿವೆ. (ಸಸ್ಯಹಾರಿಗಳಿಗೆ ಮಾತ್ರ)
84318 17196

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಮಾಗಾನಹಳ್ಳಿ ಮೇನ್‌ರೋಡ್‌ಗೆ 10 ಗುಂಟೆ ಜಮೀನು ಮಾರಾಟಕ್ಕಿದೆ
78997 60749, 99726 75759

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10 CBSE / ICSE Boards, NEET / IIT - JEE / Olympiads Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB NEET / IIT - JEE / KCET / CLAT - Printed Notes + Study Materials
97398 65711, 94822 44114

**ಮನೆ ಬಾಡಿಗೆಗೆ ಇದೆ**
3 BHK + 1 ಅಟ್ಯಾಚ್ ರೂಂ ಮಹಡಿ ಮೇಲೆ ಹಾಗೂ 3 ಕಾರು ನಿಲ್ಲಿಸಲು ಸ್ಥಳವಿರುವ, ಆಫೀಸು ಅಥವಾ ವಾಸಕ್ಕೆ ಯೋಗ್ಯವಾದ ವಿಶಾಲವಾದ ಮನೆ ಬಾಡಿಗೆಗೆ ಇದೆ. ಸೋಲಾರ್, ಬೋರ್‌ವೆಲ್ ಹಾಗೂ ಮುನ್ಸಿಪಲ್ ನೀರಿನ ಸೌಲಭ್ಯವಿದೆ. 4ನೇ ಮೇನ್, ನಿಟುವಳ್ಳಿ ಹೊಸ ಬಡಾವಣೆ, SBI ಹತ್ತಿರ
94482 01195

**ಬೇಕಾಗಿದ್ದಾರೆ**
1) ಸೇಲ್ಸ್ ಮನ್ 2) ಟ್ಯಾಲಿ ಆಪರೇಟರ್
ಅನುಭವವುಳ್ಳವರು ಮಾತ್ರ ಸಂಪರ್ಕಿಸಿ.
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
9900438052, 9740153513

**HOUSE FOR RENT**
1 BHK for Rent, 2nd Floor Face: purva, KB extension 2nd main, 3rd cross Davangere-577002.
70265 64680

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಮನೆ ಮಾರಾಟಕ್ಕಿದೆ**
# 2287, 8ನೇ ಮೇನ್, ಎಂ.ಸಿ.ಸಿ. ಎ ಬ್ಲಾಕ್, ಸಾಯಿಬಾಬಾ ಮಂದಿರದ ಹತ್ತಿರ, 44x60 ಸೈಟಿನಲ್ಲಿ ಕಟ್ಟಿರುವ ಎರಡು ಅಂತಸ್ತಿನ ಮನೆ ಸೈಟ್ ದರದಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ :
98868 50964

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಡ್ರೈವಿಂಗ್ ಲೈಸೆನ್ಸ್ ಹಾಗೂ ದ್ವಿಚಕ್ರವಾಹನ ಹೊಂದಿರುವ ಕಾರ್ ಡ್ರೈವರ್ ಬೇಕಾಗಿದ್ದಾರೆ. (ಮೇಲ್ಕಂಡ ನಂಬರ್‌ಗೆ ಈ ಮೊದಲು ಕರೆ ಮಾಡಿದವರು ಪುನಃ ಕರೆ ಮಾಡಬೇಡಿ)
94486 56091

**ಗೋಡೌನ್ ಜಾಗ ಬಾಡಿಗೆಗೆ ಇದೆ**
ಶಾಮನೂರು ಬೈ ಪಾಸ್ ಹತ್ತಿರ, ದಾವಣಗೆರೆ. ವಿಚಾರಿಸಿ :
ಸನತ್ : 78299 91320
ಕೃಷ್ಣಮೂರ್ತಿ : 85539 20876

**ಹೋಟೆಲ್ ಬಾಡಿಗೆಗೆ ಇದೆ**
ಹೋಟೆಲ್‌ಗೆ ಬೇಕಾದ ಕಿಚನ್ ಐಟಮ್ ಸೇಲ್‌ಗೆ ಇದೆ. ಹೈಟೆಕ್ ಆಸ್ಪತ್ರೆ ರಸ್ತೆ, ದಾವಣಗೆರೆ.
97312 62215
97405 14510

**ಬೇಕಾಗಿದ್ದಾರೆ**
ಕಚೇರಿ ಕೆಲಸಕ್ಕೆ ಅನುಭವಿ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ದಾವಣಗೆರೆ ನಗರದ ಮಹಿಳಾ ಅಭ್ಯರ್ಥಿಗೆ ಆದ್ಯತೆ.
94480 13311
63617 92665

**ರೂಂ ಬಾಡಿಗೆಗೆ ಇದೆ**
#77, 7ನೇ ಅಡ್ಡರಸ್ತೆ, ಎ ಬ್ಲಾಕ್, ದೇವರಾಜ್ ಅರಸು ಬಡಾವಣೆ, ಅನ್ನಪೂರ್ಣೇಶ್ವರಿ ದೇವಸ್ಥಾನದ ಎದುರು, ದಾವಣಗೆರೆ.
99646 86492

**ಪುರುಷ ಅಭ್ಯರ್ಥಿಗಳು ಕೆಲಸಕ್ಕೆ ಬೇಕಾಗಿದ್ದಾರೆ**
ಕಛೇರಿಯಲ್ಲಿ ಕೆಲಸ ನಿರ್ವಹಿಸಲು ಕಂಪ್ಯೂಟರ್‌ನಲ್ಲಿ ಎಂ.ಎಸ್.ಆಫೀಸ್ ಅನುಭವವುಳ್ಳವರು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಫೋಟೋಶಾಪ್‌ನವರು ಸಹ ಬೇಕಾಗಿದ್ದಾರೆ.
ಸಂಪರ್ಕಿಸಿರಿ: ಶ್ರೀ ರೇಣುಕಾದೇವಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ (ರಿ)
ಹೆಚ್.ಡಿ.ಎಫ್.ಸಿ. ಬ್ಯಾಂಕ್ ಪಕ್ಕ, 2ನೇ ಮಹಡಿ, ಹೆಚ್.ಎಂ. ರಸ್ತೆ, ದಾವಣಗೆರೆ 577001
ಮೊಬೈಲ್ ನಂ: 9448338657

**ದಾಖಲೆ ಪತ್ರ ಕಳೆದಿದೆ**
ವಿಜಯನಗರ ಬಡಾವಣೆ ವಾಸಿ ರುದ್ರಮ್ಮ ಕೋಂ ಲೇಟ್ ಪರಮೇಶ್ವರಪ್ಪ ಇವರು 13.09.2024 ರಂದು ದಾವಣಗೆರೆ ಮಹಾನಗರ ಪಾಲಿಕೆಗೆ ಭೇಟಿ ನೀಡಿದ ಸಮಯದಲ್ಲಿ ಮೂಲ ವಿಲ್ ಪತ್ರ, ಮೂಲ ಕಂದಾಯ ಪಾವತಿಸಿದ ರಸೀದಿಗಳು, ಆಧಾರ್ ಕಾರ್ಡ್ ಮತದಾನದ ಗುರುತಿನ ಚೀಟಿ, ಇನ್ನು ಇತರೆ ದಾಖಲೆಗಳು ಕಳೆದು ಹೋಗಿವೆ. ಸದರಿ ದಾಖಲೆಗಳು ಯಾರಿಗಾದರು ಸಿಕ್ಕಲ್ಲಿ ಕೆಳಗಿನ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಲು ವಿನಂತಿ.
94802 49191

**WANTED**
1) Marketing executive, Qualification BBM, Bcom, MBA, Fresher.
NTP shreenithya Souharda Co opp ltd.
# 2673/A, SI Arcade, 1st floor, Dental college road, MCC `B' Block, Davangere:- 577004. Contact No :
99021 35008
96638 13674
ntpshreenithyasouharda@gmail.com

**ಹೊಸ ಮನೆಗಳು ಬಾಡಿಗೆಗಿವೆ**
2BHK ಮನೆಗಳು, ಉತ್ತಮವಾದ ಸಿಹಿ ನೀರು, ವಿಶಾಲವಾದ ಬೆಡ್ ರೂಂ ಮತ್ತು ವಿಶಾಲವಾದ ಹಾಲ್ ಇರುವ ಹೊಸ ಮನೆಗಳು ಬಾಡಿಗೆಗಿವೆ. ಸುಬ್ರಹ್ಮಣ್ಯ ನಗರ, ಹೈಟೆಕ್ ಹಾಸ್ಪಿಟಲ್ ಹತ್ತಿರ, ದಾವಣಗೆರೆ.
80505 91277

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಕ್ ಗೇಟ್ ಹತ್ತಿರ, ಅಮರಾವತಿ ರಸ್ತೆ, 6ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ. (1550/- ಚದುರ ಅಡಿ ) ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ.
97421 66799
98452 36274

**TO-LET**
2nd floor, 1BHK for rent # 303/4, PJ Extension, 2nd main Road, Stadium Road, Davangere.
96111 74878

**ಬೇಕಾಗಿದ್ದಾರೆ**
ಅನುಭವವುಳ್ಳ ಯುವತಿಯರು ಬಟ್ಟೆ ಅಂಗಡಿ ಕೆಲಸಕ್ಕೆ ಜಾಕಿ ಶೋರೂಮ್‌ಗೆ ಬೇಕಾಗಿದ್ದಾರೆ. ದರ್ಶನ್ ಆರ್ಕೇಡ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ, ಸಂಪರ್ಕಿಸಿ :
08192 224842
ಸಮಯ 11Am to 6Pm ಬರುವಾಗ ದಯವಿಟ್ಟು ಪೋಟೋ ಬಯೋಡೇಟಾ ತನ್ನಿ

**ಸೈಟುಗಳು ಮಾರಾಟಕ್ಕಿವೆ**
ಹರಿಹರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ. 30x40, 30x50, 40x60
93431 10009

**ಮಳಿಗೆ ಬಾಡಿಗೆಗಿದೆ**
**Shop For Rent**
ಬೆಳ್ಳುಳ್ಳಿ ಬಿಲ್ಡಿಂಗ್, ಪಿ.ಬಿ. ರೋಡ್, ಶ್ರೀ ಲಾಡ್ಜ್ ಎದುರು, ಗ್ರೌಂಡ್ ಫ್ಲೋರ್, 1400 ಚ.ಅ., 1ನೇ ಮಹಡಿ - 1400 ಚ.ಅ., 2ನೇ ಮಹಡಿ, 1400 ಚ.ಅ.
99022 79003

**ಕೆಲಸಕ್ಕೆ ಬೇಕಾಗಿದ್ದಾರೆ**
ಸಗಟು ಔಷಧಿ ಅಂಗಡಿಯಲ್ಲಿ (ಜನರಿಕ್ & ಜನರಲ್) ಕೆಲಸ ಮಾಡಲು ಸೇಲ್ಸ್ ಬಾಯ್ ಬೇಕಾಗಿದ್ದಾರೆ. 'ವೃಷಭ್ ಮೆಡಿಕಲ್ಸ್' ಜಾಲಿನಗರ ಶಿವಾಲಿ ರಸ್ತೆ, ದಾವಣಗೆರೆ - 6.
99805 32781

**ರಕ್ತ ದಾನ ಶ್ರೇಷ್ಠ ದಾನ**

**PHOTOSHOP, TALLY, JAVA, HTML STOCK TRADING CLASS**
CLASSIC COMPUTERS
97426 10385
91081 85926

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಿ. : 01.10.2024 to 08.10.2024ರ ವರೆಗೆ 7 ದಿನಗಳ ದಕ್ಷಿಣ ಭಾರತದ ಪ್ರವಾಸ ಮಧುರೈ, ಪಳನಿ, ರಾಮೇಶ್ವರ, ಕನ್ಯಾಕುಮಾರಿ
ಕೇವಲ 10 ಸೀಟುಗಳಿವೆ ಆಸಕ್ತಿಯುಳ್ಳವರು ಕರೆ ಮಾಡಿ.
90086 26473, 94485 33928

**FOR SALE**
Industrial Estate Lokikere Road, Plot No. M-8, IInd Cross, Davangere.
Mesurement : 75x150
3000 Sqft Shed, 37 HP Power
98867 26258
96207 78993

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water.
Vidyanagar last city bus stop, Davangere
8951938228, 8050222181

**WANTED**
Tele callers For Banking Products.
99869 19000
70191 37270

**WANTED**
Urban money (Corporate loan DSA) is looking for a Sales professional
• Tele sales executive (Female) - 4 post
• Relationship manager Males - 5 Post
• Sales manager -1 post
• Backend team (Operations - Female) -1 Post
Contact - Santhosh
99805 70746

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**JOB REQUIRED**
Male candidate for Sales and marketing Executive Minimum 2 years experience in sales & marketing.
AM BUILDERS
Vidyanagar last city bus stop Davanagere.
89519 38228, 80502 22047

**WANTED**
Chef for a Cafe and a Cashier, manager 1 year experience, 2nd PU Pass/fail Boys Hostel Road, DVG.
78139 19191

**3 BHK HOUSE FOR LEASE**
#4162/22, 4th main, 2nd cross, Siddaveerappa badavane, Davangere.
99028 49996

**V-MAX RLEVATORS LIFT COMPANY**
Diploma, Engeenering, B.Com, M.Com and any degree for marketing (Male & Female) ITI & PUC & SSLC for Erection (Male Only) M.Com and MBA for accounts (Male and Female) Urgent Required
Vanitha HR : 88674 22705
Santhosh HL : 78991 34005

**ವಾಹ್ ಕಾಫಿ !! ರಿಚ್ ಕಾಫಿ !!**
SRK COFFEE
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಶಿವಮೊಗ್ಗ - ಹಗರಿಬೊಮ್ಮನಹಳ್ಳಿ ರಸ್ತೆ ಅಭಿವೃದ್ಧಿಗಾಗಿ ನಿರಂತರ ಪ್ರಯತ್ನ



## ಅರಳಹಳ್ಳಿ : ಶಾಲಾ ಕೊಠಡಿಗಳ ಉದ್ಘಾಟನೆಯಲ್ಲಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿಕೆ

ಮಲೇಬೆನ್ನೂರು, ಸೆ. 28- ಶಿವಮೊಗ್ಗ-ಹಗರಿಬೊಮ್ಮನಹಳ್ಳಿ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಿ, ಅಭಿವೃದ್ಧಿಪಡಿಸುವ ಬಗ್ಗೆ ಈಗಾಗಲೇ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರೊಂದಿಗೆ ಚರ್ಚಿಸಿದ್ದು, ಈ ಕುರಿತು ಶೀಘ್ರದಲ್ಲೇ ಅಧಿಕಾರಿಗಳ ಸಭೆ ನಡೆಸುವುದಾಗಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಅರಳಹಳ್ಳಿ ಗ್ರಾಮದಲ್ಲಿ ಇಂದು ಏರ್ಪಾಡಾಗಿದ್ದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಹೆಚ್ಚುವರಿ ಕೊಠಡಿ ಹಾಗೂ ನಲಿಕಲಿ ಕೊಠಡಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹರಿಹರ ತಾಲ್ಲೂಕಿನಲ್ಲಿ ಹಾಯ್ದು ಹೋಗಿರುವ ಎಸ್.ಹೆಚ್. ರಸ್ತೆ ಅಲ್ಲಲ್ಲಿ ಹದಗೆಟ್ಟಿದ್ದು, ಈ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಕುರಿತು ನನಗೂ ಸಾಕಷ್ಟು ಮನವಿಗಳು ಬಂದಿವೆ. ಅಲ್ಲದೇ, ಹರಿಹರ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿ ಬಗ್ಗೆ ನನಗೂ ಕಾಳಜಿ ಇದೆ. ಇಲ್ಲಿ ಶಾಸಕರಾಗಿ ಆಯ್ಕೆಯಾದವರು ಬಹುತೇಕ ವಿರೋಧ ಪಕ್ಷದಲ್ಲಿರುತ್ತಾರೆ. ಹಾಗಾಗಿ ಅಭಿವೃದ್ಧಿ ಕುಂಠಿತವಾಗುತ್ತಿರುವುದು ಬೇಸರದ ವಿಷಯ ಎಂದು ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಹರಿಹರ ಕ್ಷೇತ್ರ ನನಗೆ ತವರು ಮನೆ ಇದ್ದಂತೆ. ನಾನು ವಿದ್ಯಾರ್ಥಿಯಾಗಿದ್ದಾಗ ಹರಿಹರದ ಸಂಪರ್ಕ ಬಹಳವಾಗಿತ್ತು. ಆ ಕಾರಣದಿಂದಾಗಿ ಈ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಎಸ್. ರಾಮಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಜೊತೆ ಸೇರಿ ಪಕ್ಷಾತೀತವಾಗಿ ಶ್ರಮಿಸುವುದಾಗಿ ಪ್ರಭಾ ಭರವಸೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಬಿ.ಪಿ. ಹರೀಶ ಮಾತನಾಡಿ, ಹರಿಹರ ಕ್ಷೇತ್ರದ ಅಭಿವೃದ್ಧಿ ಬಗ್ಗೆ ವಿಶೇಷ ಕಾಳಜಿ ಹೊಂದಿರುವ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಅಭಿನಂದಿಸುವುದಾಗಿ ಹೇಳಿ, ಕ್ಷೇತ್ರದ ಅಭಿವೃದ್ಧಿಗಾಗಿ ಸದಾ ಕೈಜೋಡಿಸುತ್ತೇನೆಂದರು.

ಉತ್ತರ-ದಕ್ಷಿಣವನ್ನು ಕೂಡಿಸುವ ಹರಿಹರ ಕ್ಷೇತ್ರದ ಪ್ರಮುಖ ರಸ್ತೆಯಾದ ಎಸ್.ಹೆಚ್. ರಸ್ತೆಯನ್ನು ಮೇಲ್ದರ್ಜೆಗೇರಿಸಿ, ಅಭಿವೃದ್ಧಿಪಡಿಸುವ ವಿಚಾರದಲ್ಲಿ ಸಂಸದರು ನಿರಂತರವಾಗಿ ಹೋರಾಟ ಮಾಡಬೇಕು. ನಾನು, ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ್ರು, ಹರಪನಹಳ್ಳಿ ಶಾಸಕರಾದ ಲತಾ ಮಲ್ಲಿಕಾರ್ಜುನ್ ಅವರಿಗೆ ಬೆಂಬಲವಾಗಿ ಇರುತ್ತೇವೆ ಎಂದು ಹೇಳಿದರು.

ವಾಹನಗಳ ದಟ್ಟಣೆ ಇರುವ ಹೊನ್ನಾಳಿ-ಹರಿಹರ ರಸ್ತೆ ಬಿಟ್ಟು, ಹೊನ್ನಾಳಿಯಿಂದ ತುಮ್ಮಿನಕಟ್ಟೆ-ಹಲಗೇರಿ ರಸ್ತೆ ಅಭಿವೃದ್ಧಿ ಮಾಡಿದ್ದಾರೆಂದು ಬೇಸರ ವ್ಯಕ್ತಪಡಿಸಿದ ಶಾಸಕ ಹರೀಶ್ ಅವರು, ಹರಿಹರ ಕ್ಷೇತ್ರ ಅಭಿವೃದ್ಧಿಯಲ್ಲಿ ಹಿಂದೆ ಉಳಿಯಲು ಇಲ್ಲಿ ಗೆಲ್ಲುವ ಶಾಸಕರು ವಿರೋಧ ಪಕ್ಷದವರಾಗಿರುತ್ತಾರೆ ಎಂಬ ಡಾ. ಪ್ರಭಾ ಅವರ ಮಾತು ಸತ್ಯ ಎಂದರು.

ಶಾಸಕರ ಅನುದಾನದಲ್ಲಿ ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ರಸ್ತೆ ಅಭಿವೃದ್ಧಿ ಆದ್ಯತೆ ನೀಡುತ್ತೇನೆ. ಹರಳಹಳ್ಳಿ ಶಾಲೆಗೆ ಹೈಟೆಕ್ ಶೌಚಾಲಯ ನಿರ್ಮಾಣಕ್ಕೆ ಸಂಸದರು ಮತ್ತು ನಾನು ಸೇರಿ ಅನುದಾನ ನೀಡುತ್ತೇವೆ ಎಂದು ಹರೀಶ ಹೇಳಿದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಹರಳಹಳ್ಳಿ ಗ್ರಾ.ಪಂ. ಅಧ್ಯಕ್ಷ ಎಂ. ಹೆಚ್. ಹನುಮಂತಪ್ಪ, ಉಪಾಧ್ಯಕ್ಷೆ ಜಯಮ್ಮ ಬಿ.ಕೆ. ತಿಮ್ಮಪ್ಪ, ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ಹನಗವಾಡಿ ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬಿದಾಲಿ, ಜಿ.ಪಂ. ಮಾಜಿ ಅಧ್ಯಕ್ಷ ಹನಗವಾಡಿ ವೀರೇಶ್, ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ಐರಣಿ ಅಣ್ಣಪ್ಪ, ಪಿ.ಆರ್. ಕುಮಾರ್, ಸಾರಥಿ ಮಂಜುನಾಥ್, ಬಿ. ವೀರಯ್ಯ, ಕೆ.ಪಿ. ಗಂಗಾಧರ್, ಗ್ರಾ.ಪಂ. ಸದಸ್ಯರಾದ ಎಂ.ಎನ್. ಸಿದ್ದಪ್ಪ, ಪಕ್ಕೀರಪ್ಪ, ಶ್ರೀನಿವಾಸ್, ರೂಪಾ, ಗ್ರಾಮದ ಮುಖಂಡರಾದ ಗಣೇಶಮೂರ್ತಿ, ಎ. ರಂಗನಾಥ್, ಅಣ್ಣಪ್ಪ, ಎಂ. ಚಂದ್ರಶೇಖರ್, ಎಸ್.ಸಿ. ಲಕ್ಷ್ಮಸ್ವಾಮಿ, ಸಿ.ಕೆ. ರಮೇಶ, ಶೃತಿ, ಪಕ್ಕೀರಪ್ಪ, ರಮೇಶ್, ಶಿವಕುಮಾರ್, ಹಾಲಿವಾಣದ ಕುಮಾರಸ್ವಾಮಿ, ಡಿ.ಡಿ. ಚಿಕ್ಕಪ್ಪ, ಮಲ್ಲನಾಯ್ಕನಹಳ್ಳಿಯ ಅಶೋಕ್, ಶೇಖರಪ್ಪ, ಪಿಡಿಓ ಕೆ.ಬಿ. ಶಾಂತಪ್ಪ, ಮುಖ್ಯ ಶಿಕ್ಷಕ ಹೆಚ್.ಶಿವಣ್ಣ, ಆರ್.ಆರ್. ಮಠ, ಸಿಆರ್‌ಪಿಗಳಾದ ಸತೀಶ್ ಕುಮಾರ್, ನಂಜುಂಡಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಬಿಇಓ ದುರುಗಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಗ್ರಾ.ಪಂ. ಕಾರ್ಯದರ್ಶಿ ಡಿ.ಡಿ. ರೇವಣಪ್ಪ ಸ್ವಾಗತಿಸಿದರು. ಶಿಕ್ಷಕ ಪದ್ಧಪ್ಪ ನಿರೂಪಿಸಿದರು.

# ರಾಜ್ಯಪಾಲರ ಕಚೇರಿ ಸಿಬ್ಬಂದಿ ತನಿಖೆ

## ಕಳಂಕಿತ ಅಧಿಕಾರಿಗೆ ಸರ್ಕಾರದ ನೆರವು, ಆಮಿಷ: ಹೆಚ್ಡಿಕೆ ಆರೋಪ



ಬೆಂಗಳೂರು, ಸೆ. 28 - ಸರಣಿ ಅಪರಾಧಗಳನ್ನು ಎಸಗಿರುವ ಭ್ರಷ್ಟ ಐಪಿಎಸ್ ಅಧಿಕಾರಿಯೊಬ್ಬರು ರಾಜ್ಯಪಾಲರ ಕಚೇರಿ ಸಿಬ್ಬಂದಿಯನ್ನೇ ತನಿಖೆಗೆ ಒಳಪಡಿಸಲು ಅನುಮತಿ ಕೋರಿದ್ದು, ಇವರಿಗೆ ರಾಜ್ಯ ಕಾಂಗ್ರೆಸ್ ಸರ್ಕಾರದ ಪೂರ್ಣ ಕೃಪಾಕಟಾಕ್ಷವಿದೆ ಎಂದು ಕೇಂದ್ರದ ಭಾರೀ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ಆರೋಪಿಸಿದ್ದಾರೆ.

ಲೋಕಾಯುಕ್ತ ವಿಶೇಷ ತನಿಖಾ ದಳದ ಐಜಿಪಿ ಎಂ.ಚಂದ್ರಶೇಖರ್ ಭ್ರಷ್ಟ ಅಧಿಕಾರಿಯಾಗಿದ್ದು, ಇಂತಹ ಅಧಿಕಾರಿಗಳನ್ನು ಇಟ್ಟುಕೊಂಡು ರಾಜ್ಯ ಸರ್ಕಾರ ತನಿಖೆ ಮಾಡಿಸುತ್ತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ಐಪಿಎಸ್ ಅಧಿಕಾರಿ ಚಂದ್ರಶೇಖರ್ ವಿರುದ್ಧ ಕೆಲ ದಾಖಲೆಗಳೊಂದಿಗೆ ಆರೋಪ ಮಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದಲ್ಲಿ ಯಾವ ತನಿಖೆಯೂ ಪಾರದರ್ಶಕವಾಗಿ ನಡೆಯುತ್ತಿಲ್ಲ. ರಾಜಕೀಯ ಸೇಡಿಗಾಗಿ ತನಿಖೆ ನಡೆಸಲಾಗುತ್ತಿದೆ. ಅದಕ್ಕೆ ಚಂದ್ರಶೇಖರ್ ಅವರಂಥ ಕಳಂಕಿತ ಅಧಿಕಾರಿಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಈ ಅಧಿಕಾರಿ ವಿರುದ್ಧ ಕೇಂದ್ರ ಗೃಹ ಸಚಿವಾಲಯಕ್ಕೆ ದೂರು ನೀಡಲಾಗುವುದು ಎಂದರು.

ನನ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ಲೋಕಾಯುಕ್ತಕ್ಕೆ ಬರೆದಿದ್ದ ಅತಿಗೌಪ್ಯ ಪತ್ರವೊಂದು ಸೋರಿಕೆಯಾಗಿತ್ತು. ಅದು ನಮ್ಮ ಕುಟುಂಬದ ವಿರುದ್ಧ ಅನೇಕ ತಿಂಗಳಿನಿಂದ ವೈಯಕ್ತಿಕವಾಗಿ ತೇಜೋವಧೆ ಮಾಡುತ್ತಿರುವ ಖಾಸಗಿ ಸುದ್ದಿವಾಹಿನಿಯೊಂದಕ್ಕೆ ಆ ಪತ್ರ ಲಭ್ಯವಾಗಿತ್ತು. ಅದು ಐಜಿಪಿ ಚಂದ್ರಶೇಖರ್ ಅವರಿಂದಲೇ ಸೋರಿಕೆಯಾಗಿದೆ. ಆದರೆ, ಅದೇ ಅಧಿಕಾರಿ ರಾಜ್ಯಪಾಲರ ಕಚೇರಿಯಿಂದಲೇ ಪತ್ರ ಸೋರಿಕೆ ಆಗಿದೆ ಎಂದು ಕಥೆ ಕಟ್ಟಿ ರಾಜ್ಯಪಾಲರ ಕಾರ್ಯಾಲಯದ ಸಿಬ್ಬಂದಿಯನ್ನು ತನಿಖೆಗೆ ಒಳಪಡಿಸಲು ಅನುಮತಿ ಕೊಡುವಂತೆ ಲೋಕಾಯುಕ್ತ ತನಿಖಾ ಸಂಸ್ಥೆಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

ಸಂವಿಧಾನ ಮತ್ತು ರಾಷ್ಟ್ರಪತಿಗಳ ಪ್ರತಿನಿಧಿಯಾಗಿ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುವ ರಾಜ್ಯಪಾಲರ ಕಾರ್ಯಾಲಯದ ಬಗ್ಗೆ ತನಿಖೆಗೆ ಅನುಮತಿ ಕೋರುವ ದರ್ಪವನ್ನು ಈ ಅಧಿಕಾರಿ ತೋರಿಸಿದ್ದಾರೆ. ಈ ಅಧಿಕಾರಿಗೆ ತಕ್ಕ ಶಾಸ್ತಿ ಕಾದಿದೆ ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಮೊದಲೇ ಸರಣಿ ಅಪರಾಧಗಳನ್ನು ಮಾಡಿ ಸಿಕ್ಕಿ ಹಾಕಿಕೊಂಡಿರುವ ಐಜಿಪಿ ಚಂದ್ರಶೇಖರ್ ಅವರಿಗೆ ರಾಜ್ಯ ಸರ್ಕಾರ ಆಮಿಷಗಳನ್ನು ಒಡ್ಡಿ, ಇಂತಹ ಕಾನೂನುಬಾಹಿರ ಕೃತ್ಯ ಮಾಡಿಸುತ್ತಿದೆ ಎಂದು ಆರೋಪಿಸಿದರು.

ಅವರಿಗೆ ಬೆಂಗಳೂರು ನಗರದ ಪೊಲೀಸ್ ಆಯುಕ್ತರ ಹುದ್ದೆಯ ಆಮಿಷ ಒಡ್ಡಲಾಗಿದೆ. ಈ ಸರ್ಕಾರ ಒಬ್ಬರಿಗೇ ಇಂತಹ ಆಮಿಷ ಒಡ್ಡಿಲ್ಲ, ಬಿ.ಕೆ.ಸಿಂಗ್, ಎಂ.ಚಂದ್ರಶೇಖರ್, ಗುಪ್ತದಳ ಮುಖ್ಯಸ್ಥರು ಸೇರಿದಂತೆ ಅನೇಕರಿಗೆ ಕಮೀಷನರ್ ಮಾಡುತ್ತೇವೆ ಎಂದು ಟೋಪಿ ಹಾಕಿದೆ. ಇಂಥ ಸರ್ಕಾರದಲ್ಲಿ ತನಿಖೆಗಳು ಪಾರದರ್ಶಕವಾಗಿ ನಡೆಯುತ್ತವೆ ಎನ್ನುವ ನಂಬಿಕೆ ಇಲ್ಲ ಎಂದರು.

ಪತ್ರ ಸೋರಿಕೆ ಬಗ್ಗೆ ರಾಜ್ಯಪಾಲರ ಸಿಬ್ಬಂದಿ ವಿಚಾರಣೆಗೆ ಚಂದ್ರಶೇಖರ್ ಪತ್ರ ಬರೆದು ಉದ್ಧಟತನ ತೋರಿಸಿದ್ದಾರೆ. ರಾಜ್ಯಪಾಲರ ಕಚೇರಿ ಪರಿಶೀಲನೆ ಮಾಡುತ್ತೇನೆ ಎಂದು ಚಂದ್ರಶೇಖರ್ ಕೇಳುತ್ತಾರೆಂದರೆ, ಈತನಲ್ಲಿ ಎಷ್ಟು ಉದ್ಧಟತನ ಇದೆ. ರಾಜ್ಯಪಾಲರ ಕಚೇರಿ ಸರ್ಚ್ ಮಾಡುವ ಸೂಪರ್‌ಕಾಪ್ ಯಾರಿರಬಹುದೆಂದು ಕೆದಕಿದಾಗ ತಮಗೆ ಈ ವ್ಯಕ್ತಿಯ ಹಿನ್ನೆಲೆ ಗೊತ್ತಾಯಿತು ಎಂದು ಚಂದ್ರಶೇಖರ್ ಹಿನ್ನೆಲೆಯನ್ನು ಬಿಡಿಸಿಟ್ಟರು.

ಈ ಚಂದ್ರಶೇಖರ್ ಮೂಲತಃ ಹಿಮಾಚಲ ಪ್ರದೇಶ ಕೇಡರ್‌ನ ಐಪಿಎಸ್ ಅಧಿಕಾರಿ. 1998ರಲ್ಲಿ ಹಿಮಾಚಲ ಪ್ರದೇಶ ಕೇಡರ್‌ನಿಂದ ಆಗಿ ಆಯ್ಕೆಯಾಗಿದ್ದವರು. ಐದು ವರ್ಷಗಳ ಅವಧಿಗೆ ನಿಯೋಜನೆ ಮೇಲೆ ಕರ್ನಾಟಕಕ್ಕೆ ಬಂದರು. ಈ ಅಧಿಕಾರಿ ಹಿಮಾಚಲ ಪ್ರದೇಶದಲ್ಲಿ ಹವಾಮಾನ ಸರಿಯಾಗಿಲ್ಲ ಎಂದು ಸುಳ್ಳು ದಾಖಲೆ ಸೃಷ್ಟಿ ಮಾಡಿ ಕರ್ನಾಟಕದಲ್ಲೇ ಅಧಿಕಾರದಲ್ಲಿ ಮುಂದುವರೆದಿದ್ದಾರೆ ಎಂದು ಮಾಹಿತಿ ನೀಡಿದರು.

ನಿಯೋಜನೆ ಮೇಲೆ ಬಂದ ಈ ವ್ಯಕ್ತಿ ನಂತರ ಕರ್ನಾಟಕ ಕೇಡರ್ ಅಧಿಕಾರಿ ಆಗಲು ಏನೆಲ್ಲಾ ಅಕ್ರಮ ಎಸಗಿದರು, ಯಾರ ನೆರವು ಪಡೆದುಕೊಂಡರು ಎನ್ನುವುದನ್ನು ನಾನು ಇಲ್ಲಿ ಹೇಳುವಂತಿಲ್ಲ, ಅದು ಬಹಳ ಸೂಕ್ಷ್ಮ ವಿಚಾರ ಎಂದು ಕೇಂದ್ರ ಸಚಿವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಐಜಿಪಿ ಚಂದ್ರಶೇಖರ್ ವಿರುದ್ಧ ಹಲವಾರು ದೂರುಗಳು ದಾಖಲಾಗಿ, ಆರೋಪ ಪಟ್ಟಿಗಳು ಸಲ್ಲಿಕೆಯಾಗಿವೆ. ಈ ವ್ಯಕ್ತಿ ಸರಣಿ ಅಪರಾಧಗಳನ್ನು ಎಸಗಿರುವ ಅಧಿಕಾರಿ, ತಮ್ಮ ಅಧೀನದಲ್ಲಿದ್ದ ಅಧಿಕಾರಿಯಿಂದ ಭೂಮಿ ವ್ಯವಹಾರಕ್ಕೆ ಸಂಬಂಧಿಸಿದಂತೆ 20 ಕೋಟಿ ರೂ.ಗೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಇನ್ಸ್‌ಪೆಕ್ಟರ್ ಒಬ್ಬರು ದೂರು ನೀಡಿದ್ದ ದಾಖಲೆಯನ್ನು ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ಸಚಿವರು ಓದಿ ಹೇಳಿದರು.

ಈ ಅಧಿಕಾರಿ ಚಂದ್ರಶೇಖರ್ ತಮ್ಮ ಪತ್ನಿ ಹೆಸರಿನಲ್ಲಿ 38 ಅಂತಸ್ತಿನ ವಾಣಿಜ್ಯ ಕಟ್ಟಡ ನಿರ್ಮಿಸುತ್ತಿದ್ದಾರೆ. ರಾಜಕಾಲುವೆ ಮೇಲೆ ಈ ಕಟ್ಟಡ ನಿರ್ಮಾಣವಾಗುತ್ತಿದೆ, ಅಲ್ಲದೆ, ಕೆರೆಯನ್ನೂ ಒತ್ತುವರಿ ಮಾಡಲಾಗಿದೆ, ಈ ಬಗ್ಗೆ ತನಿಖೆ ನಡೆಯಬೇಕು.

ಇಂಥ ಅಧಿಕಾರಿಗಳನ್ನು ಇಟ್ಟುಕೊಂಡರೆ ರಾಜ್ಯ ಹೇಗೆ ಉದ್ಧಾರ ಆಗುತ್ತದೆ, ಕಾನೂನು ಬಾಹಿರವಾಗಿ ತನ್ನ ಕೈಕೆಳಗಿನ ಅಧಿಕಾರಿಗಳನ್ನು ಬಳಸಿ, ಬಿಲ್ಡರ್‌ಗಳನ್ನು ಹೆದರಿಸಿ ಈ ಚಂದ್ರಶೇಖರ್ ಎಷ್ಟು ಕೋಟಿ ಹಣ ವಸೂಲಿ ಮಾಡಿದ್ದಾರೆ ಎನ್ನುವುದು ಬಹಿರಂಗವಾಗಬೇಕು.

ಇವರು ಒಂದು ಖಾಸಗಿ ತಂಡ ಇಟ್ಟುಕೊಂಡು ಈ ದಂಧೆ ನಡೆಸುತ್ತಿದ್ದಾರೆ. ಈತನ ಬಗ್ಗೆ ದಾಖಲೆ ಸಮೇತ ಕೇಂದ್ರ ಗೃಹ ಕಾರ್ಯದರ್ಶಿಗೆ ಪತ್ರ ಬರೆಯುತ್ತೇನೆ ಎಂದು ಕುಮಾರಸ್ವಾಮಿ ಹೇಳಿದರು.

## ಹಂದಿಗಳ ಜೊತೆ ಜಗಳವಾಡಿದರೆ ಕೊಳಕಾಗುತ್ತೇವೆ : ಕುಮಾರಸ್ವಾಮಿಗೆ ಚಂದ್ರಶೇಖರ್ ತಿರುಗೇಟು



ಬೆಂಗಳೂರು, ಸೆ. 28 - ಹಂದಿಗಳ ಜೊತೆ ಜಗಳ ಮಾಡಿದರೆ ನಾವು ಕೊಳಕಾಗುತ್ತೇವೆ ಎಂದು ಎಸ್ಐಟಿ ಮುಖ್ಯಸ್ಥ ಎಡಿಜಿಪಿ ಚಂದ್ರಶೇಖರ್ ಅವರು ತಮ್ಮ ವಿರುದ್ಧ ಭ್ರಷ್ಟಚಾರದ ಆರೋಪ ಮಾಡಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿಗೆ ತಿರುಗೇಟು ನೀಡಿದ್ದಾರೆ.

ಕುಮಾರಸ್ವಾಮಿ ಆರೋಪಕ್ಕೆ ಸಂಬಂಧಿಸಿದಂತೆ ತಿರುಗೇಟು ನೀಡುವಂತೆ ತಮ್ಮ ಸಿಬ್ಬಂದಿಗೆ ಪತ್ರ ಬರೆದಿರುವ ಚಂದ್ರಶೇಖರ್, ಇಂದು ನನ್ನ ಮೇಲೆ ಸಾಕಷ್ಟು ಆರೋಪಗಳನ್ನು ಮಾಡಲಾಗಿದೆ. ಆರೋಪ ಮಾಡಿದ ವ್ಯಕ್ತಿ ಪ್ರಕರಣವೊಂದರ ಆರೋಪಿ ಅಷ್ಟೇ. ಆ ವ್ಯಕ್ತಿ ಜಾಮೀನಿನ ಮೇಲೆ ಹೊರಗಿದ್ದಾರೆ ಎಂದಿದ್ದಾರೆ.

ಸುಳ್ಳು ಆರೋಪ ಮಾಡುವ ಮೂಲಕ ಬೆದರಿಕೆ ಹಾಕಿದ್ದಾರೆ. ನಮ್ಮನ್ನು ಕುಗ್ಗಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆ ವ್ಯಕ್ತಿ ಎಷ್ಟೇ ಎತ್ತರದ ಸ್ಥಾನದಲ್ಲಿದ್ದರೂ ಆರೋಪಿಯೇ. ನಮ್ಮ ಕರ್ತವ್ಯವನ್ನು ನಾವು ನಿರ್ವಹಿಸೋಣ ಎಂದಿದ್ದಾರೆ.

## ನಗರದಲ್ಲಿ ಇಂದು ಗುರುವಂದನೆ

ಲಿಂ. ಡಾ. ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳವರ ಭಕ್ತರ ವೃಂದ ಹಾಗೂ ಕರ್ನಾಟಕ ಸಾವಿತ್ರಿ ಬಾಯಿ ಫುಲೆ ಶಿಕ್ಷಕಿಯರ ಸಂಘ ಜಿಲ್ಲಾ ಘಟಕ ಮತ್ತು ಪಿಕಾಕ್ ಸ್ನೇಹ ಬಳಗ ಇವರ ಸಹಯೋಗದಲ್ಲಿ ಉತ್ತಮ ಶಿಕ್ಷಕರಿಗೆ ಸನ್ಮಾನ ಕಾರ್ಯ ಕ್ರಮವನ್ನು ಇಂದು ಬೆಳಿಗ್ಗೆ 10 ಗಂಟೆಗೆ ಲಯನ್ಸ್ ಕ್ಲಬ್ ಸಭಾಂಗಣದಲ್ಲಿ ನಡೆಯಲಿದೆ.

ಅಧ್ಯಕ್ಷತೆ : ಮಹಾಂತೇಶ್ ಒಣರೊಟ್ಟಿ. ಉದ್ಘಾಟನೆ : ಡಿಡಿಪಿಐ ಜಿ. ಕೊಟ್ರೇಶ್. ಮುಖ್ಯ ಅತಿಥಿಗಳು : ಹೆಚ್.ಕೆ. ಲಿಂಗರಾಜು, ಬಿಇಓ ಶೇರ್ ಅಲಿ, ಪುಷ್ಪಲತಾ, ಕೆ.ಆರ್. ವಿಶ್ವನಾಥ್, ಬಿ.ಆರ್. ಚೌಡಪ್ಪ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ಜೈನ್ ಕಾಲೇಜಿನಲ್ಲಿ ಇಂಟರ್ನಲ್ ಹ್ಯಾಕಥಾನ್ ಸ್ಪರ್ಧೆ



ದಾವಣಗೆರೆ, ಸೆ. 28- ನಗರದ ಜೈನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಆಡಿಟೋರಿಯಂನಲ್ಲಿ ಇಂಟರ್ನಲ್ ಹ್ಯಾಕಥಾನ್ ಸ್ಪರ್ಧೆ ನಡೆಯಿತು.

ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ 2024 ಕೇಂದ್ರದ ಶಿಕ್ಷಣ ಸಚಿವಾಲಯವು ಎಐಸಿಟಿಇ ಸಹಭಾಗಿತ್ವದಲ್ಲಿ ರಾಷ್ಟ್ರವ್ಯಾಪಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನಡೆಸಿಕೊಡುವ ಸ್ಪರ್ಧೆ ಇದಾಗಿದ್ದು, ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಡಾ. ಜಿ. ನಾಗಲಿಂಗಪ್ಪ ಸ್ಟಾರ್ಟ್‌ಆಫ್‌ಗಳ ಮತ್ತು ಬ್ಯುಸಿನೆಸ್ ಇನ್‌ಕ್ಯೂಬೇಷನ್ ಸೆಂಟರ್‌ಗಳ ಸಂಕ್ಷಿಪ್ತ ಮಾಹಿತಿ ಮತ್ತು ಐಪಿಆರ್ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಗೌರವ ಅತಿಥಿಯಾಗಿದ್ದ ಡಾ. ಮಂಜಪ್ಪ ಸಾರಥಿ ಮಾತನಾಡಿ, ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ನಮ್ಮ ದೈನಂದಿನ ಜೀವನದಲ್ಲಿ ನಾವು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ವಿದ್ಯಾರ್ಥಿಗಳಿಗೆ ವೇದಿಕೆಯನ್ನು ಒದಗಿಸುವ ರಾಷ್ಟ್ರವ್ಯಾಪಿ ಕಾರ್ಯಕ್ರಮವಾಗಿದೆ ಎಂದು ತಿಳಿಸಿಕೊಟ್ಟರು.

ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್, ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ನಂದೀಶ್ ಬಿ.ಎಂ. ಹಾಗೂ ಐಐಸಿ ಸಂಚಾಲಕ ಕೆ.ಎಸ್. ಹರೀಶ್ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದರು.

## ನಗರದಲ್ಲಿ ಇಂದು ಹಾನಗಲ್ ಕುಮಾರ ಶಿವಯೋಗಿಗಳ ಜಯಂತಿ

ಅಖಿಲ ಕರ್ನಾಟಕ ಶ್ರೀ ಗುರು ಕುಮಾರೇಶ್ವರ ಅಂಧರ ಸಂಗೀತ ಕಲಾವಿದರ ಸಂಘದ ವತಿಯಿಂದ ಇಂದು ಬೆಳಿಗ್ಗೆ 10.30 ಕ್ಕೆ ಬಾಡಾ ಕ್ರಾಸ್ ಬಳಿ ಇವರು ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಹಾನಗಲ್ ಶ್ರೀ ಕುಮಾರ ಮಹಾ ಶಿವಯೋಗಿಗಳವರ 157 ನೇ ಜಯಂತ್ಯುತ್ಸವ, ತುಲಾಭಾರ, ಸ್ವಾಮಿ ಸುಕುಮಾರ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಬೆಳಿಗ್ಗೆ 7 ರಿಂದ 9 ರವರೆಗೆ ಪೂಜ್ಯರ ಭಾವಚಿತ್ರದ ಮೆರವಣಿಗೆ ನಡೆಯಲಿದೆ.

ನಂತರ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಗದಗದ ಶ್ರೀ ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮೀಜಿ, ಡಾ. ಕಲ್ಲಯ್ಯಜ್ಜ ಸಾನ್ನಿಧ್ಯ ವಹಿಸುವರು. ಪುಣ್ಯಾಶ್ರಮದ ಅಧ್ಯಕ್ಷ ಡಾ. ಅಥಣಿ ಎಸ್. ವೀರಣ್ಣ ಅಧ್ಯಕ್ಷತೆ ವಹಿಸುವರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಆರ್.ವಿ. ಸಂಗಮೇಶ್ವರ ಗವಾಯಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ರವಿಚಂದ್ರ, ರಾಜಾನಾಯ್ಕ, ಎ.ಎಸ್. ಮೃತ್ಯುಂಜಯ ಮತ್ತಿತರರು ಭಾಗವಹಿಸಲಿದ್ದಾರೆ.

## ಹಸುಗಳ ಕಳ್ಳತನದ ಬಗ್ಗೆ ದೂರು

ದಾವಣಗೆರೆ, ಸೆ. 28 – ವಿದ್ಯಾನಗರ, ಎಂ.ಸಿ.ಸಿ. ಬಿ ಬ್ಲಾಕ್, ಶಿವಕುಮಾರಸ್ವಾಮಿ ಬಡಾವಣೆ ಹಾಗೂ ಬನಶಂಕರಿ ಬಡಾವಣೆಗಳಲ್ಲಿ 8-10 ಜನರ ತಂಡವೊಂದು ಮನೆಯಲ್ಲಿದ್ದ ಹಾಗೂ ಬೀದಿಯ ನಾಲ್ಕು ಹಸುಗಳನ್ನು ಕದ್ದಿದೆ ಎಂದು ಹಿಂದೂ ಸಮಾಜದ ಕಾರ್ಯಕರ್ತ ಎಸ್. ಗುರುರಾಜ್ ಆರೋಪಿಸಿದ್ದಾರೆ. ಸೆ.24 ರಂದು ನಡೆದ ಘಟನೆಯ ಬಗ್ಗೆ ಪೊಲೀಸರಲ್ಲಿ ದೂರು ದಾಖಲಿಸಲಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಜಯದೇವ ಸ್ವಾಮಿ, ವಿಕಾಸ್ ಇಟಗಿ, ಮಿಥುನ್ ಗಾಯಕ್ವಾಡ್ ಉಪಸ್ಥಿತರಿದ್ದರು.

## ಬ್ರಾಹ್ಮಣ ಸಮಾಜದಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಸೆ. 28 - ಬ್ರಾಹ್ಮಣ ಸಮಾಜ ಸೇವಾ ಸಂಘದಡಿಯಲ್ಲಿ ಹಲವು ದಾನಿಗಳ ಸಹಾಯದಿಂದ ಸ್ಥಾಪಿಸಿರುವ ದತ್ತಿ ನಿಧಿಯಿಂದ ಆರ್ಥಿಕವಾಗಿ ಹಿಂದುಳಿದ ಹಾಗೂ ಶೈಕ್ಷಣಿಕವಾಗಿ ಉತ್ತಮ ಸಾಧನೆಯನ್ನು ಮಾಡಿರುವ ನಗರ ವ್ಯಾಪ್ತಿಗೆ ಬರುವ ತ್ರಿಮತಸ್ತ ಬ್ರಾಹ್ಮಣ ಸಮಾಜದ ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ

ಅರ್ಜಿದಾರರು 2024-25ನೇ ಸಾಲಿಗೆ ಪಿಯುಸಿ, ಐಟಿಐ, ಡಿಪ್ಲೋಮಾ, ಹಾಗೂ ಡಿಗ್ರಿ ಮಟ್ಟದ ವ್ಯಾಸಂಗ ಮಾಡುತ್ತಿರಬೇಕು. ಅರ್ಜಿಗಳು ಬ್ರಾಹ್ಮಣ ಸಮಾಜ ಸೇವಾ ಸಂಘದ ಕಾರ್ಯಾಲಯದಲ್ಲಿ ಲಭ್ಯವಿದ್ದು, ಪೂರ್ಣಗೊಳಿಸಿದ ಅರ್ಜಿಯನ್ನು ಇದೇ ದಿನಾಂಕ 30ರೊಳಗಾಗಿ ಸಲ್ಲಿಸಬೇಕು. ವಿವರಕ್ಕೆ ಸಂಪರ್ಕಿಸಿ : 9483860040, 9448566549.

## ಆಭರಣ ಕಳವು: ಪೇಂಟ್ ಮೇಸ್ತ್ರಿ ಬಂಧನ

ದಾವಣಗೆರೆ, ಸೆ.28- ಮನೆಯ ಪೇಯಿಂಟ್ ಮಾಡುವ ನೆಪದಲ್ಲಿ ಬಾತ್ ರೂಂನಲ್ಲಿದ್ದ ಆಭರಣಗಳನ್ನು ಕಳ್ಳತನ ಮಾಡಿದ್ದ ಆರೋಪಿಯನ್ನು ಬಂಧಿಸಿರುವ ಪೊಲೀಸರು 1 ಲಕ್ಷ ರೂ. ಆಭರಣವನ್ನು ವಶಕ್ಕೆ ಪಡೆದಿದ್ದಾರೆ.

ಪಿ.ಜೆ. ಬಡಾವಣೆಯ ಕೆ.ಎಸ್. ಗಣೇಶ್ ಅವರು ಬಾತ್ ರೂಂ ಬಳಿಯ ಸೆಲ್ಫ್ ಮೇಲೆ 25 ಗ್ರಾಂ ತೂಕದ ಬಂಗಾರದ ಆಭರಣಗಳಿದ್ದವು. ಪೇಂಟ್ ಕೆಲಸಕ್ಕೆ ಬಂದಿದ್ದ ಮೇಸ್ತ್ರಿ ರಾಮಚಂದ್ರ ಮಾಲೀಕರಿಂದ ಬೀಗದ ಕೀ ಪಡೆದು ಆಭರಣ ಕಳ್ಳತನ ಮಾಡಿದ್ದಾನೆ ಎಂದು ಪೊಲೀಸರಿಗೆ ದೂರು ನೀಡಿದ್ದರು.

ಮೇಸ್ತ್ರಿ ರಾಮಚಂದ್ರನನ್ನು ವಿಚಾರಣೆಗೊಳಪಡಿಸಿದಾಗ ಆಭರಣ ಕಳ್ಳತನ ಮಾಡಿ ಹಳೇಬಾತಿಯ ಮುತ್ತೂಟ್ ಮನಿ ಲಿಮಿಟೆಡ್‌ನಲ್ಲಿ ಅಡವಿಟ್ಟಿದ್ದು ತಿಳಿದು ಬಂದಿದೆ. ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ.

ಬಡಾವಣೆ ಪೊಲೀಸ್ ನಿರೀಕ್ಷಕರಾದ ಎಮ್.ಆರ್ ಚೌಬೆ, ಪಿಎಸ್ಐ ನಾಗರಾಜಪ್ಪ ಬಿ.ಆರ್, ಸಿಬ್ಬಂದಿಗಳಾದ ಬಸವರಾಜಪ್ಪ ಆರ್, ಕೆಂಚಪ್ಪ, ಬಸವರಾಜ್, ಧ್ರುವ, ಗೀತಾ ಹೆಚ್. ಆರೋಪಿಯ ಪತ್ತೆ ಕಾರ್ಯದಲ್ಲಿದ್ದರು.

## ಎಸ್.ಎಸ್. ಕೇರ್ ಟ್ರಸ್ಟ್‌ನಿಂದ ಟಾಪಿಕಲ್ ಸ್ಟೆರಾಯ್ಡ್ ದುರ್ಬಳಕೆ ಬಗ್ಗೆ ಜನ ಜಾಗೃತಿ



ದಾವಣಗೆರೆ, ಸೆ. 28- ಎಸ್.ಎಸ್ ಕೇರ್ ಟ್ರಸ್ಟ್ ವತಿಯಿಂದ, ಎಸ್. ಎಸ್. ಆಸ್ಪತ್ರೆಯ, ಚರ್ಮರೋಗ ವಿಭಾಗದಲ್ಲಿ 'ಟಾಪಿಕಲ್ ಸ್ಟೆರಾಯ್ಡ್ ಮುಲಾಮುಗಳ ದುರ್ಬಳಕೆಯ' ಬಗ್ಗೆ ಉಪನ್ಯಾಸ ಮತ್ತು ನಾಟಕ ಪ್ರದರ್ಶನ ಮಾಡುವ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗಿತ್ತು. ವೈದ್ಯಕೀಯ ನಿರ್ದೇಶಕ ಡಾ. ಎ. ಅರುಣ್‌ಕುಮಾರ ಮತ್ತು ಚರ್ಮರೋಗ ವಿಭಾಗದ ಮುಖ್ಯಸ್ಥರಾದ ಡಾ. ಮಂಜುನಾಥ್ ಹುಲ್ಮನಿ, ಸ್ಟೆರಾಯ್ಡ್ ಮುಲಾಮುಗಳ ಬಗ್ಗೆ ಜನರಿಗೆ ಮಾಹಿತಿ ನೀಡಿದರು.

ಸಹಾಯಕ ಅಧ್ಯಾಪಕರಾದ ಡಾ.ಮುನಾಜಾ ಖುಲ್ಸುಮ್, ಡಾ. ಮಧು ಎಂ., ಡಾ. ಸ್ಪಂದನ ಡಿ.ಕೆ. ಹಾಗೂ ಇತರರು ಉಪಸ್ಥಿತರಿದ್ದರು.

## ಕಲ್ಲಿದ್ದಲು, ಗಣಿ ಮತ್ತು ಉಕ್ಕು ಇಲಾಖೆಯ ಸ್ಥಾಯಿ ಸಮಿತಿ ಸದಸ್ಯರಾಗಿ ಕಾರಜೋಳ



ಚಿತ್ರದುರ್ಗ, ಸೆ. 28 - 18ನೇ ಲೋಕಸಭೆಯಲ್ಲಿ ಚಿತ್ರದುರ್ಗ ಲೋಕಸಭಾ ಸದಸ್ಯರಾದ ಗೋವಿಂದ ಎಂ. ಕಾರಜೋಳರವರನ್ನು ಸಂಸತ್ತಿನ ಕಲ್ಲಿದ್ದಲು, ಗಣಿ ಮತ್ತು ಉಕ್ಕು ಇಲಾಖೆಯ ಸ್ಥಾಯಿ ಸಮಿತಿಯ ಸದಸ್ಯರನ್ನಾಗಿ ಲೋಕಸಭಾ ಸ್ಪೀಕರಾದ ಓಂ ಬಿರ್ಲಾರವರು ನೇಮಕ ಮಾಡಿರುತ್ತಾರೆ.

## ಓದುಗರ ಪತ್ರ

### ಶ್ರೀ ಜಯದೇವ ಜಗದ್ಗುರುಗಳ ಕಂಚಿನ ಪ್ರತಿಮೆ ಬಳಿ ನಿತ್ಯ ಬೆಳಕಿನ ವ್ಯವಸ್ಥೆಗೆ ಮನವಿ

ಮಾನ್ಯರೇ,

ದಾವಣಗೆರೆ ನಗರ ಹೃದಯ ಭಾಗವಾಗಿರುವ ಶ್ರೀ ಜಗದ್ಗುರು ಜಯದೇವ ವೃತ್ತದಲ್ಲಿ ಶ್ರೀ ಜಯದೇವ ಜಗದ್ಗುರು ಮಹಾಸ್ವಾಮೀಜಿ ಇವರ ಕಂಚಿನ ಪ್ರತಿಮೆಯನ್ನು ಲಕ್ಷಾಂತರ ಹಣ ವೆಚ್ಚ ಮಾಡಿ ಸುಂದರವಾಗಿ ಪ್ರತಿಷ್ಠಾಪನಾ ಮಾಡಲಾಗಿದೆ. ಈ ಪ್ರತಿಮೆ ನಮ್ಮ ನಗರದ ಮಹಾ ಜನತೆಯ ಹಾಗೂ ಭಕ್ತರ ಗೌರವ-ಭಕ್ತಿ-ಭಾವನೆಗಳ ಶಕ್ತಿ ಕೇಂದ್ರ.

ಈಗ ನಗರದಲ್ಲಿ ಶ್ರೀ ಜಗದ್ಗುರುಗಳವರ 68ನೇ ಸ್ಮರಣೋತ್ಸವ ಹಾಗೂ ಈ ವರ್ಷ 150ನೇ ಜನ್ಮೋತ್ಸವದ ವರ್ಷವಾಗಿ ಆಚರಿಸಲಾಗುತ್ತಿದೆ. ಈ ಸಮಯದಲ್ಲಿ ಶ್ರೀ ಜಗದ್ಗುರುಗಳವರ ಪ್ರತಿಮೆಗೆ ದೀಪದ ಅಲಂಕಾರ ಇಲ್ಲದೇ, ಕತ್ತಲಲ್ಲಿ ಕಾಣದ ಪರಿಸ್ಥಿತಿ ಇದೆ ಹಾಗೂ ಪ್ರತಿಮೆಯ ಆವರಣದ ಸುತ್ತಲೂ ಪೋಸ್ಟರ್, ಬ್ಯಾನರ್, ಕಟೌಟ್‌ಗಳನ್ನು ಅಳವಡಿಸಿ ಶ್ರೀ ಜಗದ್ಗುರುಗಳವರ ಪ್ರತಿಮೆಗೆ ಅಗೌರವ ಉಂಟಾಗಿದೆ.

ಶ್ರೀ ಜಗದ್ಗುರುಗಳವರು ನಾಡಿನ ಸಮಸ್ತ ಜನತೆಗೆ ಅಕ್ಷರ ದಾಸೋಹ ಮತ್ತು ನಿತ್ಯ ಅನ್ನ ದಾಸೋಹ ನೀಡಿದ ಮಹಾಗುರುಗಳು, ನಡೆದಾಡುವ ದೇವರು, ನವಕೋಟಿ ನಾರಾಯಣ ಬಿರುದಾಂಕಿತ ಶ್ರೀ ಜಗದ್ಗುರುಗಳವರ ಪ್ರತಿಮೆ ಹಾಗೂ ಆವರಣವನ್ನು ಸುಂದರಗೊಳಿಸಿ, ದೀಪದ ಅಲಂಕಾರವನ್ನು ಹಾಗೂ ನಿತ್ಯ ಬೆಳಕಿನ ವ್ಯವಸ್ಥೆಯನ್ನು ಮಾಡಬೇಕೆಂದು ಶ್ರೀಮಠದ ಪದಾಧಿಕಾರಿಗಳಲ್ಲಿ ಹಾಗೂ ಅಧಿಕಾರಿ ವರ್ಗದವರಲ್ಲಿ ಸವಿನಯ ಮನವಿ.

**-ಟಿ.ಜೆ. ಸುರೇಶ್**, ದಾವಣಗೆರೆ.

## ಕೊಕ್ಕನೂರಿನಲ್ಲಿ ಇಂದು ತಾಲ್ಲೂಕು ಕುರುಬ ಸಂಘದಿಂದ ಪ್ರತಿಭಾ ಪುರಸ್ಕಾರ

ಮಲೇಬೆನ್ನೂರು ಸಮೀಪದ ಕೊಕ್ಕನೂರು ಗ್ರಾಮದ ಶ್ರೀ ಪವನದೇವ ಕಲ್ಯಾಣ ಮಂಟಪದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಹರಿಹರ ತಾ. ಕುರುಬರ ಸಂಘದ 2ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಮತ್ತು ಶೈಕ್ಷಣಿಕ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಾನ್ನಿಧ್ಯ : ಶ್ರೀ ಬಸವರಾಜ ದೇವರು, ಅಧ್ಯಕ್ಷತೆ : ಪೂಜಾರ್ ಹಾಲೇಶಪ್ಪ, ಉದ್ಘಾಟನೆ : ನಂದಿಗಾವಿ ಶ್ರೀನಿವಾಸ್, ಉಪನ್ಯಾಸ : ಗೊಲ್ಲರಹಳ್ಳಿ ಮಂಜುನಾಥ್, ಗದ್ದಿಗ್ಯಪ್ಪ ಕುರಿಯರ್, ಮುಖ್ಯ ಅತಿಥಿ : ಡಾ. ಎಂ.ಹನುಮಂತಪ್ಪ, ವಿಶೇಷ ಆಹ್ವಾನಿತರು : ಎಸ್.ರಾಮಪ್ಪ, ಜಿ.ಬಿ. ವಿನಯಕುಮಾರ್, ಎಂ.ನಾಗೇಂದ್ರಪ್ಪ, ಬೀರಪ್ಪ, ಟಿ.ಎನ್. ಮುರುಗಣ್ಣನವರ್, ಹೊರಟ್ಟಿ ಕೆಂಚಪ್ಪ, ಎಸ್.ಜಿ.ಗಣೇಶಪ್ಪ, ಕುಂಬಳೂರು ವಿರೂಪಾಕ್ಷಪ್ಪ, ಸಿ.ಎನ್.ಹುಲಗೇಶ್, ಕೆ.ರೇವಣಸಿದ್ದಪ್ಪ ಮತ್ತಿತರರು.

## ನಗರದಲ್ಲಿಂದು ಆಂಜನೇಯ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿ ಸಭೆ


ಆಂಜನೇಯ ಬಡಾವಣೆಯಲ್ಲಿರುವ ನಾಗರಿಕ ಹಿತರಕ್ಷಣಾ ಸಮಿತಿಯ 26ನೇ ಸರ್ವ ಸದಸ್ಯರ ಸಾಮಾನ್ಯ ವಾರ್ಷಿಕ ಸಭೆಯನ್ನು ಇಂದು ಬೆಳಿಗ್ಗೆ 11ಕ್ಕೆ ಸಮಿತಿಯ ಕಾರ್ಯಾಲಯ (ಲೈಬ್ರರಿ ಪಕ್ಕದ ಯೋಗ ಹಾಲ್) ದಲ್ಲಿ ಕರೆಯಲಾಗಿದೆ ಎಂದು ಸಮಿತಿ ಅಧ್ಯಕ್ಷರಾದ ಶ್ರೀಮತಿ ಕುಸುಮ ಲೋಕೇಶ್ ತಿಳಿಸಿದ್ದಾರೆ.


॥ ಶ್ರೀ ರಂಗನಾಥ ಸ್ವಾಮಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**

ದಾವಣಗೆರೆ ಜಿಲ್ಲೆ, ದಾವಣಗೆರೆ ತಾ॥ ನಲ್ಕುಂದ ಗ್ರಾಮದ ವಾಸಿ

ನೇರ್ಲಿಗೆ ದಿ॥ ಶ್ರೀಮತಿ ಗಂಗಮ್ಮ ನೇರ್ಲಿಗೆ ದಿ॥ ಶ್ರೀ ಈಶ್ವರಪ್ಪ ಇವರ ಸೊಸೆಯಂದಿರಾದ



**ಶ್ರೀಮತಿ ಬಸಮ್ಮ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 20.09.2024ನೇ ಶುಕ್ರವಾರ
ಬೆಳಗಿನ ಜಾವ 4.05 ಗಂಟೆಗೆ
ನನ್ನ ಪೂಜ್ಯ ಪತಿಯವರಾದ
**ಶ್ರೀ ಎನ್.ಇ. ರಾಜಪ್ಪನವರು**
(ಜನನ : 1967 ಮರಣ : 20.09.2024)
ಇವರು ಶಿವಾಧೀನರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 30.09.2024ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ನಲ್ಕುಂದ ಗ್ರಾಮದ ಮೃತರ ಸ್ವಗೃಹದಲ್ಲಿ ನಡೆಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಮೃತರ ಧರ್ಮಪತ್ನಿ : **ಶ್ರೀಮತಿ ಬಸಮ್ಮ** ಮಕ್ಕಳಾದ : **ರಂಜಿತ, ರುದ್ರೇಶ್**



**ಶ್ರೀಮತಿ ಸೌಮ್ಯ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 20.09.2024ನೇ ಶುಕ್ರವಾರ
ಬೆಳಗಿನ ಜಾವ 4.10 ಗಂಟೆಗೆ
ನನ್ನ ಪೂಜ್ಯ ಪತಿಯವರಾದ
**ಶ್ರೀ ಎನ್.ಇ. ಗಂಗಾಧರ** ಇವರು
(ಜನನ : 1973 ಮರಣ : 20.09.2024)
ಇವರು ಶಿವಾಧೀನರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 30.09.2024ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ನಲ್ಕುಂದ ಗ್ರಾಮದ ಮೃತರ ಸ್ವಗೃಹದಲ್ಲಿ ನಡೆಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಮೃತರ ಧರ್ಮಪತ್ನಿ : **ಶ್ರೀಮತಿ ಸೌಮ್ಯ** ಮಕ್ಕಳಾದ : **ಲೇಖನ, ಕೀರ್ತನ**

**ನೇರ್ಲಿಗೆ ವಂಶಸ್ಥರು, ನಲ್ಕುಂದ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು ಫೋ. : 72046 38644**

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಸಾಧನೆಗೆ ಸ್ಪಷ್ಟ ಗುರಿ ಮುಖ್ಯ : ಡಾ. ಅನಿಲ್



## ಗುರು ಚೇತನ' ಹಾಗೂ 'ಗುರು ಶ್ರೇಷ್ಠ' ಪ್ರಶಸ್ತಿ ಪ್ರದಾನ ಸಮಾರಂಭ

ದಾವಣಗೆರೆ, ಸೆ.28- ಸಾಧನೆ ಮಾಡಲು ಸ್ಪಷ್ಟ ಗುರಿ ಬಹಳ ಮುಖ್ಯ ಎಂದು ಶಿಕ್ಷಣ ತಜ್ಞ ಡಾ. ಕೆ.ಎಸ್. ಅನಿಲ್ ಕುಮಾರ್ ಹೇಳಿದರು.

ಶಿಕ್ಷಣ ತಜ್ಞ ಡಾ.ಹೆಚ್.ವಿ. ವಾಮದೇವಪ್ಪ ಚಾರಿಟಬಲ್ ಮತ್ತು ಎಜುಕೇಷನ್ ಟ್ರಸ್ಟ್ ವತಿಯಿಂದ ಜಿಲ್ಲಾ ಕಸಾಪ ಸಹಯೋಗದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಿದ್ದ 'ಗುರು ಚೇತನ' ಹಾಗೂ 'ಗುರು ಶ್ರೇಷ್ಠ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳಿಗಾಗಿ ತರಹೇವಾರಿ ಕಾರ್ಯಕ್ರಮ ಆಯೋಜಿಸುವ ಮೂಲಕ ಅವರ ಪ್ರತಿಭೆ ಗುರುತಿಸಿ ಅವರಲ್ಲಿ ಉತ್ತಮ ಗುರಿ ಸ್ಥಾಪಿಸುವ ಕಾರ್ಯವನ್ನು ಚಾರಿಟಬಲ್ ಟ್ರಸ್ಟ್ ಮಾಡುತ್ತಿದೆ. ಡಾ.ಹೆಚ್.ವಿ ವಾಮದೇವಪ್ಪ ಅವರು ವಿದ್ಯಾರ್ಥಿಗಳಿಂದ ಅಪಾರ ಪ್ರೀತಿ ಗಳಿಸುವ ಮೂಲಕ ಈ ಭಾಗದ ರಾಧಾಕೃಷ್ಣನ್ ಆಗಿ ಹೊರಹೊಮ್ಮಿದ್ದಾರೆ ಎಂದು ಹೇಳಿದರು.

ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಶಿಕ್ಷಣ ಮತ್ತು ಸಾಹಿತ್ಯಕ್ಕೆ ಅವಿನಾ ಭಾವ ಸಂಬಂಧವಿದೆ. ಶಿಕ್ಷಣ ತಜ್ಞರಿಂದಲೇ ಶಿಷ್ಟ ಸಾಹಿತ್ಯ ರಚನೆಯಾಗುತ್ತದೆ. ಹಾಗಾಗಿ ಈ ಕ್ಷೇತ್ರದ ಸಾಹಿತ್ಯ ಸಾಧಕರನ್ನು ಗುರುತಿಸಿ, ಸನ್ಮಾನಿಸುವ ಕಾರ್ಯ ಕಸಾಪದಿಂದ ಆಗಬೇಕು ಎಂದರು.

ವಿಶ್ರಾಂತ ಪ್ರಾಚಾರ್ಯ ಡಾ.ಹೆಚ್. ಮುದ್ದುಮಲ್ಲೇಶ್ ಮಾತನಾಡಿ, ಪ್ರಶಸ್ತಿ ಪಡೆಯಲು ಅರ್ಜಿ ಸಲ್ಲಿಸಬೇಕಾದ ಈ ದಿನಮಾನಗಳಲ್ಲಿ ನಿಜವಾದ ಪ್ರತಿಭೆ ಹಾಗೂ ಅವರ ಸಾಧನೆಯನ್ನು ಗುರುತಿಸಿ ಪ್ರಶಸ್ತಿ ಪ್ರದಾನ ಮಾಡುವ ಟ್ರಸ್ಟಿನ ಕಾರ್ಯವನ್ನು ಶ್ಲಾಘಿಸಿದರು.

ಇದೇ ವೇಳೆ ಹಿರಿಯ ಉಪನ್ಯಾಸಕ ಡಾ.ಜಿ.ವಿ. ಹರಿಪ್ರಸಾದ್ ಅವರಿಗೆ 'ಗುರು ಚೇತನ', ಸಹಶಿಕ್ಷಕ ಎಂ. ರಮೇಶ್ ಅವರಿಗೆ 'ಗುರು ಶ್ರೇಷ್ಠ' ಪ್ರಶಸ್ತಿ ಪ್ರದಾನ ಮಾಡಲಾಯಿತು ಮತ್ತು ಪಿಎಚ್‌ಡಿ ಪದವೀಧರರಿಗೆ ಸನ್ಮಾನಿಸಲಾಯಿತು.

ಟ್ರಸ್ಟಿನ ಆಡಳಿತಾಧಿಕಾರಿ ಡಾ.ಹೆಚ್.ವಿ. ವಾಮದೇವಪ್ಪ, ಅಧ್ಯಕ್ಷ ಶಾಂತವೀರಪ್ಪ, ಕಾರ್ಯ ದರ್ಶಿ ಬಸವರಾಜ್ ಸೋಮನಹಳ್ಳಿ, ನಿರ್ದೇಶಕ ಡಾ.ಎನ್.ಟಿ. ಮರುಳಸಿದ್ದಪ್ಪ ಇತರರಿದ್ದರು.

# ಡಿಆರ್‌ಎಂ ಶಾಲೆ : ಕಟ್ಟಡ ನೆಲಸಮ ಬೇಡ



ಕೊಠಡಿಗಳನ್ನು ಪರಿಶೀಲಿಸಿದ ಹರಿಹರ ಶಾಸಕ ಬಿ.ಪಿ. ಹರೀಶ್

ಹರಿಹರ, ಸೆ.28- ನಗರದ ಡಿ.ಆರ್ ಎಂ. ಪ್ರೌಢಶಾಲೆಗೆ ಶಾಸಕ ಬಿ.ಪಿ. ಹರೀಶ್ ಭೇಟಿ ನೀಡಿ ಹಳೆ ಕಟ್ಟಡದ ಕೊಠಡಿ ಪರಿಶೀಲನೆ ನಡೆಸಿ, ಸದ್ಯದಲ್ಲಿ ಸಂಬಂಧಿಸಿದ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ, ಸೂಚಿಸುವವರೆಗೆ ಯಾವುದೇ ಕಾರಣಕ್ಕೂ ಕಟ್ಟಡ ನೆಲಸಮ ಮಾಡವಂತಿಲ್ಲ ಎಂದು ಮುಖ್ಯಶಿಕ್ಷಕರಿಗೆ ಮತ್ತು ಎಸ್.ಡಿ.ಎಂ.ಸಿ. ಅಧ್ಯಕ್ಷರಿಗೆ ತಾಕೀತು ಮಾಡಿದರು.

ಕೆಲವು ದಿನಗಳ ಕೆಳಗೆ ಮಲೇಬೆನ್ನೂರು ನಗರದಲ್ಲಿ ಇದೇ ರೀತಿಯ ಹಳೆಯ ಶಾಲೆ ಕಟ್ಟಡ ನೆಲಸಮ ವಿಚಾರಕ್ಕೆ ಸಂಬಂಧಿಸಿದಂತೆ ಗೊಂದಲ ಸೃಷ್ಟಿ ಆಗಿತ್ತು ಎಂದು ಶಾಸಕ ಹರೀಶ್ ಹೇಳಿದರು.

ನಮ್ಮ ಗಮನಕ್ಕೆ ತರದೇ ತರಾತುರಿಯಲ್ಲಿ ಅಂದಿನ ಜಿಲ್ಲಾಧಿಕಾರಿ ಮತ್ತು ಪುರಸಭೆ ಮುಖ್ಯ ಅಧಿಕಾರಿ ಕಟ್ಟಡ ನೆಲಸಮ ಮಾಡುವುದಕ್ಕೆ ಮುಂದಾದರು. ಆದರೆ ಜಿಲ್ಲಾಧಿಕಾರಿ ಮತ್ತು ಮುಖ್ಯ ಅಧಿಕಾರಿ ಇಬ್ಬರೂ ವರ್ಗಾವಣೆ ಆಗಿ ಹೋಗಿದ್ದಾರೆ. ಹಾಲಿ ಇರುವ ಅಧಿಕಾರಿಗಳಿಗೆ ಕೇಳಿದಾಗ ಅವರು ಅದರ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದು ಹೇಳಿಕೊಂಡು ಹೊರಟಿದ್ದಾರೆ. ಅದರಂತೆ ಇಲ್ಲಿನ ಡಿ.ಆರ್.ಎಂ. ಪ್ರೌಢಶಾಲಾ ಕೊಠಡಿಯ ನೆಲಸಮ ವಿಚಾರ ಆಗಬಾರದು ಎಂದು ಹೇಳಿದರು.

ಇಲ್ಲಿನ 13 ಕೊಠಡಿಗಳು ಶಿಥಿಲವಾಗಿದ್ದು, ದಾವಣಗೆರೆ ಗುತ್ತಿಗೆದಾರ ಶೇಖರನಾಯ್ಕ ಟೆಂಡರ್ ಹಾಕದೇ ನೆಲಸಮ ಕಾಮಗಾರಿಗೆ ಮುಂದಾಗಿದ್ದಾರೆ. ನೆಲಸಮ ಮಾಡಿ ಇಲ್ಲಿನ ಕಟ್ಟಡದಲ್ಲಿ ಕಬ್ಬಿಣದ ಕಿಟಕಿ, ಡ್ರಿಲ್ ಇದ್ದು ಮತ್ತು ಕಟ್ಟಿಗೆ ಕದಗಳು ಇವುಗಳನ್ನು ಅವರು ತೆಗೆದುಕೊಂಡು ಹೋಗಲು ಮುಂದಾದಾಗ ಇಲ್ಲಿನ ನಷ್ಟವನ್ನು ಯಾರು ಭರ್ತಿ ಮಾಡುತ್ತಾರೆ ಎಂದು ಪ್ರಶ್ನಿಸಿದರು.

ಡಿಡಿಪಿಐ, ಬಿಇಓ ಹಾಗೂ ಸಿಇಓ ಬಳಿ ಸಭೆಯನ್ನು ನಡೆಸಿ, ತದನಂತರ ಕಟ್ಟಡ ನೆಲಸಮ ಮಾಡಿ ಎಂದು ಡಿ.ಆರ್.ಎಂ ಪ್ರೌಢಶಾಲಾ ಮುಖ್ಯ ಶಿಕ್ಷಕ ಮತ್ತು ಎಸ್.ಡಿ.ಎಂ.ಸಿ. ಅಧ್ಯಕ್ಷ ಜಬೀವುಲ್ಲಾ ಅವರಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ನಿವೃತ್ತ ಶಿಕ್ಷಕ ನಜೀರ್ ಆಹ್ಮದ್ ಅವರು, ಸರ್ಕಾರ ನೆಲಸಮ ಮಾಡಲಿಕ್ಕೆ ಆದೇಶ ನೀಡಿದೆ ಎಂದು ಆಕ್ರೋಶ ಭರಿತರಾಗಿ ಮಾತನಾಡಲಿಕ್ಕೆ ಮುಂದಾದರು.

ಇದರಿಂದ ಶಾಸಕ ಬಿ.ಪಿ. ಹರೀಶ್ ಕೂಡ ಕುಪಿತರಾಗಿ, ಇದಕ್ಕೆ ಸಂಬಂಧಿಸಿದ ಇಲಾಖಾ ಅಧಿಕಾರಿ ವರ್ಗದವರ ಜೊತೆಗೆ ಮಾತನಾಡಿ, ತಿಳಿಸಿದ ನಂತರವೇ ನೆಲಸಮ ಮಾಡಬೇಕೆಂದು ತಾಕೀತು ಮಾಡಿ ಸ್ಥಳದಿಂದ ನಿರ್ಗಮಿಸಿದರು.

ಎಸ್.ಡಿ.ಎಂ.ಸಿ. ಅಧ್ಯಕ್ಷ ಜಬೀಉಲ್ಲಾ, ನಗರಸಭೆ ಸದಸ್ಯ ಹನುಮಂತಪ್ಪ ಮಾತನಾಡಿದರು. ಈ ವೇಳೆ ನಿವೃತ್ತ ಶಿಕ್ಷಕ ನಜೀರ್ ಅಹ್ಮದ್ ಮತ್ತು ನಗರಸಭೆ ಸದಸ್ಯ ಹನುಮಂತಪ್ಪ ಮಾತಿನ ಚಕಮಕಿಗೆ ಮುಂದಾದರು.

ಬಿಇಓ ಡಿ. ದುರುಗಪ್ಪ ಶಾಲಾ ಸ್ಥಳಕ್ಕೆ ಆಗಮಿಸಿ ಘಟನೆ ಬಗ್ಗೆ ಶಿಕ್ಷಕರ ಬಳಿ ಮಾಹಿತಿ ಸಂಗ್ರಹಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಫೈನಾನ್ಸ್ ಮಂಜುನಾಥ್, ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ, ಸುಪ್ರೀತ್ ಒಣರೊಟ್ಟಿ, ಕೆಂಟ್ ಸ್ವಾಮಿ, ರವಿಕುಮಾರ್ ಬನ್ನಿಕೋಡು, ವಿನಾಯಕ ಆರಾಧ್ಯ ಮಠ, ಶಶಿಧರ್, ಶಿಕ್ಷಕರಾದ ಸಿದ್ದರಾಮೇಶ, ಈಶಪ್ಪ ಬೂದಿಹಾಳ್, ಶಾಲೆಯ ಹಳೆ ವಿದ್ಯಾರ್ಥಿ ಪತ್ರಕರ್ತ ಟಿ. ಇನಾಯತ್ ಇತರರು ಹಾಜರಿದ್ದರು.

## ದಾವಣಗೆರೆ - ಹರಿಹರಕ್ಕೆ ಇಂದು ಯತ್ನಾಳ್, ರಮೇಶ್ ಜಾರಕಿಹೊಳಿ





ಹರಿಹರದಲ್ಲಿ ಇಂದಿನ ಹಿಂದೂ ಮಹಾಗಣಪತಿ ವಿಸರ್ಜನೆ ಹಾಗೂ ಬೃಹತ್ ಶೋಭಾಯಾತ್ರೆಯಲ್ಲಿ ಭಾಗವಹಿಸಲು ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ ಆಗಮಿಸಲಿದ್ದಾರೆ.

ಬೆಳಿಗ್ಗೆ 11.30 ಕ್ಕೆ ದಾವಣಗೆರೆ ನಗರದಲ್ಲಿ ಇತ್ತೀಚಿಗೆ ಗಣೇಶ್ ವಿಸರ್ಜನೆ ಸಂದರ್ಭದಲ್ಲಿ ನಡೆದ ಗಲಭೆಯಲ್ಲಿ ಬಂಧಿತರಾಗಿರುವ ಹಿಂದೂ ಕಾರ್ಯಕರ್ತರನ್ನು ಕಾರಾಗೃಹದಲ್ಲಿ ಭೇಟಿ ಮಾಡಲಿದ್ದಾರೆ.

ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ಹೈಸ್ಕೂಲ್ ಮೈದಾನದಲ್ಲಿರುವ ಹಿಂದೂ ಮಹಾ ಗಣಪತಿ ದರ್ಶನ ಪಡೆಯಲಿದ್ದಾರೆ. ನಂತರ ಹರಿಹರದಲ್ಲಿ ಮಧ್ಯಾಹ್ನ 2.30 ಕ್ಕೆ ಹಿಂದೂ ಮಹಾಗಣಪತಿ ವಿಸರ್ಜನೆ ಅಂಗವಾಗಿ ಆಯೋಜಿಸಿರುವ ಶೋಭಾಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಬಿಜೆಪಿ ಜಿಲ್ಲಾ ಮುಖಂಡ ಬಿ.ಎಸ್. ಜಗದೀಶ್ ತಿಳಿಸಿದ್ದಾರೆ.

## ಅ. 3ರಿಂದ ದುಗ್ಗಮ್ಮನ ದೇವಸ್ಥಾನದಲ್ಲಿ ದಸರಾ ಮಹೋತ್ಸವ



ದಾವಣಗೆರೆ, ಸೆ. 28- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಪುರೋಹಿತ ಶ್ರೀ ಕಡ್ಲೇಬಾಳು ಶ್ರೀಪಾದ್‌ಭಟ್ಟರ ಸಮ್ಮುಖದಲ್ಲಿ ಬರುವ ಅಕ್ಟೋಬರ್ 3 ರ ಗುರುವಾರ ಮುಂಜಾನೆ 6.30ಕ್ಕೆ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಾಗುವುದು.

ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್‌ನ ಗೌರವ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ, ಶ್ರೀಮತಿ ಪ್ರಭಾ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್, ಎಸ್.ಎಸ್. ಬಕ್ಕೇಶ್, ಎಸ್.ಎಸ್. ಗಣೇಶ್, ಎಸ್.ಬಿ. ಮುರುಗೇಶ್ ಇವರುಗಳು ಕುಟುಂಬ ಸಮೇತರಾಗಿ ದೀಪ ಬೆಳಗಿಸುವುದರೊಂದಿಗೆ 9 ದಿನಗಳ ಕಾಲ ನಡೆಯುವ ದಸರಾ ಮಹೋತ್ಸವಕ್ಕೆ ಚಾಲನೆ ನೀಡುವರು ಎಂದು ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

## ಪಾಕ್ : ಬುಡಕಟ್ಟು ಸಂಘರ್ಷದಲ್ಲಿ 50 ಸಾವು

ಪೆಷಾವರ, ಸೆ. 28 – ಪಾಕಿಸ್ತಾನದ ಪ್ರಕ್ಷುಬ್ಧಿತ ವಾಯುವ್ಯ ಕುರ್ರಮ್ ಜಿಲ್ಲೆಯಲ್ಲಿ ಎರಡು ಬುಡಕಟ್ಟು ಸಮುದಾಯ ಗಳ ನಡುವೆ ನಡೆದ ಘರ್ಷಣೆ ಯಲ್ಲಿ 50 ಜನ ಸಾವನ್ನಪ್ಪಿದ್ದಾರೆ ಹಾಗೂ 120ಕ್ಕೂ ಹೆಚ್ಚು ಜನ ಗಾಯಗೊಂಡಿದ್ದೆ. ಅಪ್ಪರ್ ಕುರ್ರಮ್ ಪ್ರದೇಶದಲ್ಲಿ ಜಮೀನು ವಿವಾದಕ್ಕೆ ಸಬಂಧಿಸಿದಂತೆ ಘರ್ಷಣೆ ನಡೆದಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.


COMMERCIAL SPACE FOR RENT
SHREE TOWER
Hadadi Road, Davangere. Karnataka
94483 31903, 77603 18229
Area : 8600 Sq.ft. (798.97 sq.m)

Prime Location, Transport Friendly


# ಪ್ರಗತಿಯತ್ತ ದಾವಣಗೆರೆ ಕ್ಲಬ್ : ಪ್ರಶಂಸೆ



ದಾವಣಗೆರೆ, ಸೆ. 28- ನಗರದ ದಾವಣಗೆರೆ ಕ್ಲಬ್ ನ 89 ನೇ ವಾರ್ಷಿಕ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಕ್ಲಬ್ಬಿನ ಆವರಣದಲ್ಲಿ ಕ್ಲಬ್ಬಿನ ಅಧ್ಯಕ್ಷ ಎ.ಬಿ. ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ಮೊನ್ನೆ ನಡೆಯಿತು.

ಇದೇ ವೇಳೆ 2024 ನೇ ಸಾಲಿನ ಲೆಕ್ಕಪತ್ರಗಳ ಮಂಡನೆ ಮಾಡಿ ಸರ್ವ ಸದಸ್ಯರ ಅನುಮೋದನೆ ಪಡೆಯಲಾಯಿತು. ದಾವಣಗೆರೆ ಕ್ಲಬ್ ಪ್ರಗತಿಯತ್ತ ದಾಪುಗಾಲು ಹಾಕುತ್ತಿರುವುದಕ್ಕೆ ಕ್ಲಬ್‌ನ ಹಿರಿಯ ಸದಸ್ಯರು, ಸರ್ವ ಸದಸ್ಯರು ಪ್ರಶಂಸೆ ವ್ಯಕ್ತಪಡಿಸಿದರು.

ಕ್ಲಬ್ ನ ಉಪಾಧ್ಯಕ್ಷ ಉಳವಯ್ಯ, ಸಹ ಕಾರ್ಯದರ್ಶಿ ಐನಳ್ಳಿ ಜಯದೀಪ್, ಖಜಾಂಚಿ ಪ್ರಶಾಂತ ಗುಪ್ತಾ ಎಸ್.ಕೆ., ನಿರ್ದೇಶಕರಾದ ಬೆಳ್ಳೂಡಿ ಸದಾನಂದ್, ಹೆಚ್.ವಿ. ರುದ್ರೇಶ್, ಬಾದಾಮಿ ಮಲ್ಲಿಕಾರ್ಜುನ್, ಬೇತೂರು ಅಭಿಷೇಕ್, ಬಿ.ಟಿ. ಸುಪುತ್ರ ಉಪಸ್ಥಿತರಿದ್ದರು.

ಹಿರಿಯ ಸದಸ್ಯರಾದ ಆರ್.ಎಂ. ಬಸವರಾಜ್, ಜಿ.ಎಸ್. ಪರಮೇಶ್ವರಗೌಡ್ರು, ಬಾದಾಮಿ ಕರಿಬಸಪ್ಪ, ಕೆ.ಬಿ. ನಾಗರಾಜ್ ಮತ್ತಿತರರು ಉಪಸ್ಥಿತರಿದ್ದು ಉಪಯುಕ್ತ ಸಲಹೆಗಳನ್ನು ನೀಡಿದರು.

## ನೇಪಾಳ : ಮಳೆ ಅವಘಡಗಳಲ್ಲಿ 66 ಸಾವು

ಕಠ್ಮಂಡು, ಸೆ. 28 – ನೇಪಾಳದಲ್ಲಿ ಧಾರಾಕಾರ ಮಳೆ ಸುರಿದ ಕಾರಣ ಪ್ರವಾಹ ಹಾಗೂ ಭೂಕುಸಿತ ಉಂಟಾಗಿ ಕನಿಷ್ಠ 66 ಜನ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುರುವಾರದಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ನೇಪಾಳದ ಕೆಲ ಭಾಗ ಜಲಾವೃತಗೊಂಡಿದೆ. ಮಳೆ ಸಂಬಂಧದ ಘಟನೆಗಳಲ್ಲಿ 60ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ದೇಶಾದ್ಯಂತ 79 ಜನ ಕಾಣೆಯಾಗಿದ್ದಾರೆ. ದೇಶದ 63 ಕಡೆಗಳಲ್ಲಿ ಹೆದ್ದಾರಿಗಳಲ್ಲಿ ಸಂಚಾರಕ್ಕೆ ಅಡ್ಡಿಯಾಗಿದೆ.


ಹಾರ್ದಿಕ ಅಭಿನಂದನೆಗಳು

ದಾವಣಗೆರೆ ಮಹಾನಗರ ಪಾಲಿಕೆ ನೂತನ ಮೇಯರ್ ಆಗಿ ಆಯ್ಕೆಯಾಗಿರುವ
ಕೆ. ಚಮನ್‌ಸಾಬ್
ಅವರಿಗೆ ಹಾರ್ದಿಕ ಅಭಿನಂದನೆಗಳು.
ಡಾ. ದಾದಾಪೀರ್ ನವಿಲೇಹಾಳ್
ನಿವೃತ್ತ ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.
ಚಮನ್‌ಸಾಬ್ ಅಂಗಡಿ
ವಕೀಲರು, ಕಕ್ಕರಗೊಳ್ಳ
ಡಾ. ಚಮನ್‌ಸಾಬ್ ಎಂ.
ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜು, ದಾವಣಗೆರೆ




ಆಲೂರು ಗ್ರಾಮದ ಸಾವಪ್ಪ ಎಸ್. ನಾರಪ್ಪ ನಿಧನ

ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆ, 6ನೇ ಕ್ರಾಸ್ ವಾಸಿ ಆಲೂರು ಗ್ರಾಮದ
ಸಾವಪ್ಪ ಎಸ್. ನಾರಪ್ಪ
VISL, ನಿವೃತ್ತ ಇಂಜಿನಿಯರ್ ಇವರು ದಿನಾಂಕ 28.9.2024ರ ಶನಿವಾರ ತಡರಾತ್ರಿ 12.35ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 89 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ 29.9.2024ರ ಭಾನುವಾರ ಮಧ್ಯಾಹ್ನ 12 ರವರೆಗೆ ದಾವಣಗೆರೆ ಸಿದ್ದವೀರಪ್ಪ ಬಡಾವಣೆ 6ನೇ ಕ್ರಾಸ್ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಅಂತ್ಯಕ್ರಿಯೆಯನ್ನು 2 ಗಂಟೆಗೆ ಸ್ವಗ್ರಾಮ ದಾವಣಗೆರೆ ತಾಲ್ಲೂಕು ಆಲೂರು ಗ್ರಾಮದ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬದವರು, ಮೊ : 9844501366



ಹೃತ್ಪೂರ್ವಕ ಅಭಿನಂದನೆಗಳು

ದಾವಣಗೆರೆ ಮಹಾನಗರ ಪಾಲಿಕೆ ಮೇಯರ್ ಆಗಿ ಆಯ್ಕೆಯಾಗಿರುವ 14ನೇ ವಾರ್ಡಿನ ಪಾಲಿಕೆ ಸದಸ್ಯರು ಹಾಗೂ ನಮ್ಮ ಭಾವನವರಾದ
ಶ್ರೀ ಕೆ. ಚಮನ್‌ಸಾಬ್
ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ರಿಯಾಜ್ ಅಹಮ್ಮದ್
ಮಾಲೀಕರು, ಝೈದ್ ಟ್ರೇಡರ್ಸ್

ಮೊಹಮ್ಮದ್ ಜೈದ್
ಮಾಲೀಕರು, ಆರ್.ಆರ್. ಟ್ರೇಡರ್ಸ್
ಹಾಗೂ ಬಂಧು-ಮಿತ್ರರು, ಕೆ.ಆರ್. ರಸ್ತೆ, ದಾವಣಗೆರೆ.


# ನಗರದ ಧೋಬಿ ಘಾಟ್‌ಗೆ ಬಟ್ಟೆ ಒಗೆಯುವ ಯಂತ್ರ ಮಂಜೂರು



ದಾವಣಗೆರೆ, ಸೆ. 28- ನಗರದ ಧೋಬಿ ಘಾಟ್‌ಗೆ ಬಟ್ಟೆ ಒಗೆಯುವ ಯಂತ್ರಗಳನ್ನು ಕರ್ನಾಟಕ ಸರ್ಕಾರದಿಂದ ಮಂಜೂರು ಮಾಡಲಾಗಿದೆ.

ಜಿಲ್ಲಾ ಮಡಿವಾಳ ಮಾಚಿದೇವ ಸಂಘ ಮಾಡಿಕೊಂಡ ಮನವಿಗೆ ಸ್ಪಂದಿಸಿದ ಗಣಿ ಮತ್ತು ಭೂ ವಿಜ್ಞಾನ ಮತ್ತು ತೋಟಗಾರಿಕಾ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಆದೇಶದ ಮೇರೆಗೆ ಬಟ್ಟೆ ಒಗೆಯುವ ಯಂತ್ರಗಳನ್ನು ಮಂಜೂರು ಮಾಡಲಾಗಿದ್ದು, ನಾಡಿದ್ದು ದಿನಾಂಕ 30ರ ಸೋಮವಾರ ನಗರದ ಮಡಿಕಟ್ಟೆಗೆ ಬಟ್ಟೆ ಒಗೆಯುವ ಯಂತ್ರಗಳು ಬಂದು ತಲುಪುಲಿವೆ.

ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಧೋಬಿ ಘಾಟಿಗೆ ಭೇಟಿ ನೀಡಿ ಅಲ್ಲಿನ ಅಧ್ಯಕ್ಷ ಬೆಳ್ಳಿ ನಾಗರಾಜ್ ಮತ್ತು ಪದಾಧಿಕಾರಿಗಳಿಂದ ಯಂತ್ರಗಳ ನಿರ್ವಹಣೆ ಬಗ್ಗೆ ಮಾಹಿತಿ ಪಡೆದು ನಂತರ ಬಟ್ಟೆ ಒಗೆಯುವ ಯಂತ್ರಗಳ ಕಾರ್ಖಾನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲಾ ಸಂಘದ ಕಾರ್ಯಾಧ್ಯಕ್ಷ ಎಚ್.ಜಿ.ಉಮೇಶ್ ಆವರಗೆರೆ, ಉಪಾಧ್ಯಕ್ಷ ಪಿ. ಮಂಜುನಾಥ್, ಖಜಾಂಜಿ ಸುರೇಶ್ ಕೋಗುಂಡೆ, ನಿರ್ದೇಶಕರುಗಳಾದ ರುದ್ರೇಶ್ ದುರ್ಗಾ ಲಾಂಡ್ರಿ, ಬಿ ಅಜ್ಜಯ್ಯ,( ರತ್ನ ಡ್ರೈ ಕ್ಲೀನಿಂಗ್) ಸಿ. ಗುಡ್ಡಪ್ಪ, ಎಚ್. ದುಗ್ಗಪ್ಪ, ಎಂ. ಸುಭಾಷ್ (ಪವನ್ ಲಾಂಡ್ರಿ)ಉಪಸ್ಥಿತರಿದ್ದರು.

ಜಿಲ್ಲಾ ಮಡಿವಾಳ ಮಾಚಿದೇವ ಸಂಘದ ಅಧ್ಯಕ್ಷರಾದ ಎಂ.ನಾಗೇಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಓಂಕಾರಪ್ಪ, ಸಹ ಕಾರ್ಯದರ್ಶಿ ಆರ್.ಎನ್. ಧನಂಜಯ, ಹಾಗೂ ಸಂಘದ ಸರ್ವ ಪದಾಧಿಕಾರಿಗಳು ಮತ್ತು ಸಮಾಜ ಬಾಂಧವರು ಬಟ್ಟೆ ಒಗೆಯುವ ಯಂತ್ರಗಳನ್ನು ಮಂಜೂರು ಮಾಡಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದ್ದಾರೆ.


ನಂಜಪ್ಪ ಲೈಫ್ ಕೇರ್

ನಿಮ್ಮ ಹೃದಯ ಕೂಗುವ ಮೊದಲು ಅದನ್ನು ಗಮನಿಸಿ!
ನಂಜಪ್ಪ ಲೈಫ್ ಕೇರ್ ನಲ್ಲಿ ಪರಿಣಿತ ಹೃದಯ ತಜ್ಞರಿಂದ ಹೃದಯ ಸಂಬಂಧಿತ ಕಾಯಿಲೆಗಳನ್ನು ತಡೆಗಟ್ಟಲು ತಪಾಸಣೆ ಮತ್ತು ಆರೈಕೆಯೊಂದಿಗೆ ನಿಮ್ಮ ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳಿ
ವಿಶ್ವ ಹೃದಯ ದಿನ 29 ಸೆಪ್ಟೆಂಬರ್
ಗಾಡಿಕೊಪ್ಪ, ಸಾಗರ ರಸ್ತೆ, ಶಿವಮೊಗ್ಗ
08182-267300
ನಮ್ಮ ಹೃದಯದ ಆರೋಗ್ಯ ಪ್ಯಾಕೇಜ್ ಬಗ್ಗೆ ತಿಳಿಯಲು ಇಲ್ಲಿ ಸ್ಕ್ಯಾನ್ ಮಾಡಿ


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas